# ಅಖಿಲ ಭಾರತ ಪತ್ರಿಕೆ

## ಜುಲೈ 2020



# ಮನೋವೈಜ್ಞಾನಿಕ ಪರಿಪಕ್ವತೆ

ಬೆಲೆ : 15/-



ಉಜ್ವಲದ ಕಾಂತಿ–ಪ್ರಭೆ–ಮಿಂಚು–ಕ್ರಾಂತಿ–ಪ್ರಜ್ವಲಿತ ವರ್ಣ–ವರ್ಣ
ಆ ಕೆಂಪು–ನೀಲ–ಆ ಶ್ವೇತ ಶಾಂತ ಜೊತೆ ಸ್ಫಟಿಕ – ಅಗ್ನಿ ಸ್ವರ್ಣ
ತೇಜಾಗ್ನಿ ಕಣವು ಅವಕಾಶದಲ್ಲಿ ಆರ್ಣವದ ವಿಜಯ ಮಾಲೆ
ಮರೆಯಾದವೆಲ್ಲ ಕರಗುತಲಿ ತಮವು ಆಗಮಿಸೆ ಉದಯ–ಲೀಲೆ. ॥16॥

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ 'ಸಾವಿತ್ರಿ'; ದಳ 1 ರೇಣು 4 ಪುಟ 70)**

**ಅಖಿಲ ಭಾರತ ಪತ್ರಿಕೆ**
**ಜುಲೈ 2020**

ಸಂಪುಟ: 30 ಸಂಚಿಕೆ: 07

**ಪರಿವಿಡಿ**

# ಮನೋವೈಜ್ಞಾನಿಕ ಪರಿಪಕ್ವತೆ

ಪಂಚ ದಳದ ಪುಷ್ಪ

ಜಡತ್ವದಲ್ಲಿ ದೈವತ್ವದ ಆವಿಷ್ಕಾರ. – ಶ್ರೀ ಅರವಿಂದರು

**ಮನೋವೈಜ್ಞಾನಿಕ ಪರಿಪಕ್ವತೆ** 11
ಅನು: ಶ್ರೀ ಪುಟ್ಟು ಕುಲಕರ್ಣಿ

**ಸಾಧನೆಯ ಗುಣಗಳು** 25
**ಪ್ರಾಮಾಣಿಕತೆ** 27
ಅನು: ನಾಗಜ್ಯೋತಿ ಯಲಿವಾರ

**ಅಭೀಪ್ಸೆ** 29
**ಶರಣಾಗತಿ (ಸಮರ್ಪಣೆ)** 32
ಅನು: ಡಾ॥ ಮಹಾದೇವ ಸಕ್ರಿ

**ವಿಶ್ವಾಸ** 37
**ಅಸ್ತಿತ್ವ** 42
ಅನು: ಡಾ॥ ಬಲಭೀಮ ಭೀಡ

**ಭಕ್ತಿ** 45
**ಸರಳತೆ** 48
ಅನು: ಪ್ರೊ. ವೀರಭದ್ರಪ್ಪ ಕೆ.

**ಶ್ರೀ ಅರವಿಂದರು – ಶತಮಾನದ ನೋಟ** 52
(ಮುಂದುವರೆದ ಭಾಗ – 6)
– ಶ್ರೀ ನವನೀತ ರಾಮಚಂದ್ರರಾಯರು

**ಸಂಪಾದಕರು:**
ಶ್ರೀ ಪುಟ್ಟು ಕುಲಕರ್ಣಿ
ರಾಘವೇಂದ್ರ ಮಠದ ಹಿಂಭಾಗ,
ಗಿಬ್ ಸರ್ಕಲ್, ಹೆರವಟ್ಟ ರಸ್ತೆ,
ಕುಮಟಾ – 581 343.
ಫೋನ್: 94487 74920
editorabpbng@yahoo.com

**ಪರಿಶೀಲನಾ ಸಮಿತಿ**
ಡಾ॥ ಗುರುಲಿಂಗ ಕಾಪ್ಸೆ
ಡಾ॥ ಆರ್.ಕೆ. ಕುಲಕರ್ಣಿ

**ಪ್ರಕಾಶಕರು:**
ಡಾ॥ ಅಜಿತ್ ಸಬ್ನೀಸ್
ಅಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ,
ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು:**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.
ಫೋನ್: 080 – 2244 9882
http://abp.sirinudi.org

**ಡಿ.ಟಿ.ಪಿ.:**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ:**
ಶೇಷಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

## ಸಂಪಾದಕರ ಟಿಪ್ಪಣಿ

ಯೋಗವೆನ್ನುವದು ಕೇವಲ ತಂತ್ರಗಳಿಗಾಗಲಿ ಅಥವಾ ವಿನ್ಯಾಸಗಳಿಗಾಗಲಿ ಅಷ್ಟೊಂದು ಪ್ರಾಮುಖ್ಯತೆಯನ್ನು ಕೊಟ್ಟಿಲ್ಲ. ಆದರೆ ಈ ರೀತಿಯ ದೃಷ್ಟಿಕೋನಗಳು ಆ ಪ್ರಕ್ರಿಯೆಗಳ ಬಗೆಗೆ ಹೇಳುತ್ತಿವೆ. ಶ್ರೀಮಾತೆಯ ಶಕ್ತಿಯು ಕಾರ್ಯ ಮಾಡುತ್ತಿರುವ ಸಲುವಾಗಿಯೇ ಇವು ಅಸ್ತಿತ್ವದಲ್ಲಿ ಇವೆ. ಜೊತೆಜೊತೆಗೆ ಅದರ ಕಾರ್ಯತತ್ಪರತೆಯನ್ನೂ ಅಡ್ಡಿಪಡಿಸುತ್ತಿರುವ ದೃಷ್ಟಿಕೋನಗಳೂ ಉಂಟು.

ಪೂರ್ಣಯೋಗಕ್ಕೆ ಅತ್ಯಗತ್ಯವಾಗಿರುವ ನಮ್ಮ ಮನೋವೈಜ್ಞಾನಿಕದ (ಸೈಕಾಲಾಜಿಕಲ್) ಕೆಲವು ದೃಷ್ಟಿಕೋನಗಳ ಕುರಿತು ಈ ಸಂಚಿಕೆಯಲ್ಲಿ ವಿವೇಚಿಸಲಾಗಿದೆ [ಎಐಎಮ್]

*

## ಸಂಪಾದಕೀಯ

### ವಿಜ್ಞಾನಘನ–ಸತ್ತೆ

[ಆಧುನಿಕ ಭಾಷಾ ವ್ಯವಸ್ಥೆಯಲ್ಲಿ "ವಿಜ್ಞಾನ" ಶಬ್ದವು ಕೇವಲ ಭೌತಿಕ ಜಗತ್ತಿಗೆ ಮಾತ್ರ ತನ್ನ ಸಂಶೋಧನೆಗಳ ಸಾರವನ್ನು ನಿಗದಿಗೊಳಿಸಿಕೊಂಡಂತೆ ಇದೆ. ಆದರೆ ಬ್ರಹ್ಮಾಂಡದ ಸಂರಚನಾ ವ್ಯವಸ್ಥೆಯಲ್ಲಿ ಈ ವಿಜ್ಞಾನ ಶಬ್ದವು ಕೇವಲ ಒಂದೇ ಆಯಾಮವನ್ನು ಪ್ರತಿನಿಧಿಸುತ್ತಿರುವದರಿಂದಾಗಿ, ವಿಜ್ಞಾನಕ್ಕೂ ಮತ್ತು ತತ್ತ್ವಜ್ಞಾನಕ್ಕೂ ಸಮಂಜಸ ವಿನಿಮಯಗಳು ನಡೆಯುತ್ತಿಲ್ಲ. ಆದರೆ ಭಾರತೀಯ ತತ್ತ್ವಶಾಸ್ತ್ರದಲ್ಲಿ ಈ "ವಿಜ್ಞಾನ'ವನ್ನು ಕೇವಲ ಭೌತಿಕ ಜೀವನಕ್ಕೆ ಮಾತ್ರ ಸೀಮಿತಗೊಳಿಸದೆ, ಇಡೀ ಬ್ರಹ್ಮಾಂಡದ ಸಂರಚನೆಯೂ ಸಹಿತ ಮಾನವನ ಸಂರಚನೆಯಂತೆಯೇ ಇದೆ ಎನ್ನವುದನ್ನು ಅಭಿವ್ಯಕ್ತಗೊಳಿಸಲು ಸಾಮ್ರಾಜ್ಯಂ ಎನ್ನುವದನ್ನು ಮತ್ತೂ ವಿಸ್ತರಿಸಿ "ವೈರಾಜ್ಯಂ" ಎಂದಂತೆ, ವಿಜ್ಞಾನವನ್ನೂ ಸಹಿತ "ವಿಜ್ಞಾನಘನ–ಸತ್ತೆ" ಎಂದೇ ಅಭಿವ್ಯಕ್ತಿಸಿದ್ದಾರೆ. ಅದರ ವಿವರಣೆಯನ್ನು ಶ್ರೀ ಅರವಿಂದರು ತಮ್ಮ "ಲೈಫ್ ಡಿವೈನ್" ಗ್ರಂಥದಲ್ಲಿ ವಿವರವಾಗಿ ವಿವೇಚಿಸಿದ್ದಾರೆ. ಈ ಸಂಚಿಕೆಯಲ್ಲಿ ಮನೋವೈಜ್ಞಾನಿಕ ಹಂತದ ವಿವಿಧ ಆಯಾಮಗಳ ಹಿನ್ನಲೆಯಲ್ಲಿ, ಚಿತ್ತದ ವಿಕಸನದ ಪಥದಲ್ಲಿ ಸಾಗಿದ ವಿವರಗಳ ಹಿನ್ನೆಲೆಯಲ್ಲಿ ಈ ಲೇಖನ.]

"ಸತ್ಯದ ಪರಿಪೂರ್ಣ ಪಥವೊಂದು ಅವತರಣಗೊಂಡು ಬಂದು, ಅಸ್ತಿತ್ವ ಪಡೆದುಕೊಂಡು, ನಮ್ಮ (ಮಾನವನ) ವಿಕಸನದ ಪಯಣವನ್ನು ತಮದ ದಂಡೆಯಿಂದ ಜ್ಯೋತಿಯ ತೀರದತ್ತ ಒಯ್ಯಲು ಸಹಕರಿಸುತ್ತದೆ. " – [ಋಗ್ವೇದ; 1–46–11]

ಓ ಋತ–ಚೇತನವೇ, ವಾಸ್ತವ –ಸತ್ಯದಲ್ಲಿ ಚೈತನ್ಯವಾಗಿ ನೆಲೆಸು; ಸತ್ಯವು ಸರ್ವ ಮುಖಗಳನ್ನೂ ಪ್ರಕಾಶನಗೊಳಿಸುವಂತಾಗಲಿ – [ಋಗ್ವೇದ 5–12–2]

ಓ ಅಗ್ನಿಯ ಜ್ವಾಲೆಯೇ, ಓ ಸೋಮರಸವೇ ನಿಮ್ಮ ಬಲವೇ ಚಿತ್ತಾಗಿ ರೂಪಾಂತರಗೊಂಡಿದೆ; ನೀವೇ ಏಕಮೇವ ಜ್ಯೋತಿಯನ್ನು ಸರ್ವರಿಗಾಗಿಯೂ ಶೋಧಿಸಿದ್ದೀರಿ – [ಋಗ್ವೇದ; 1–93–4]

ಪರಿಶುಭ್ರ ಶ್ವೇತ ಮತ್ತು ವಿರಾಟ್ ವಿಸ್ತಾರತ್ವದಲ್ಲಿ ಎರಡು ಆಯಾಮ–ಗಳಲ್ಲಿರುವವಳು, ಪರಿಣಾಮವಾಗಿಯೆ ಅನುಸರಿಸಿಕೊಂಡು, ಋತದ ಪಥವನ್ನು

ತದ್ಗತವಾಗಿರಿಸಿಕೊಂಡ ಹಾಗೂ ಎಂದಿಗೂ ಅದರ ನಿರ್ದೇಶ್ಯಗಳನ್ನು ಕುಂಠಿತ–ಗೊಳಿಸದವಳು, ಸರ್ವವನೂ ಬಲ್ಲ ಸರ್ವಜ್ಞೆಯಂತೆ.. [ಋಗ್ವೇದ; 5–80–4]

ಸತ್ಯದ ಮೂಲಕವೇ ಅವರು ಋತವನ್ನು ಸಾಕ್ಷಾತ್ಕರಿಸಿಕೊಂಡರು. ಅದು ಬಲದಲ್ಲಿ, ತ್ಯಾಗದಲ್ಲಿ, ಮತ್ತು ಪರಮಾತಿ ಪರಮ ಊರ್ಧ್ವದ ಈ ತರದಲ್ಲಿಯೂ ಸಹಿತ.. [ಋಗ್ವೇದ; 5–15–2]

ಓ ಅಮೃತತ್ವವೇ, ಋತದ ನಿಯತಿಯಲ್ಲಿಯೇ ನೀನು ಈ ಮರ್ತ್ಯ ಜೀವನದಲ್ಲಿ ಕಲೆಯಾಗಿ, ಅವಿನಾಶಿಯಾಗಿ, ಸಚ್ಚಿದಾನಂದ ಸೌಂದರ್ಯದ ಭೂಮವಾಗಿದ್ದೀಯ; ಇದೇ ಸತ್ಯದಿಂದಲೇ ಅವನೂ ಜನಿಸುತ್ತಾನೆ; ವಿಕಾಸಗೊಳ್ಳುತ್ತಾನೆ. ಪ್ರಜಾಪತಿ, ದೇವಶೀರ್ಷ , ವಾಸ್ತವ ಸತ್ಯ ಮತ್ತು ಅನಂತ ವ್ಯಾಪ್ತತ್ವ ಜನಿಸುತ್ತವೆ. – [ಋ. 9–110–4 ಮತ್ತು 108–8]

ನಮ್ಮ ಚಿಂತನದಲ್ಲಿ, ನಮ್ಮ ಮನೋವ್ಯಾಪಾರದ ವಿಕಸನದ ಮೂಲಕ ಅತಿಮಾನಸದ ಹಂತದ ಆಚೆ ಆಚೆ ಸಾಗುತ್ತ ಆ ಅತಿಮಾನಸದ ಹಂತದ ವಿಕಸನದಲ್ಲಿ ಇರುವಾಗ, ಬಹುತೇಕವಾಗಿ ಇದು ಸಾಧ್ಯವೇ ಇಲ್ಲವೇನೋ ಎನ್ನುವಂತಹ ಅವಸ್ಥೆಯಲ್ಲಿ ತೊಂದರೆಯನ್ನು ಎದುರಿಸುತ್ತೇವೆ. ನಾವೀಗ ಈ ದಿಸೆಯಲ್ಲಿಯೇ ಸಾಗಿ, ಅತಿಮಾನಸದ ಅಥವಾ ವಿಜ್ಞಾನ ಘನಸತ್ತೆಯ ಅಸ್ತಿತ್ವವಿರುವ ಬಗೆಗೆ ನಿರ್ದಿಷ್ಟವಾದ ವಿಚಾರವೊಂದನ್ನು ರೂಪಣೆಗೊಳಿಸಬೇಕಿದೆ. ಜೊತೆಜೊತೆಗೆ ಈ ವಿಜ್ಞಾನ ಘನಸತ್ತೆಯ ವಿಕಸನದ ಪ್ರಕ್ರಿಯೆಯು ಅಜ್ಞಾನದ ಅಂಧಕಾರದಲ್ಲಿಯೇ ಸಿಲುಕಿ ಕ್ಲೇಶಗೊಳ್ಳುತ್ತಿರುವ ಬಗೆಗೂ ನಿರೂಪಣೆಗಳನ್ನು ರೂಪಿಸಿಕೊಳ್ಳಬೇಕಿದೆ.

ನಮ್ಮ ಬೋಧಾತೀತ ಮನಸ್ಸು (Sublimited Mind) ಈ ಪರಮಾಂತಿಕ ಗಡಿಯನ್ನು (ರೇಖೆಯನ್ನು) ಮೀರುವ ಮೂಲಕವೇ ನಮ್ಮ ಚಿತ್ತು (ಚೇತನವು) ಗೋಳದ ವ್ಯಾಪ್ತಿಯನ್ನು ಮೀರಿ ಚಲಿಸಬೇಕಾಗುತ್ತದೆ. ಸ್ವಭಾವಜನ್ಯವಾದ ಕ್ರಿಯೆಗಳನ್ನು ವರ್ಧಿಸುತ್ತಾ, ಲೌಕಿಕದ ಯಾವುದೇ ಬಂಧನಕ್ಕೆ ಸಿಲುಕದೇ, ಮಾನಸಿಕ, ಊಹಾತ್ಮಕ ಭಾವಗಳಿಗೆ ಸಿಲುಕದೇ, ಮತ್ತು ಅವೇ ಜ್ಞಾನವೆನ್ನುವ ಭ್ರಮೆಗೂ ಒಳಗಾಗದಂತೆ ಸಾಗಬೇಕಿದೆ. ಇದು ಅತ್ಯಂತ ಪ್ರಮಾಣಭೂತವಾಗಿ ಸಾಕ್ಷಿಯಾಗಿರಬೇಕಾದ ಅಂಶವಾಗಿದೆ. ಈ ಅಧಿಮಾನಸ ಗುಣವೇ ದೈವೀ ಸ್ವಭಾವ (ಪ್ರಕೃತಿಯ) ಮತ್ತು ದೈವತ್ವದ ಅನುಭವವನ್ನು ಅನುಭವಿಸುವಲ್ಲಿ , ಪಡೆಯುವಲ್ಲಿ ಮತ್ತು ಪರಿಪೂರ್ಣವಾಗಿ ಸಮ್ಮಿಲಿತವಾಗುವಲ್ಲಿ ಅತ್ಯಾವಶ್ಯವಾಗಿರುತ್ತದೆ.

ಜೊತೆಜೊತೆಗೆ ಇದು ತನ್ನಲ್ಲಿಯೇ ಅಂತರ್ಗತಗೊಳಿಸಿಕೊಂಡ ವಿಷಯವೆಂದರೆ, ಅದೂ ವಿಕಾಸಾತ್ಮಕವಾದ ತತ್ವಗಳ ಅತಿಶಯತೆಯ ಗುಣದಿಂದಾಗಿ, ಬದಲಾವಣೆಯ ಪ್ರಕ್ರಿಯೆಗೆ ಒಳಪಡಲು ತನ್ನನ್ನು ತಾನು ನಿಬಂಧನೆಗೊಳಿಸಿಕೊಂಡಿರುವ ಗುಣದಿಂದಾಗಿ, ಈ ಸಾಂಸಾರಿಕ ಪ್ರಕೃತಿಯನ್ನು (ಭೌತಿಕ ವ್ಯವಸ್ಥೆಯನ್ನು) ಪರಿಪಕ್ವ ದೈವೀ ನೆಲೆಯಲ್ಲಿ ಅನುಷ್ಠಾನಗೊಳಸಿಕೊಳ್ಳುವ ಸಲುವಾಗಿ, ಎಲ್ಲಕ್ಕಿಂತ ಮಿಗಿಲಾಗಿ – ಇವೆಲ್ಲವೂ ನಮ್ಮ ಲೌಕಿಕದ ವ್ಯವಹಾರಗಳ ಮೂಲಕವೇ ನಮ್ಮ ವಿಕಾಸ ಎನ್ನುವ ಹಂತದಲ್ಲಿಯೇ ಪರಿಗಣಿಸಲ್ಪಡಬೇಕಾಗುತ್ತದೆ.

ಈ ಹಂತದಲ್ಲಿ ನಮ್ಮ ಲೌಕಿಕ ವ್ಯವಹಾರಗಳ ಮೂಲಕ ಉದ್ಭವಗೊಳ್ಳುವ ಅನುಭವಗಳಲ್ಲಿ, ನಮ್ಮ ವಿಕಾಸದ ಹಂತದಲ್ಲಿ ಪರಿಗಣಿಸಲ್ಪಡಬೇಕಾಗುತ್ತದೆ. ಆ ಮೂಲಕ ಈ ಘಟನೆಗಳಲ್ಲಿ ಕೆಲವನ್ನಾದರೂ ದಿವ್ಯತ್ವದೆಡೆಗೆ ರೂಪಾಂತರ–ಗೊಳಿಸಬೇಕಾಗುತ್ತದೆ. ಈ ಮೂಲಕ ಅಪರಿಪೂರ್ಣತೆಯನ್ನು ಮತ್ತು ಕಣ್ಮರೆಯಾಗುವ (ಕಾಣದಂತೆ ಅಡಗಿರುವ)ದನ್ನು ಸಹಿತ ಅಷ್ಟೇ ಸೃಜನಾತ್ಮಕವಾಗಿ ನಿರಾಕರಿಸುವ ಮೂಲಕ, ದಿವ್ಯಸತ್ಯದ ಎಡೆಗೆ ಮತ್ತು ಅನಂತ್ಯದ ಎಡೆಗೆ ತಲುಪಬಹುದಾಗಿದೆ. ಆದರೆ ಇವೆಲ್ಲವೂ ಸಾಮಾನ್ಯವಾದ ಸೂತ್ರಗಳಾಗಿವೆ. ಇವು ಯಾವುದೇ ಮಹತ್ವಪೂರ್ಣ ವಿಚಾರವನ್ನು ಪ್ರಚೋದಿಸುವದಿಲ್ಲ. ಬದಲಾವಣೆಗೆ ಸಹಕಾರಿಯೂ ಆಗಿರುವದಿಲ್ಲ. ನಮ್ಮಲ್ಲಿರುವ ಸರ್ವೇ ಸಾಮಾನ್ಯವಾದ ಊಹೆ ಅಥವಾ ಕಲ್ಪನೆ ಅಥವಾ ದೈವೀ ನೆಲೆಯ ಘಟನೆಗಳ ಸೃಷ್ಟಿ ಮತ್ತು ಲೌಕಿಕ ಬದುಕಿನ (Mundane) ವಸ್ತುಗಳಾಗಲೀ ಇವೆಲ್ಲ ಮಾನಸಿಕ ಸೃಷ್ಟಿಗಳಾಗಿವೆ. ಆದರೆ ವಿಜ್ಞಾನಮಯ (Gnostic) ಪರಿವರ್ತನೆ ಎಂದರೆ, ಇಲ್ಲಿ ವಿಕಾಸದ ಕ್ರಿಯೆಯು ಚಿತ್ತದ ಪರಮೋಚ್ಚ ನೆಲೆಯ ಮತ್ತು ಚಿತ್ತದ ನಿಸರ್ಗ ಸಹಜವಾದ ಮೌಲಿಕ ವೃತ್ತಿ(ವರ್ತನ)ಗಳಿಂದ ಮತ್ತು ನಿಗದಿಗೊಳಿಸಲ್ಪಟ್ಟ (ವಿಧಿ–ವಿಧಾನಗಳಿಂದ) ಮತ್ತು ಮನಸ್ಸಿನ ಪ್ರಜ್ಞಾನ ಹಂತದ (Cognition) ರೂಪಗಳಿಂದ ನಿರ್ಮಿತಿಗೊಂಡಿದ್ದು, ದೀರ್ಘಕಾಲೀನವಾಗಿ ಲಭ್ಯವಾಗುವದಿಲ್ಲ. ಏಕೆಂದರೆ, ಇದು ಮನೋಚಿಂತನಕ್ಕೆ ಅರ್ಥೈಸಿಕೊಳ್ಳಲು ಕಠಿಣವಾಗಿರುತ್ತದೆ ಅಥವಾ ಅತಿಮಾನಸೀಯ ಗುಣವನ್ನು ವಿವರಿಸಲು ಅಶಕ್ಯವಾಗಿರುತ್ತದೆ.

ಮನೋ ಗುಣವು (ಮಾನಸ ವೃತ್ತಿ) ಮತ್ತು ಮನೋ ಚಿಂತನಗಳು ಸಾಂತದ ಚಿತ್ತದ ಮೇಲೆ ಆಧಾರಿತವಾಗಿರುತ್ತವೆ. ಅತಿಮಾನಸಿಕ – ಗುಣವು ಚೇತನದ ಸೂಕ್ಷ್ಮಾತಿಸೂಕ್ಷ್ಮವಾದ ಬೀಜರೂಪದಲ್ಲಿರುತ್ತದೆ, ಮತ್ತು ಅನಂತದ ಶಕ್ತಿಯೂ ಆಗಿರುತ್ತದೆ. ಅತಿಮಾನಸ (ಉನ್ಮನೀ) ಹಂತದ ಪ್ರಕೃತಿಯು ಸರ್ವಸ್ವವನ್ನೂ

ದೃಷ್ಟಿಸುವ – ಅಂದರೆ ವ್ಯಷ್ಟಿಯ ಅಸ್ಮಿತೆಯನ್ನೂ ಸಮಷ್ಠಿಯ ಸ್ವರೂಪವನ್ನೂ ಮತ್ತು ಇವೆಲ್ಲವೂ ಏಕರೂಪಿಯಾಗಿ ಅದ್ವೈತವಾಗಿ ಇರುವದನ್ನು ಕಾಣುತ್ತದೆ (ದರ್ಶಿಸುತ್ತದೆ). ಅಪಾರ ವೈವಿಧ್ಯತೆ, ಪುನರ್–ರೂಪಧಾರಣೆ, ಗುಣಿತಗೊಂಡು ಅಗಣಿತವಾಗುತ್ತಿರುವ ಕ್ರಿಯೆ, ಮನೋಭೂಮಿಕೆಗೆ ಬಲವಾದ ವಿರೋಧಾ ಭಾಸಗಳಂತೆ ತೋರುತ್ತಿರುವ ಸರ್ವಸ್ವವೇ ಆಗಿದ್ದರೂ, ಆ ಜ್ಯೋತಿರ್ಮಯ ಪ್ರಕಾಶದಲ್ಲಿಯೇ 'ಒಂದಾಗಿ' ಕಾಣುತ್ತದೆ. ಇದರ ಕೃತುಶಕ್ತಿ, ಚಿಂತನಗಳು, ಆತ್ಮಾಭಿಲಾಷೆ–ಬಯಕೆಗಳು, ಅನುಭವಗಳು, ಸಂವೇದನೆಗಳೆಲ್ಲವೂ ಆದಿಮ ಬಿಂದುವಿನಿಂದ ವಿಭಾಗಗೊಂಡ ರೂಪಗಳಾಗಿಯೆ ತೋರುತ್ತವೆ. ಹೀಗಾಗಿ ಇವೆಲ್ಲವೂ ಆಂತರ್ಯದಲ್ಲಿ, ಆ ಪರಮದೇಕೈಕದಲ್ಲಿಯೇ ನೆಲೆಗೊಂಡಿರುವದು ಸಾಕ್ಷಾತ್ಕಾರಗೊಳ್ಳುತ್ತದೆ. ಯಾವಾಗ ಈ ಅದ್ವೈತವು (Oneness) ಅನುಭವಕ್ಕೆ ಬರುವದೋ, ಆಗಲೂ ಅದು ಕೆಲವೊಂದು ಸೀಮಿತ ಮತ್ತು ವಿಭಿನ್ನ ನೆಲೆಗಳಲ್ಲಿಯೇ ಆಧಾರವಾಗಿರುತ್ತದೆ.

ಆದರೆ ಈ ಉನ್ಮನೀ–ಮನೋಸ್ಥಿತಿಯ (ಅತಿಮಾನಸೀಯ ಹಂತ) ದಿವ್ಯ ಜೀವನವು ಮಾನವ ಜೀವನದ ಸಾರಭೂತವಾಗಿರುತ್ತದೆ; ಇದೊಂದು ಸ್ವತಃಸ್ಫುರಣಗೊಂಡ ಹಾಗೂ ಅಂತರ್ನಿಹಿತವಾದ ಏಕತೆಯಾಗಿರುತ್ತದೆ. ಹೀಗಾಗಿ, ಮನಸ್ಸಿಗೆ, ಜೀವನದಲ್ಲಿ ಅತಿಮಾನಸ ಹಂತದ ಬದಲಾವಣೆಯು – ವಿಭಾಗಗಳಲ್ಲಿ ರೂಪುಗೊಂಡು ಆವಿರ್ಭವಿಸುತ್ತದೆ. ಆದರೆ, ಜೀವನದ ಕರ್ಮಗಳ ಅನುಷ್ಠಾನದ ಸಂದರ್ಭಗಳಲ್ಲಿ ಹೇಗೆ ಆವಿರ್ಭವಿಸುತ್ತದೆ ಮತ್ತು ಯಾವ ರೂಪು ತಳೆದು ವ್ಯಕ್ತಿಯೋರ್ವನ ಅಥವಾ ಸಮಷ್ಠಿಯ ವ್ಯವಸ್ಥೆಯಲ್ಲಿ ಪ್ರಕಟಗೊಳ್ಳುತ್ತದೆ ಎನ್ನುವದರ ಬಗೆಗಿನ ವಿವರಗಳನ್ನು ಊಹಿಸುವದು ಅಷ್ಟೊಂದು ಸುಲಭ ಸಾಧ್ಯವಲ್ಲ. ಈ ಅತಿಮಾನಸ ಹಂತದಲ್ಲಿ "ಸರ್ವಸ್ವವೂ" ದೃಷ್ಟವಾಗುತ್ತದೆ. ಅಂದರೆ, ಏಕತ್ವದ ಹಿನ್ನೆಲೆಯಲ್ಲಿಯೇ ಅನೇಕತ್ವದ ಅಥವಾ ವ್ಯಷ್ಟಿಯ ಕೇಂದ್ರದಲ್ಲಿಯೆ ಸಮಷ್ಠಿಯೂ ರೂಪಿತಗೊಂಡಿರುವ ಸಂಗತಿಗಳನ್ನು, ಜೊತೆಗೆ ಗುಣಿತಗೊಂಡು ವೈವಿಧ್ಯತೆಯಲ್ಲಿ ರೂಪಾಂತರಗೊಳ್ಳುತ್ತಿರುವ ಸಂಗತಿಗಳನ್ನು, ಮತ್ತೆ ಯಾವುದು ಮನಸ್ಸಿಗೆ ಬಲವಾದ ವಿರೋಧಾಭಾಸವೆಂದು ಭಾಸವಾಗುತ್ತದೆಯೊ ಅಂತಹ ಸಂಗತಿಗಳಿಗೂ, ಎಲ್ಲವೂ ಈ "ಏಕ"ತ್ವದಲ್ಲಿಯೇ ಪ್ರಕಟಗೊಳ್ಳುತ್ತವೆ. ಇದರ ಕೃತುಶಕ್ತಿ, ಭಾವನೆಗಳು, ಸಂವೇದನೆಗಳು ಸಹಿತ ಈ ಏಕತ್ವದಿಂದಲೇ ಸಂಯೋಜನೆಗೊಳಿಸಲ್ಪಟ್ಟಿರುತ್ತವೆ. ಇವುಗಳನ್ನು ಆಧರಿಸಿಯೇ ಕರ್ಮಗಳು/ಕಾರ್ಯಗಳು ರೂಪುಗೊಳ್ಳುತ್ತವೆ.

ಇದಕ್ಕೆ ವ್ಯತಿರಿಕ್ತವಾಗಿ, ಮನೋಪ್ರಕೃತಿಯು (Mental Nature) ಆಯಾ ವಿಭಾಗಗಳ ಹಂತದಲ್ಲಿ, ಪ್ರಾರಂಭಿಕ ಹಂತದಲ್ಲಿ ಯೋಚಿಸುತ್ತದೆ; ಗಮನಿಸುತ್ತದೆ; ಇಚ್ಛಿಸುತ್ತದೆ; ಸಂವೇದನೆಯನ್ನು ಕಾಣುತ್ತದೆ. ಒಟ್ಟಿನಲ್ಲಿ ಇವೆಲ್ಲವುಗಳೂ ಕ್ರೋಢೀಕೃತವಾದ ಸಂಯೋಜನೆಯಾಗಿ "ಏಕತ್ವ"(Unity)ದ ಬಗೆಗೆ ಅರಿವು ಪ್ರಾಪ್ತವಾಗುತ್ತದೆ. ಇದು ಆ ಆಧಾರದಲ್ಲಿಯೇ ಕ್ರಿಯಾಪ್ರವೃತ್ತವಾಗಿರುತ್ತದೆ. ಆದರೆ ಅತಿಮಾನಸದ – ಉನ್ಮನೀ ಮನೋಭಾವದ – (Supermental) ಹಂತದಲ್ಲಿ, "ದಿವ್ಯ ಜೀವನ", ಸ್ವತಃಸ್ಫುರಣ ಮತ್ತು ಅಂತರ್ನಿಹಿತವಾದ ಏಕತೆಯ ಜೀವನವು ಮೂಲಭೂತ ತತ್ತ್ವವಾಗಿ ಇರಬೇಕಾಗುತ್ತದೆ. ಜೀವನದ ಕರ್ಮಗಳಲ್ಲಿ – ಅವುಗಳ ಭಾಗಗಳಲ್ಲಿ – ಅತಿಮಾನಸ ಹಂತದ ಯಾವ ಬದಲಾವಣೆಗಳು ಮತ್ತು ಬಾಹ್ಯ ನಡವಳಿಕೆಗಳು ಅಥವಾ ರೂಪಣೆಗಾಗಿ ಯಾವ ಆಕಾರಗಳು ನಿರ್ಧರಿತಗೊಂಡು, ಅದು ವೈಯಕ್ತಿಕವಾಗಲೀ ಅಥವಾ ಸಮಷ್ಠಿಯ ವ್ಯವಸ್ಥೆಯಲ್ಲಾಗಲೀ ಪ್ರಮುಖವಾಗಿ ಪಾತ್ರ ವಹಿಸುತ್ತವೆ ಎನ್ನುವದರ ವಿವರಗಳನ್ನು ಮನಸ್ಸಿಗೆ ಗ್ರಹಿಸಲು ಸಾಧ್ಯವಾಗುವದಿಲ್ಲ.

ಮನಸ್ಸಿಗೆ ಪ್ರಜ್ಞಾನೀತಿಯ ಅಥವಾ ಕೌಶಲ್ಯದ ಅಥವಾ ತರ್ಕದ ಮತ್ತು ಆಯ್ಕೆಯ ಮೂಲಕ ಅಥವಾ ಮಾನಸಿಕ–ಪ್ರವೃತ್ತಿ (ವಾಸನಾ ಪ್ರೀತಿ) ಅಥವಾ ಜೀವನಕ್ಕೆ ವಿಧೇಯ ಪ್ರವೃತ್ತಿಗಳ ಮೂಲಕ ಕಾರ್ಯರೂಪಕ್ಕೆ ತೊಡಗುತ್ತದೆ. ಆದರೆ (ಯಾವುದೇ ಸಂದರ್ಭದಲ್ಲೂ ಸಹಿತ) ಈ ಉನ್ಮನೀ ಮನೋಭಾವವು ಮನಃಕಲ್ಪಿತತನದಿಂದಾಗಲೀ (Mental Ideas) ಅಥವಾ ಅದರ ನಿಯಮ–ಗಳಿಂದಾಗಲೀ, ಅಥವಾ ಅದಕ್ಕೆ ಅಪರಾ ಪ್ರವೃತ್ತಿಯ ಪರವಶತೆಯಿಂದಾಗಲೀ ಕ್ರಿಯಾಪ್ರವೃತ್ತವಾಗಿರುವದಿಲ್ಲ. ಇದರ ಪ್ರತಿಯೊಂದು ಹೆಜ್ಜೆಯೂ, ಪ್ರಕೃತಿ ಸಹಜವಾದ ದೈವೀ ದೃಷ್ಟಿಯಿಂದ ಸಾಪೇಕ್ಷತೆಯಲ್ಲಿಯೇ ಮತ್ತು ಸತ್ಯದತ್ತ ಸರ್ವ ರೂಪಗಳೆಡೆಗೆ ನಿಖರವಾದ ತೀಕ್ಷ್ಣ ದೃಷ್ಟಿಕೋನದಿಂದ (ನಿಶಿತಮತಿಯಾಗಿ) ಮತ್ತು ಪ್ರತಿಯೊಂದೂ ಅಂಶಗಳ ಮೂಲಕವೇ ಸಂಶಯದಿಂದ ಪ್ರೇರಿತವಾಗಿರುತ್ತದೆ. ಹೀಗಾಗಿ ಇದು ಯಾವಾಗಲೂ ಸ್ವಭಾವನಿಹಿತವಾದ ಸಚ್ಚಿದಾನಂದದಿಂದಲೇ ಕಾರ್ಯೋನ್ಮುಖಗೊಳ್ಳುತ್ತದೆ.

ಇದು ಮಾನವನ ಅಂತರ್ನಿಹಿತವಾದ ಪರಮಾರ್ಥ ಸತ್ತೆಯಿಂದಲೇ ಕ್ರಿಯಾಪ್ರವೃತ್ತವಾಗಿರುತ್ತದೆಯೆ ವಿನಾ ಮನೋಚಿಂತನದ ಮೂಲಕ ಅಲ್ಲ; ವೃತ್ತಿಗಳಿಗಾಗಿ ರೂಪುಗೊಳಿಸಲ್ಪಟ್ಟಿರುವ ನಿಯಮಗಳಿಂದ ಅಲ್ಲ; ಅಥವಾ ರಚನಾತ್ಮಕ

ಚಿಂತನದಿಂದ ಅಥವಾ ವಿಷಯ ಗ್ರಹಣದ ಸಾಮರ್ಥ್ಯದ ಪ್ರಯುಕ್ತಿಯಿಂದಲೂ ಅಲ್ಲ. ಇದರ ಸಂಚಲನವು ಯಾವಾಗಲೂ ನಿರಾಮಯವಾದ ಪ್ರಶಾಂತತೆಯಲ್ಲಿ ಇರುತ್ತದೆ. ಹೀಗಾಗಿ ಇದು ಸ್ವಯಂ ಸತ್ಯವಾಗಿರುತ್ತದೆ. ಸ್ವತಃಸ್ಫುರಣಗೊಂಡಿರುತ್ತದೆ. ಜೊತೆಗೆ ಸುನಮ್ಯತೆಯಿಂದಲೂ ಕೂಡಿರುತ್ತದೆ.

ಚಿತ್–ಸತ್ತೆಯ ಆತ್ಯಂತಿಕ(ಕೇವಲ ಮಾತ್ರ)ವಾಗಿರುವ ರೂಪ–ಧಾತುವಿನಲ್ಲಿ ಸ್ಥಿತವಿರುವ ಈ ಸತ್ಯದ ಸೌಷಮ್ಯದ ಅಸ್ಮಿತೆಯಿಂದ, ವಿಶ್ವಾತ್ಮಕವಾದ ದೈವೀ ನೆಲೆಯ ರೂಪಧಾತುವಿನಿಂದ ಅಪರಿಹಾರ್ಯವಾಗಿ ದೂರವಾಗಿರುತ್ತದೆ, ಮತ್ತು, ದೃಢವಾಗಿ (ಸುಪರಿಚಿತವಾಗಿ) ಮತ್ತು ಈ ಮೂಲಕ ಸುನಿಶ್ಚಯವಾಗಿ ಸರ್ವಸ್ವವನ್ನೂ ಒಳಗೊಂಡ ಅದರದೇ ಅಸ್ಮಿತೆಯಾಗಿರುವ ಅಸ್ತಿತ್ವದ ಪ್ರತ್ಯಯ ಜ್ಞಾನದಲ್ಲಿರುತ್ತದೆ.

ಅತಿಮಾನಸ ಸ್ವಭಾವದ ಮಾನಸಿಕ ವ್ಯಾಖ್ಯಾನವು ಅತಿ ಅಮೂರ್ತವಾಗಿರುವ ಅದರ ಹಂತಗಳನ್ನು ಅಭಿವ್ಯಕ್ತಗೊಳಿಸುತ್ತದೆ, ಇಲ್ಲದಿದ್ದಲ್ಲಿ, ಅದು ವಾಸ್ತವದ ಸ್ಥಿತಿಗಿಂತ ಭಿನ್ನ ಸ್ವರೂಪದಲ್ಲಿಯೇ ನಿರ್ಮಿತಿಗೊಂಡಿರುವ ಕೆಲವು ಮಾನಸಿಕ ಆಕೃತಿಗಳನ್ನು (ಸಂಕೇತಗಳನ್ನು) ಕುರಿತು ಹೇಳುತ್ತಿದೆ. ಇವುಗಳನ್ನು ನೋಡಿದರೆ, ಸಾಧ್ಯವೇ ಇಲ್ಲವೇನೋ ಎನ್ನುವ ಭಾವ ಭಾಸವಾಗುತ್ತದೆ. ಆದ್ದರಿಂದ, ಅತಿಮಾನಸೀಯ ಹಂತದ ಅಸ್ತಿತ್ವವು ಏನನ್ನು ನಿರ್ದೇಶಿಸುತ್ತದೆ ಅಥವಾ ಪೂರ್ವಾನುಭೂತಿಯನ್ನು ಮನಸ್ಸಿಗೆ ಹೇಗೆ ನೀಡುತ್ತಿದೆ, ಅದು ಹೇಗೆ ಕ್ರಿಯಾಪ್ರವೃತ್ತವಾಗಿರುತ್ತದೆ ಎನ್ನುವದನ್ನು ಕಾಣಬಹುದು.

ಹೀಗಾಗಿ, ಇಲ್ಲಿ, ಮಾನಸಿಕ ಚಿಂತನಗಳು (ಮನೋ ಚಿಂತನಗಳು) ಮತ್ತು ರೂಪಾಂತರಣಗಳು ಏನನ್ನೂ ನಿರ್ಧರಿಸುತ್ತಿಲ್ಲ, ಅಥವಾ ಯಾವುದೇ ಅಮುಖ್ಯವಾದ ವ್ಯಾಖ್ಯೆಯನ್ನಾಗಲೀ (ನಿರ್ವಚನವನ್ನಾಗಲೀ) ಇಲ್ಲವೇ ನಿರ್ಧರಣೆಯ ಹಂತಕ್ಕೂ ತಲುಪುವದಿಲ್ಲ. ಏಕೆಂದರೆ, ಇವು ಅತಿಮಾನಸ ಪ್ರಕೃತಿಯ ಅಂತರ್–ದರ್ಶನಕ್ಕೆ ಮತ್ತು ಅದರ ನಿಯಮ(ಋತ)ಗಳಿಗೆ ಸಾಕಷ್ಟು ಸಮೀಪದಲ್ಲಿ ಇರುವದಿಲ್ಲ. ಅದೇ ಅವಧಿಯಲ್ಲಿ ನಿಗಮನ ಪದ್ಧತಿಯ (Deduction) [ಸಾಮಾನ್ಯ ಮೂಲತತ್ವದಿಂದ ನಿರ್ದಿಷ್ಟ ವಿಷಯದ ಕಡೆಗೆ ಅಧ್ಯಯನದ] ಮೂಲಕ ಈ ಸ್ವಭಾವದ (ಗುಣದ) ವ್ಯತ್ಯಾಸವನ್ನು ಊಹಿಸಬಹುದಾಗಿದೆ. ಈ ಊಹೆಯು ಕನಿಷ್ಠ ಪಕ್ಷ ಅಧಿಮಾನಸ(Over mind)ದಿಂದ ಅತಿಮಾನಸ(Super mind)ದತ್ತ ಇರುವ

ಪಥವನ್ನು, ಅಥವಾ, ಆ ಪಥದ ಬಗೆಗೆ ಒಂದು ಸಾಮಾನ್ಯ ನಿರೂಪಣೆಯನ್ನು ರೂಪಿಸಬಹುದಾಗಿದೆ. ಮತ್ತು, ಈ ವಿಷಯದ ಕುರಿತಾಗಿ ವಿಕಾಸಾತ್ಮವಾಗಿಯೇ ಅಸ್ತಿತ್ವದಲ್ಲಿರುವ ಉನ್ಮನೀ ಮನೋಭಾವ(Evolutionery Supramental Existance)ದ ಹಂತದ ಕುರಿತು ನಮ್ಮ ಸಲುವಾಗಿ ಒಂದು ಸಂದೇಹಾತ್ಮಕವಾದ ಅಭಿಪ್ರಾಯವನ್ನಾದರೂ ನಿರ್ಮಿಸಿಕೊಳ್ಳಬಹುದಾಗಿದೆ.

ಈ ಪಥವು ಒಂದು ಪ್ರಮುಖ ಹಂತವಾಗಿದ್ದು, ಇಲ್ಲಿಯೇ ಅತಿಮಾನಸ ವಿಜ್ಞಾನವು (Supermind gnosis) ಅಧಿಮಾನಸ(Overmind)ದಿಂದ ವಿಕಸನದ ಪ್ರಕ್ರಿಯೆಯ ಮುಂದಾಳತ್ವವನ್ನು ವಹಿಸಿಕೊಂಡು, ಜೊತೆಗೆ ತನ್ನದೇ ಆದ ಗುಣಾತ್ಮಕ ಆವಿರ್ಭಾವದ ಪ್ರಾಥಮಿಕ ಆಧಾರಗಳನ್ನು ರಚಿಸಿಕೊಳ್ಳ–ಬಹುದಾಗಿದೆ. ಆದರೆ ಇದೇ ಸಮಯದಲ್ಲಿ ಅಜ್ಞಾನದ ಹಂತದಿಂದ ಪ್ರಾರಂಭಗೊಳ್ಳುವ ವಿಕಾಸದೆಡೆಯ ಬಿಂದುವು ಉತ್ತರೋತ್ತರವಾಗಿ ಜ್ಞಾನದಲ್ಲಿ ವಿಕಾಸವಾಗುವದರ ಕಡೆಗೆ ದೀರ್ಘಾವಧಿಯ ಸ್ಥಿತ್ಯಂತರಕ್ಕೆ ಸಿದ್ಧವಾಗಬೇಕಿದೆ.

ಇದು ನಿರ್ವಿಶೇಷತ್ವದ ಅಧಿಮಾನಸ(Absolute Supermind)ದ ಮತ್ತು ಉನ್ಮನೀ ಮನೋಭಾವದ (Supramental being) ಅಸ್ತಿತ್ವಗಳು ತಮ್ಮದೇ ನಿಗದಿತ ಸ್ಥಾನದಲ್ಲಿ ಇರುವ ಹಂತದಲ್ಲಿ, ಪರಿಪೂರ್ಣ ಆತ್ಮಜ್ಞಾನದಲ್ಲಿ (Self- knowledge) ಮತ್ತು ಆತ್ಮ ಸಾಫಲ್ಯದಲ್ಲಿ (Self fulfilled) ಅದೂ ಕ್ಷಿಪ್ರವಾಗಿ ಲಭ್ಯವಾಗಿ, ಋತಚೇತನದ ಅಸ್ತಿತ್ವವನ್ನು ಸಾಕ್ಷಾತ್ಕರಿಸಲು, ದರ್ಶನ ಗ್ರಂಥವಾಗಿ – ಅಕ್ಷರದ ಸಾಕ್ಷಾತ್ಕಾರವಾಗಿ – ಇರುತ್ತದೆ. ಹೀಗಾಗಿ ಇದು ಉನ್ಮನೀ ಮನೋಭಾವದ (Supramental) ಸಾಕ್ಷಾತ್ಕಾರದ ವಿಷಯವಾಗಿದ್ದು, ಇದೇ ಲೋಕಗಳ ವಿಕಾಸನಕ್ಕೆ ಅವತರಣಗೊಂಡು, ಪ್ರವೇಶಿಸಿ, ವಿಕಾಸದ ಹಂತದಲ್ಲಿ ತನ್ನನ್ನು ತಾನೇ ಅಲ್ಲಿ ರೂಪುಗೊಳಿಸಿಕೊಳ್ಳುತ್ತದೆ. ಜೊತೆಗೆ, ಲೌಕಿಕ ಸ್ವಭಾವದಲ್ಲಿ ಇರುವ ವಿಜ್ಞಾನದ ಬಲಗಳನ್ನು ಪ್ರಕಾಶನಗೊಳಿಸುತ್ತದೆ. ಇದು ಸರ್ವೇಸಾಮಾನ್ಯವಾಗಿ ಎಲ್ಲ ಲೌಕಿಕ–ಜೀವನದ ಮೂಲತತ್ವವೇ ಆಗಿದೆ. ಪಾರ್ಥಿವ–ತತ್ವದ ಅಸ್ತಿತ್ವದ ಪ್ರಕ್ರಿಯೆಯು ಸತ್–ಸ್ವರೂಪದಲ್ಲಿ ಇರುತ್ತದೆ. ಇದು ಪ್ರಪ್ರಥಮದ ಹಂತದಲ್ಲಿ ತನ್ನಲ್ಲಿ ತಾನೇ ಈ ವಿಷಯವನ್ನು ತಮೋಭಿಭೂತವಾಗಿ, ಅಸ್ಪಷ್ಟತೆಯಿಂದ, ನಿಷ್ಪ್ರಭೆಯಿಂದ (Opaque) ಕೂಡಿರುತ್ತದೆ. [ಪಿಪಿಕೆ]



ಇದೋ! ಇಲ್ಲಿವೆ ನೋಡಿ ಪುಷ್ಪಗಳು ಮತ್ತು ಆಶೀರ್ವಾದಗಳೂ ಸಹಿತ ಇಲ್ಲಿವೆ! ಇಲ್ಲಿರುವದೆಲ್ಲವೂ ದಿವ್ಯಪ್ರೇಮದ ಮಂದಸ್ಮಿತವೇ ಆಗಿದೆ!. ಇದು ಯಾವುದೇ ಆದ್ಯತೆಯನ್ನು ಹೊಂದಿಲ್ಲ. ಇಲ್ಲಿರುವದೆಲ್ಲವೂ ಉದಾರವಾಗಿರುವ ಪ್ರವಾಹದಂತಿದೆ. ಅದು ಕೊಡಮಾಡಿದ ಅದ್ಭುತಾದ್ಭುತದ ಕೊಡುಗೆಗಳನ್ನು ಮತ್ತೆ ಮರಳಿ ಪಡೆಯುವ ಪ್ರವಾಹವಾಗಿದ್ದು, ಇದು ಅದೇ ದಿಕ್ಕಿನತ್ತಲೇ ಪ್ರವಹಿಸುತ್ತಿದೆ!

ಅವಳ ಬಾಹುಗಳು ಭಾವಪರವಶತೆಯಲ್ಲಿ ವಿಶಾಲವಾಗಿ ತೆರೆದುಕೊಂಡಿವೆ. ಆ ಶಾಶ್ವತದ ಶ್ರೀಮಾತೆಯು ತನ್ನ ಪವಿತ್ರ–ಪ್ರೇಮದ ಧಾರೆಯನ್ನು ಸಿಂಪಡಿಸುತ್ತಾಳೆ!

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 1/367 – ಶ್ರೀಮಾತೆ**

# ಮನೋವೈಜ್ಞಾನಿಕ ಪರಿಪಕ್ವತೆ

– ಅನುವಾದ: ಪುಟ್ಟು ಕುಲಕರ್ಣಿ

**ಐದು ಗುಣಗಳು**

*ಶ್ರೀಮಾತೆಯು ತಮ್ಮ ಕೈಯಲ್ಲಿ ಹಿಡಿದುಕೊಂಡಿದ್ದ ಚಂಪಕಮಾಲೆ ಪುಷ್ಪವನ್ನು ತೋರಿಸುತ್ತಾ, ಆ ಪುಷ್ಪಕ್ಕೆ ಅವರು "ಮನೋವೈಜ್ಞಾನಿಕ ಪರಿಪೂರ್ಣತೆ" ಎಂದೇ ಹೆಸರನ್ನು ಇತ್ತಿದ್ದರು.*

ಅದರ ಒಂದೊಂದು ದಳವನ್ನೂ ಎಣಿಸುತ್ತಾ – ಒಂದು, ಎರಡು, ಮೂರು, ನಾಲ್ಕು, ಐದು – ಹೀಗೆ ಎಣಿಸುತ್ತಾ, ಇವು ಐದೂ ಮನೋವೈಜ್ಞಾನಿಕ ಪರಿಪೂರ್ಣತೆಯ ಹಂತಗಳಾಗಿವೆ ಎಂದರು. ಹಾಗಾದರೆ ಈ ಐದು ಮನೋವೈಜ್ಞಾನಿಕ ಪರಿಪೂರ್ಣತೆಗಳು ಯಾವವು?

ಇವು ಪರಿವರ್ತಗೊಳ್ಳಬಲ್ಲವು. ಮತ್ತೆ ವಾಸ್ತವದಲ್ಲಿ ನಿಮಗೆ ರಹಸ್ಯವೊಂದನ್ನು ಹೇಳಬೇಕೆಂದರೆ, ಪ್ರತಿಬಾರಿಯೂ ನಾನು ಇವುಗಳನ್ನು ಕೆಲವರಿಗೆ ಕೊಟ್ಟಿದ್ದೇನೆ. ಆದರೆ ಯಾವುದೂ ಒಂದೇ ರೀತಿಯಲ್ಲಿರುವ ಅದೇ ರೀತಿಯಲ್ಲಿರುವ ಮನೋವೈಜ್ಞಾನಿಕ ಪರಿಪೂರ್ಣತೆಯಲ್ಲಿ ಇರಲಿಲ್ಲ. ಅದೆಲ್ಲವೂ ಆಯಾ ವ್ಯಕ್ತಿಯ ಬಯಕೆಗಳನ್ನು ಅವಲಂಬಿಸುತ್ತವೆ. ಒಂದೇ ವ್ಯಕ್ತಿಗೆ ಹಲವು ಬಾರಿ ಇವುಗಳನ್ನು ನೀಡಿದ್ದಾಗಲೂ ಸಹಿತ, ಹಲವು ಮನೋವೈಜ್ಞಾನಿಕ ಪರಿಪೂರ್ಣತೆಗಳೇ ಅಲ್ಲಿದ್ದವು; ಹೀಗಾಗಿ ಇಲ್ಲಿ ಸ್ಥಾಯಿತ್ವ ಇರುವದಿಲ್ಲ. ಆದರೆ ಪ್ರಪ್ರಥಮವಾಗಿ ಈ ಪುಷ್ಪವನ್ನು ಕೊಟ್ಟಾಗ ಅದಕ್ಕೆ "ಮನೋವೈಜ್ಞಾನಿಕ ಪರಿಪಕ್ವತೆ" (ಚಿತ್ತದ ಪರಿಪೂರ್ಣತೆ) ಎಂದೇ ಹೆಸರಿಸಲಾಗಿತ್ತು. ಈ ಸಂಗತಿಯನ್ನು ಗಮನಿಸಲೇಬೇಕು. ಆದರೆ ನನ್ನ ಅಭಿಪ್ರಾಯದ ಪ್ರಕಾರ, ಇದು ಯಾವಾಗಲೂ – ಸಲಿಲ ರೂಪದಲ್ಲಿದೆ – ಇದನ್ನು ನಾನು ಯಾವಾಗಲೂ ಹೇಳುತ್ತಿದ್ದೇನೆ. ಇದು ಆಯಾ ಸಂದರ್ಭ ಮತ್ತು ಆಯಾ ವ್ಯಕ್ತಿಯ ಆಯಾ ಸಮಯದ ಅಭಿಲಾಷೆಗಳನ್ನು ಅವಲಂಬಿಸಿದೆ. ಪ್ರಪ್ರಥಮ ಬಾರಿ ಅಲ್ಲಿ ಏನನ್ನು ಬಯಸಲಾಗಿತ್ತು ಎನ್ನುವದು ನನಗೀಗ ನೆನಪಿಲ್ಲ.

ಹೀಗಾಗಿ ಯಾರಾದರೂ ಈ ವಿಷಯವಾಗಿ ಅರಿತಿದ್ದಲ್ಲಿ, ಆ ವ್ಯಕ್ತಿಯು ನಮಗೆ ಅದನ್ನು ಹೇಳಬಹುದು. ಆಗ ನಾವೂ ಸಹಿತ ಅದನ್ನು ಹೋಲಿಕೆ ಮಾಡಲು ಸಾಧ್ಯವಾಗುತ್ತದೆ.

*'ಇದರ ಬಗೆಗೆ ನನಗೆ ಖಾತ್ರಿ ಇಲ್ಲ..'*

ನೀವು ಈ ವಿಷಯವಾಗಿ ನಿಶ್ಚಿತ ಅಭಿಪ್ರಾಯವನ್ನು ಹೊಂದಿಲ್ಲ ಎಂದಾಯಿತು. ಮತ್ತೆ ಬೇರೆ ಯಾರಾದರೂ ಇದರ ನೈಜತೆಯ ಬಗೆಗೆ ಹೇಳುತ್ತೀರಾ?

*ಅಭೀಪ್ಸೆ, ಭಕ್ತಿ, ಪ್ರಾಮಾಣಿಕತೆ ಮತ್ತು ವಿಶ್ವಾಸ.*

ಅಂದರೆ ಇವು ನಾಲ್ಕು ಮಾತ್ರ ಎಂದಾಯಿತು. ಮುಂದೆ....

*ಮುಂದಿನದು ಸಮರ್ಪಣೆ ಅಥವಾ ಶರಣಾಗತಿ,*

ಏನು? ಸಮರ್ಪಣೆಯೇ? ಬೇರೊಬ್ಬರು ಈ ವಿಷಯವಾಗಿ ಬೇರೆ ರೀತಿಯಲ್ಲಿಯೇ ಹೇಳಿದ್ದರು..

*ವಿಶ್ವಾಸ, ಪ್ರಾಮಾಣಿಕತೆ, ಅಭೀಪ್ಸೆ, ಭಕ್ತಿ, ಸಮರ್ಪಣೆ ..*

ಆದರೆ, ಅದು ಆ ವ್ಯಕ್ತಿ ಹೇಳಿದ್ದು ಮಾತ್ರ ತಾನೇ? ಎನ್ನುತ್ತಲೇ ಶ್ರೀಮಾತೆಯವರು ಶಿಷ್ಯರ ಕಡೆಗೆ ತಿರುಗಿ, ಕೆಲ ಸಮಯದ ಹಿಂದೆ ನೀನು "ವಿಶ್ವಾಸಪೂರ್ಣತೆ" ಎಂದು ಹೇಳಿದ್ದೆಯಲ್ಲವೇ?

*ಹೌದು, ನಾನು ಆವಾಗ ಆ ರೀತಿಯಲ್ಲಿಯೇ ಹೇಳಿದ್ದೆ, ಆದರೆ ಅದು ವಿಶ್ವಾಸಪೂರ್ಣತೆ ಅಲ್ಲ, ಅದು 'ವಿಶ್ವಾಸ'ವಾಗಿದೆ.*

ಹಾಗಾದರೆ ಅಲ್ಲಿ 'ವಿಶ್ವಾಸಪೂರ್ಣತೆ" ಏಕಿಲ್ಲ? ನಾನು ಆ ವಿಷಯವನ್ನು ಇಲ್ಲಿ ಹೇಳುತ್ತಿಲ್ಲ. ಏಕೆಂದರೆ, ನಾನು ಅದನ್ನು ಸ್ಮರಿಸಿಕೊಳ್ಳಲು ಇಷ್ಟಪಡುವದಿಲ್ಲ. ಯಾವುದು ಅತ್ಯಂತ ಪ್ರಾಮುಖ್ಯವಾಗಿರುತ್ತದೆಯೋ ಮತ್ತು ಉದಾತ್ತವಾಗಿರುತ್ತದೆಯೋ ಅದನ್ನು ಮಾತ್ರ ಬರೆದಿದ್ದೇನೆ. ಆದರೆ ಅದನ್ನು ಹಲವಾರು ವಿಧದಲ್ಲಿ ಪ್ರಸ್ತುತಪಡಿಸಬಹುದಾಗಿದೆ.

## ಪ್ರಾಮಾಣಿಕತೆ ಅಥವಾ ಪಾರದರ್ಶಕತೆ

ಯಾವುದೇ ಸಂದರ್ಭದಲ್ಲಾಗಲೀ, ಎಲ್ಲೆಲ್ಲಿ ಏನೇನು ರೂಪಿತಗೊಂಡಿದೆಯೋ, ಈ ಎಲ್ಲ ಸಂಯೋಗಗಳನ್ನು ನಾನು ಯಾರು ಯಾರಿಗೆ ಕೊಟ್ಟಿದ್ದೇನೆಯೋ, ಅಲ್ಲೆಲ್ಲವೂ ಸಹಿತ ಈ ಪ್ರಪ್ರಥಮವಾಗಿ ಇರುವದು 'ಪ್ರಾಮಾಣಿಕೆ'ಯಾಗಿದೆ. ಇದಲ್ಲದೇ ಯಾರೂ ಹೆಜ್ಜೆ ಇಡಲೂ ಸಾಧ್ಯವಾಗುವದಿಲ್ಲ. ಹೀಗಾಗಿ 'ಇದೇ' ಪ್ರಥಮ ವಿಷಯವಾಗಿದೆ. ಏಕೆಂದರೆ ಇದು ಯಾವಾಗಲೂ ಅಸ್ತಿತ್ವದಲ್ಲಿರಬೇಕಾಗಿದೆ.

ಆದರೆ ಇದನ್ನು ಮತ್ತೊಂದು ಶಬ್ದದಿಂದ ರೂಪಾಂತರಗೊಳಿಸಬಹುದು. ಒಂದು ವೇಳೆ ನೀವು ಇಚ್ಛಿಸುವದೇ ಆದಲ್ಲಿ, ಅದು "ಪಾರದರ್ಶಕತೆ" ಎಂತಲೂ ಆಗಬಹುದು. ಈಗ ಈ ಶಬ್ದದ ವಿವರಣೆಯನ್ನು ಗಮನಿಸುವಾ;

ನನ್ನೆದುರು ಓರ್ವ ವ್ಯಕ್ತಿ ಇದ್ದಾನೆ. ನಾನು ಅವನನ್ನು ಗಮನಿಸುತ್ತಿದ್ದೇನೆ. ನಾನು ಅವನ ಕಣ್ಣುಗಳನ್ನೇ ನೋಡುತ್ತಿದ್ದೇನೆ. ಒಂದು ವೇಳೆ ಆ ವ್ಯಕ್ತಿ 'ಪ್ರಾಮಾಣಿಕ' ಅಥವಾ 'ಪಾರದರ್ಶಕ'ನಾಗಿದ್ದಲ್ಲಿ. ಅವನ ಕಣ್ಣಿನ ಮೂಲಕವೇ ಅವನ ಅಂತರಂಗವನ್ನು ಪ್ರವೇಶಿಸಿ, ಅವನ ಆತ್ಮವನ್ನು ಅತ್ಯಂತ ಸ್ಪಷ್ಟವಾಗಿ ಕಾಣಬಲ್ಲೆ. ಆದರೆ, ಇಂತಹ ಪ್ರಸಂಗ ಅತೀ ಅಪರೂಪ. ಇದು ಅಪರೂಪದ ಅನುಭವವೇ ಆಗಿದ್ದರೂ, ಮತ್ತೆ ಕೆಲವರನ್ನು ಇದೇ ರೀತಿ ದೃಷ್ಟಿಸಿದಾಗ, ಅಲ್ಲೆಲ್ಲ ಕೊಂಚ ಮೋಡ ಮುಸುಕಿದ ಹಾಗಿತ್ತು. ಆದರೂ ನಾನು ಅವರನ್ನು ದೃಷ್ಟಿಸುವದನ್ನೇ ಮುಂದುವರೆಸಿ, ಅಲ್ಲೊಂದು ಪರದೆ ಇರುವುದನ್ನು ಗಮನಿಸದ್ದೆ, ಒಮ್ಮೊಮ್ಮೆ ಅದು ದಪ್ಪ ಗೋಡೆಯಂತೆ ಕಾಣುತ್ತದೆ. ಅದು ಬಹುತೇಕ ಕಪ್ಪು ವರ್ಣದಿಂದ ಕೂಡಿದೆ. ಆದರೂ ಇವೆಲ್ಲವನ್ನೂ ದಾಟಿಕೊಂಡೇ ಹೋಗಬೇಕಾಗಿದೆ. ಅಲ್ಲಿಯೇ ರಂಧ್ರಗಳನ್ನು ಸೃಷ್ಟಿಸಿಕೊಂಡು ಮಾರ್ಗ ಮಾಡಿಕೊಳ್ಳಬೇಕಿದೆ. ಇಷ್ಟೆಲ್ಲ ಮಾಡಿಕೊಂಡ ಮೇಲೆ, ಕೊನೆ ಕ್ಷಣದಲ್ಲಿ, ಅಲ್ಲಿರುವ ಕಂಚಿನ ದಪ್ಪ ಗೋಡೆಯನ್ನು ಛೇದಿಸಿಕೊಂಡು ನಾನು ಸಾಗದೇ ಇರುವ ಕ್ಷಣವು ಎಂದಿಗೂ ಬರುವದಿಲ್ಲ ಎಂದು ನಾನು ಖಾತ್ರಿಯಾಗಿ ಹೇಳಲಾರೆ. ಆ ಮೂಲಕವೂ ನಾನು ಅವನ ಆತ್ಮವನ್ನು ಕಾಣುತ್ತೇನೆ ಎಂದೂ ಹೇಳಲಾರೆ. ಹೀಗಾಗಿ, ಇಂತಹ ವ್ಯಕ್ತಿ ಇದ್ದಲ್ಲಿ, ನಾನು, ಅವನೊಬ್ಬ ಪ್ರಾಮಾಣಿಕನಲ್ಲ ಎಂದೇ ಹೇಳಬೇಕಾಗುತ್ತದೆ. ಹೀಗೆಲ್ಲ ಇದ್ದಾಗಲೂ ಸಹಿತ ನಾನು ಹೇಳಬೇಕಾದ ಸಂಗತಿ ಎಂದರೆ, ಅವನು 'ಪಾರದರ್ಶಕ' ವ್ಯಕ್ತಿಯಲ್ಲ ಎಂದೇ ಗಟ್ಟಿಯಾಗಿಯೇ ಹೇಳಬೇಕಾಗುತ್ತದೆ. ಇದೇ ಪ್ರಪ್ರಥಮವಾಗಿ ಅರಿತಿರುವ ವಿಷಯವಾಗಬೇಕಿದೆ.

**ನಂಬಿಕೆ ಅಥವಾ ವಿಶ್ವಾಸ**

ಇನ್ನು ಎರಡನೆಯದಾಗಿ, ನೀವು ಮತ್ತೂ ಪ್ರಗತಿಯತ್ತ ಅನಿವಾರ್ಯವಾಗಿ ಸಾಗಬೇಕೆಂದು ಇದ್ದಲ್ಲಿ, ಇದು ಅತ್ಯಾವಶ್ಯವಾಗಿದೆ. ಇದು ನಂಬಿಕೆಯ ವಿಷಯ. ಇಲ್ಲವೇ ಇದನ್ನು ಇನ್ನೊಂದು ಶಬ್ದದಲ್ಲಿ ಹೇಳುವದಾದಲ್ಲಿ, ಅದು ಬಹುತೇಕವಾಗಿ

ಸೀಮಿತವಾಗಿದ್ದರೂ ಸಹಿತ, ಅಷ್ಟೇ ಮಹತ್ವದ್ದಾಗಿದೆ. ಏಕೆಂದರೆ, (ಇದು ಅನುಭವದ ಸಂಗತಿಯಾಗಿದೆ) – ಒಂದು ವೇಳೆ ನಿಮ್ಮ ವಿಶ್ವಾಸವು ಪರಿಪೂರ್ಣವಾಗಿ ದೈವತ್ವದಲ್ಲಿ ಇಲ್ಲದಿದ್ದಲ್ಲಿ, ಆಗ ನೀವು ನಂಬುಗೆಯನ್ನು ಹೊಂದಿದ್ದೇನೆ ಎನ್ನುವ ಹಂತದಲ್ಲಿ ಉಳಿಯುವ ಸಂದರ್ಭವಿರುತ್ತದೆ. ಮತ್ತೆ ದಿವ್ಯಶಕ್ತಿಯಲ್ಲಿ ಎಲ್ಲ ವಿಶ್ವಾಸವನ್ನೂ ಕಳೆದುಕೊಳ್ಳುವ ಸಂಭವವೂ ಇರುತ್ತದೆ. ಇಲ್ಲಿ ಮುಗ್ಗರಿಸಲೆಂದೇ ಮೂರು ಅಡೆತಡೆಗಳು ಇರುತ್ತವೆ.

ದೈವತ್ವದಲ್ಲಿ ಅವಿಚಲವಾದ ವಿಶ್ವಾಸವಿದೆ ಎಂದು ಯಾರು ಪರಿಗಣಿಸಿಕೊಂಡು ಮತ್ತೆ ಅದನ್ನೇ ಹೇಳುತ್ತಿದ್ದಾರೆಯೋ, ಅವರು ಹೇಳುತ್ತಿರುವ ಪ್ರಕಾರವಾಗಿಯೇ ನೋಡಿದರೆ, 'ಈ ಸರ್ವವನ್ನೂ ಘಟಿಸುವಂತೆ ಮಾಡುತ್ತಿರುವದೇ ಈ ದೈವತ್ವ; ನನ್ನಲ್ಲಿ ಏನೇನು ಘಟಿಸುತ್ತಿರುವದೋ, ಇವರಲ್ಲಿ ಏನೇನು ಘಟಿಸುತ್ತಿರುವದೋ ಮತ್ತು ಎಲ್ಲ ಕಡೆಗೂ ಘಟಿಸುತ್ತಿರುವದೆಲ್ಲವೂ, ಆ ದೈವತ್ವದ ಕಾರ್ಯವೇ ಆಗಿದೆ. ಇದನ್ನು ಈ ದೈವತ್ವ ಮಾತ್ರ ಮಾಡಬಲ್ಲುದು. ಒಂದೊಮ್ಮೆ ಈ ಮಾತನ್ನು ಸ್ವಲ್ಪ ತರ್ಕಬದ್ಧವಾಗಿಯೇ ಅನುಸರಿಸಿದಲ್ಲಿ, ಕೆಲವೇ ಸಮಯದಲ್ಲಿ ಅವರು ಆ ಸ್ಥಿತಿಯನ್ನು ದೂಷಿಸಲು ಪ್ರಾರಂಭಿಸುವರು. ಆಗ ಇದೇ ದೈವವನ್ನೇ 'ನಿಜವಾಗಿಯೂ ರಾಕ್ಷಸನ' ಹಾಗೆ, ಕ್ರೂರಿಯ ಹಾಗೆ ಮತ್ತು ಭಯಾನಕವಾಗಿಯೇ ಕಾಣುತ್ತಾರೆ. ಏಕೆಂದರೆ ಅವರಿಗೆ ವಿಶ್ವಾಸವಿಲ್ಲ!

ಮತ್ತೂ ಮುಂದುವರೆದು ಹೇಳುವದಾದಲ್ಲಿ, ಅವರು ವಿಶ್ವಾಸವನ್ನು ಹೊಂದಿದ್ದರೂ, ತಮ್ಮಷ್ಟಕ್ಕೆ ತಾವೇ ಹೇಳಿಕೊಳ್ಳುತ್ತಿರುವದೇನೆಂದರೆ, "ಆಯಿತು, ನಾನು ಈ ದೈವತ್ವದಲ್ಲಿ ವಿಶ್ವಾಸವನ್ನು ಹೊಂದಿದ್ದೇನೆ, ಆದರೆ ಈ ಜಗತ್ತು ಮೇಲ್ನೋಟಕ್ಕೆ ಮಾತ್ರ ಎಲ್ಲವೂ ಸರಿ ಇದ್ದಂತೆ ಕಾಣುತ್ತಿದೆ! ಪ್ರಮುಖ ಸಂಗತಿ ಏನೆಂದರೆ, ನಾನು ಎಷ್ಟೊಂದು ತೀವ್ರವಾಗಿ ಘಾಸಿಗೊಂಡಿದ್ದೇನೆ, ಇದು ನಡೆದಿರುವ ಘಟನೆಯಲ್ಲವೇ? ನಾನು ತುಂಬ ದುಃಖದಲ್ಲಿದ್ದೇನೆ, ಅದರಲ್ಲೂ ನನ್ನ ನೆರರೆಹೊರೆಯವರಿಗಿಂತ ಹೆಚ್ಚೇ ದುಃಖದಲ್ಲಿದ್ದೇನೆ – ಸುತ್ತುಮುತ್ತಲಿನವರಿಗಿಂತ ತಾನೇ ಹೆಚ್ಚು ದುಃಖಿತ ಎಂದುಕೊಳ್ಳುವದು ಸಾಮಾನ್ಯ ಸಂಗತಿಯಾಗಿದೆ. ಹೀಗಾಗಿಯೇ ಜೀವನವೂ ಕ್ರೂರಿಯಾಗಿದೆ. ಆದರೆ ದೈವತ್ವವು ಮಾತ್ರ ಸದಾ ಶುಭತ್ವದಲ್ಲಿಯೇ ಇರುತ್ತದೆ. ಅದು ಸರ್ವತ್ರವೂ ಲಭ್ಯವಿದೆ. ಅಷ್ಟೇ ಸೌಷಮ್ಯದಿಂದ ತುಂಬಿದೆ. ಹೀಗೆಲ್ಲಾ ಇರುವಾಗ ನಾನು ಮಾತ್ರ ಹೇಗೆ ಅಸಂತೋಷದಲ್ಲಿ ಇರಲು

ಸಾಧ್ಯ? ನೋವಿನಿಂದ ಶಕ್ತಿರಹಿತನಾಗಿದ್ದೇನೆ, ಇಲ್ಲವಾದಲ್ಲಿ ಅಷ್ಟೊಂದು ಒಳ್ಳೇಯದೇ ಆಗಿದ್ದಲ್ಲಿ ಆ ದೈವತ್ವವು ನನ್ನನ್ನು ಮಾತ್ರ ಏಕೆ ಇಷ್ಟೊಂದು ತೊಂದರೆಗೆ ಸಿಲುಕಿಸಿದೆ?" ಇದು ಎರಡನೆಯ ಅಡೆತಡೆಯ ವಿಷಯವಾಗಿದೆ.

ಮೂರನೇ ವಿಷಯವೆಂದರೆ, ಯಾರು ತಮ್ಮನ್ನು ಅತ್ಯಾಧುನಿಕರು ಅಥವಾ ಮೃದುಧೋರಣೆಯವರು ಎಂದು ತಮ್ಮನ್ನು ತಾವೇ ಕವಚಧಾರಿಗಳನ್ನಾಗಿಸಿ–ಕೊಂಡಿದ್ದಾರೆಯೋ, ಅವರೂ ಸಹಿತ ಹೇಳುತ್ತಿರುವದೇನೆಂದರೆ, "ನಿಜವಾಗಿಯೂ ಆ ದೈವತ್ವವು ನನ್ನನ್ನು ಕಡೆಗಣಿಸಿ ದೂರ ಎಸೆದಿದೆ, ನಾನು ಏತಕ್ಕೂ ಉಪಯೋಗವಿರದ ವ್ಯಕ್ತಿಯಾಗಿದ್ದೇನೆ, ಆ ದೈವವು ನನ್ನೊಡನೆ ಸಹಕರಿಸಿ ಏನನ್ನಾದರೂ ಮಾಡಿಸಬಹುದಿತ್ತು." ಆದರೆ ಇಲ್ಲಿ ಮುಖ್ಯವಾದ ಸಂಗತಿ ಏನೆಂದರೆ, "ಇದು ನನ್ನನ್ನು ಕಡೆಗಣಿಸಿದೆ, ನಾನು ವಿಶ್ವಾಸರಹಿತ ವ್ಯಕ್ತಿಯೆಂದೇ ಕಡೆಗಣಿಸಿದೆ."

ಹೀಗಿರುವದರಿಂದ, ಒಟ್ಟಿನಲ್ಲಿ ಯಾರು ಸಂಪೂರ್ಣವಾಗಿ ವಿಶ್ವಾಸವನ್ನು ಹೊಂದಿರುತ್ತಾರೆಯೋ ಮತ್ತು ಅದನ್ನು ಸಂಪೂರ್ಣವಾಗಿ ದೈವೀ ಕೃಪೆಯೆಂದು ಭಾವಿಸದಿದ್ದಲ್ಲಿ, ಅಲ್ಲಿ ತೊಂದರೆಗಳು ಸಹಜವಾಗಿಯೇ ಉದ್ಭವಿಸುತ್ತವೆ. ಹೀಗಾಗಿ ಇವೆರಡು ಅತ್ಯಾವಶ್ಯವಾಗಿವೆ.

## ಭಕ್ತಿ ಅಥವಾ ಕೃತಜ್ಞತೆ

ಈ ಸರಣಿಯಲ್ಲಿ "ಭಕ್ತಿ"ಯನ್ನೂ ಕಾಣಬಹುದು. ಹೌದು "ಭಕ್ತಿ"ಯನ್ನೂ ಕಾಣಬೇಕಾಗುವದು. ಇದು ಅತ್ಯಂತ ಸೂಕ್ತವಾಗಿರುವ ವಿಷಯವಾಗಿದೆ. ಆದರೆ ಹಲವು ವಿಷಯಗಳ ಸಂಗಡ ಇದು ಸಂಯೋಗಗೊಂಡಿದೆ. ಇವೆಲ್ಲವೂ ಹಲವು ತಪ್ಪುಗಳನ್ನು ಮಾಡಲು ಸಹಕರಿಸುತ್ತವೆ. ಇದರಿಂದ ಹೊರಬಂದು ಸಾಧನೆ ಮಾಡಲು ಬಹುತೇಕವಾಗಿ ಶ್ರಮಪಡಬೇಕಾಗುತ್ತದೆ.

ನೀನು ಭಕ್ತಿಯನ್ನು ಹೊಂದಿದ್ದೀಯಾ ಎಂದರೆ ನಿನ್ನಲ್ಲಿ ಅಹಂ ಇದೆ ಎಂದಾಯಿತು. ಹೀಗಾಗಿ ಈ ನಿನ್ನ ಅಹಂ, ನಿನ್ನಿಂದ ಭಕ್ತಿಗಿಂತ ಹೊರತಾದ ಹಲವು ಕಾರ್ಯಗಳನ್ನು ಮಾಡಿಸುತ್ತದೆ. ಅವೆಲ್ಲವೂ ಅತ್ಯುಗ್ರ ಅಹಂದಿಂದಲೇ ತುಂಬಿರುತ್ತವೆ. ಅದನ್ನು ಈ ರೀತಿಯಲ್ಲಿ ಹೇಳಬಹುದೇನೋ, ನೀನು ನಿನ್ನ

ವಿಷಯಕ್ಕೆ ಮಾತ್ರ ಯೋಚಿಸುವವನಾಗಿದ್ದೀಯಾ, ಪರರ ಬಗೆಗೆ ಕಿಂಚಿತ್ತೂ ಕಾಳಜಿ ಇಲ್ಲ, ಜಗತ್ತಿನ ಪರಿವೆಯೂ ಇಲ್ಲ, ಕಾರ್ಯದ ಬಗೆಗೆಂತೂ ಲಕ್ಷ್ಯವಿಲ್ಲ, ಏನನ್ನು ಮಾಡಬೇಕೆಂದಿತ್ತೋ ಮತ್ತು ಯಾವುದರ ಬಗೆಗೆ ಬದ್ಧತೆಯನ್ನು ಹೊಂದಬೇಕಿತ್ತೋ ಅಲ್ಲಿ ಆ ಬದ್ಧತೆಯನ್ನು ತೋರಲಿಲ್ಲ, – ಈ ಎಲ್ಲ ಹಿನ್ನೆಲೆಯಲ್ಲಿಯೂ ನೀನು ನಿನ್ನ "ಭಕ್ತಿ"ಯ ಕುರಿತು ಮಾತ್ರ ಚಿಂತನ ಮಾಡುತ್ತೀಯಾ. ಆದ್ದರಿಂದ ನೀನು ಅಹಂಕಾರದ ಪರಮಾವಧಿಯ ವ್ಯಕ್ತಿಯಾಗಿದ್ದೀಯಾ. ಹೀಗಾಗಿಯೇ ನೀನು ದೈವತ್ವದಿಂದ ಹೊರಗೇ ಉಳಿಯುವದನ್ನು ಬಯಸುತ್ತಿರುವೆ ಎಂದಾಯಿತು!

ನೀನು ಅಭಿಲಾಷೆಯಿಂದ ಆಶಿಸುತ್ತಿರುವ ಈ ದಿವ್ಯತ್ವವು ನಿನ್ನ ಈ ರೀತಿಯ ಭಕ್ತಿಗೆ ಪರಿಹಾರ ಕೊಡುವದಿಲ್ಲ. ಹೀಗಾಗಿಯೇ ನೀನು ಅಧಃಪತನಗೊಂಡು ಈ ಮೂರು ತೊಂದರೆಗಳಲ್ಲಿ ಸಿಲುಕಿಕೊಂಡಿರುವೆ. ನಾನೂ ಅದರ ಬಗೆಗೆ ಹೇಳುತ್ತಿರುವದು. ದೈವವು ಎಂದಿಗೂ ಕ್ರೂರವಾಗಿರುವದಿಲ್ಲ; ಅಷ್ಟೇ ಅಲ್ಲದೇ – ಇದರ ಬಗೆಗೆ ನಾವು ಹಲವಾರು ಸಂಗತಿಗಳನ್ನೂ ಕೇಳಿದ್ದೇವೆ, ಹಲವಾರು ವಿಷಯಗಳನ್ನು ಆಲಿಸದ್ದೇವೆ, ಹಲವಾರು ಕಥಾನಕಗಳೂ ಇವೆ. ತನ್ಮಯತೆಯಲ್ಲಿ ಭಕ್ತಿ ಭಾವವನ್ನು ಹೊಂದಿಯೂ ದೈವತ್ವವನ್ನು ಹೀಯಾಳಿಸಿದ ಕಥೆಗಳೂ ಇವೆ. ಅವರು ಹೀಯಾಳಿಸುತ್ತಿರುವದು ಏಕೆಂದರೆ, ಈ ದಿವ್ಯತೆಯು ಆ ವ್ಯಕ್ತಿಗೆ ಎಂದಿಗೂ ಸಮೀಪ ಬರಲಿಲ್ಲ ಎನ್ನುವ ವಿಷಯಕ್ಕಾಗಿ ಮಾತ್ರ. ಅಷ್ಟೇ ಅಲ್ಲದೇ ಕೃಪಾದೃಷ್ಟಿಯನ್ನೂ ಬೀರಲಿಲ್ಲ ಎನ್ನುವ ವಿಷಯಕ್ಕಾಗಿ ಇರುತ್ತದೆ. ಅವನು ಅದರಿಂದ ದೂರವೇ ಉಳಿಯುವದೂ ಅಲ್ಲದೇ, 'ಏಕೆ ನನ್ನನ್ನು ಈ ರೀತಿಯಲ್ಲಿ ತಿರಸ್ಕರಿಸುತ್ತಿದ್ದೀಯಾ? ನನ್ನನ್ನು ಮೇಲೇಳದಂತೆ ಏಕೆ ಮಾಡುತ್ತಿದ್ದೀಯಾ?' ಓ .. ರಾಕ್ಷಸ ಗುಣದ ದೈವವೇ... ಎಂದು ಹೇಳಲು ಅವರು ಧೈರ್ಯವನ್ನು ತೋರದಿದ್ದರೂ, ಆ ದಿಸೆಯಲ್ಲಿಯೇ ಅವರ ಯೋಚನೆ ಇರುತ್ತದೆ. ಅಥವಾ "ಓ! ನನ್ನನ್ನು ನಿನ್ನ ಕೃಪೆಯಿಂದ ದೂರವಿಡುವ ಪ್ರಮಾದ ಮಾಡುತ್ತಿದ್ದೇನೆ ಎಂದು ಉದ್ಗರಿಸುತ್ತಾರೆ". ಹೀಗಾಗಿಯೇ ಅವರು ಪತನದೆಡೆಗೇ ಸಾಗುತ್ತಾರೆ.

ಆದಾಗ್ಯೂ, ಈ ಭಕ್ತಿಯ ಸಂಗತಿಯೇ ಖಾಯಂ ಆಗಿ ಸಾಗುತ್ತಿರುವ ಮತ್ತೊಂದು ಸಂಚಲನವಿದೆ. ಅದೇ ಒಂದು ರೀತಿಯ "ಕೃತಜ್ಞತಾ" ಭಾವವಾಗಿದ್ದು, ಇಲ್ಲಿಯೂ ಆ ದೈವತ್ವವು ಅಸ್ತಿತ್ವದಲ್ಲಿರುತ್ತದೆ. ಈ ರೀತಿಯ ಅಪ್ರತಿಮ ಕೃತಜ್ಞತಾ

ಸಮರ್ಪಣೆಯು ನಿಮ್ಮಲ್ಲಿ ನಿಜವಾಗಿಯೂ ಉದಾತ್ತವಾದ ತೋಷವನ್ನು ಕೊಡುತ್ತದೆ; ಇಲ್ಲಿರುವ ಸಂಗತಿ ಎಂದರೆ, ತೋಷವು ಅಲ್ಲಿರುವ ದಿವ್ಯತೆಯದೇ ಆಗಿದೆ. ಅದು ಈ ವಿಶ್ವದಲ್ಲಿ ಇರುವ "ವೈಶ್ವಿಕ ದೈವತ್ವವೊಂದು ಇದ್ದು, ಅದರಂತೆ ಇರುತ್ತದೆ, ಅದು ನಾವು ಕಾಣುತ್ತಿರುವ ಹಾಗೇ ಭಯಾವಹವಾಗಿ ಇರುವದಿಲ್ಲ. ಆದರೆ ಅಲ್ಲಿ ದಿವ್ಯತೆಯು ಅಸ್ತಿತ್ವದಲ್ಲಿ ಇದ್ದೇ ಇರುತ್ತದೆ. ಹೀಗಾಗಿ ಪ್ರತಿಬಾರಿಯೂ, ಈ ಅಸ್ತಿತ್ವದಲ್ಲಿ ದಿವ್ಯತೆಯು ನೈಜ ಉದಾತ್ತತೆಯಿಂದಲೇ ಇರುವದನ್ನು ನೀವು ನೇರವಾಗಿ ಅಥವಾ ಪರೋಕ್ಷವಾಗಿ, ಎಂತಹದೇ ಸಣ್ಣ ಸಂಗತಿಗಳಿಂದಲೂ ಸಂಪರ್ಕಕ್ಕೆ ಬಂದಿದ್ದಲ್ಲಿ, ಆಗ ಹೃದಯವು ತಾನೇ ತಾನಾಗಿ ಆ ಸ್ಪಂದನದಿಂದ ತುಂಬಿಕೊಳ್ಳುತ್ತದೆ. ಅಪ್ರತಿಮ ಆಹ್ಲಾದಕರವು ಹೃದಯವನ್ನು ತುಂಬಿಕೊಳ್ಳುತ್ತದೆ. ಇಂತಹ ಕೃತಜ್ಞತಾ ಭಾವದಲ್ಲಿ ಸರ್ವ ವಿಷಯಗಳೂ ಅತ್ಯಂತ ಆಹ್ಲಾದಕರವಾದ ಭಾವವನ್ನೇ ಹೊಂದಿರುತ್ತವೆ."

ಕೃತಜ್ಞತೆಯಿಂದ ಲಭ್ಯವಾಗುವ ಸಂತೋಷಕ್ಕೆ ಸಮನಾದ ಬೇರೆ ಯಾವುದೇ ವಿಷಯವೂ ಇರುವದಿಲ್ಲ. ಪಕ್ಷಿಗಳ ಕಲರವವನ್ನು ಆಲಿಸಿದಾಗ, ಚಿತ್ತಾಕರ್ಷಕವಾದ ಪುಷ್ಪಗಳನ್ನು ನೋಡಿದಾಗ, ಮುಗ್ಧಮಗುವನ್ನು ಕಂಡಾಗ, ಜ್ಞಾನಪೂರ್ಣವಾದ ಲೇಖನವನ್ನು ಓದಿದಾಗ, ಅಸ್ತಮಿಸುತ್ತಿರುವ ಸೂರ್ಯನ ಹೊಂಗಿರಣಗಳನ್ನು ಕಂಡಾಗ, ಒಟ್ಟಿನಲ್ಲಿ ಇಂತಹ ಯಾವುದೇ ದೃಶ್ಯವಿರಲಿ, ಆ ಮನೋಭಾವ ನಿಮ್ಮಲ್ಲಿ ತಾನೇ ತಾನಾಗಿ ತಕ್ಷಣಕ್ಕೇ ಉದಿಸುತ್ತದೆ. ಈ ರೀತಿಯ ಭಾವನೆಯು – ಅದು ಹೃದಯಾಂತರಾಳದಿಂದಲೇ ಬಂದಿದ್ದು, ಅತ್ಯಂತ ಸಾಂದ್ರವೂ ಆಗಿದೆ – ಅದೆಲ್ಲವೂ ಆ ದಿವ್ಯತ್ವವನ್ನು ಆಕಾರಗೊಳಿಸುತ್ತಿರುವ ಘಟನೆಗಳಾಗಿವೆ. ಈ ಎಲ್ಲ ಕ್ರಿಯೆಗಳ ಹಿಂದೆಯೂ "ಏನೋ ಒಂದು" ಇದ್ದೇ ಇದೆ. ಅದೇ "ಆ ದೈವತ್ವ"ವಾಗಿರುತ್ತದೆ.

ಆದ್ದರಿಂದ ಕೃತಜ್ಞತೆಯಿಲ್ಲದ ಭಕ್ತಿಯನ್ನು ಅಪೂರ್ಣವೆಂದೇ ನಾನು ಕಾಣುತ್ತೇನೆ. ಈ ಕೃತಜ್ಞತೆಯು ಭಕ್ತಿಯೊಡನೆ ಆಗಮಿಸಬೇಕು.

## ಅಭೀಪ್ಸೆ ಅಥವಾ ಸ್ಥೈರ್ಯ

ಈ ಹಿಂದೆ ಒಂದು ಬಾರಿ 'ಸ್ಥೈರ್ಯದ' ಬಗೆಗೆ ಚರ್ಚಿಸಿದುದನ್ನು ಇಲ್ಲಿ ನೆನಪಿಸಿಕೊಳ್ಳುತ್ತೇನೆ. ಪರಿಪೂರ್ಣತೆಗಳಲ್ಲಿ ಸ್ಥೈರ್ಯವೂ ಒಂದಾಗಿದೆ; ಅದರ ಬಗೆಗೆ ಲೇಖನವನ್ನೂ ಸಹಿತ ಬರೆದಿರುವದನ್ನೂ ನೆನಪಿಸಿಕೊಳ್ಳುತ್ತೇನೆ. ಆದರೆ ಇಲ್ಲಿ

ಸ್ಥೈರ್ಯವೆಂದರೆ ಆ ಪರಮೋಚ್ಚವನ್ನು ಶೋಧಿಸುವ ಅಭಿರುಚಿಯಾಗಿದೆ. ಈ ಅಭಿರುಚಿಯೇ ಅಭೀಪ್ಸೆಯಾಗಿದೆ... ಈ ಅಭೀಪ್ಸೆಯು ನಿಮ್ಮನ್ನು ಸಂಪೂರ್ಣವಾಗಿ ಆವರಿಸಿಕೊಳ್ಳುತ್ತದೆ. ಮತ್ತೆ ಅದಲ್ಲಿಯೇ ನಿಮ್ಮನ್ನು ಮಗ್ನಗೊಳಿಸುತ್ತದೆ. ಇಲ್ಲಿ ಯಾವುದೇ ರೀತಿಯ ಚೌಕಾಶಿ ವಗೈರೆ ಇರುವದಿಲ್ಲ. ಯಾವುದೇ ಬಿಗುಮಾನ ಅಥವಾ ಯಾವ ರೀತಿಯಿಂದಲೂ ಹಿಂದೆಗೆಯದಂತೆ, ಅದರಲ್ಲೂ ಈ ದಿವ್ಯತ್ವದ ಶೋಧನೆಯ ಮೂಲಕ ಅದನ್ನು ಭೇಟಿಯಾಗುವ ಸಾಹಸದಿಂದ ಹಿಂದೆ ಸರಿಯದಂತೆ ಇರುತ್ತದೆ, ಅದಕ್ಕಿಂತಲೂ ಮಿಗಿಲಾದ ಆ ದಿವ್ಯತ್ವದ ಸಾಕ್ಷಾತ್ಕಾರದ ಮಹತ್–ಸಾಹಸದಿಂದ ಹಿಂಜರಿಯದಂತೆ ಇರುತ್ತದೆ. ಈ ಸಾಹಸದಲ್ಲಿ ನಿನಗರಿಯದಂತೆಯೇ ನೀನು ಅದರಲ್ಲಿ ಮುನ್ನುಗ್ಗುವಂತೆ ಸೆಳೆಯಲ್ಪಟ್ಟಿರುತ್ತೀಯಾ. ಹೀಗಾಗಿ ಅಲ್ಲಿ ಹಿಂದಿರುಗಿ ನೋಡಲು ಅವಕಾಶವಿಲ್ಲ. ಮತ್ತು ಯಾವುದೇ ಪ್ರಶ್ನೆಗಳನ್ನು ಕೇಳಲೂ ಸಾಧ್ಯವಿಲ್ಲ. ಅದಕ್ಕಾಗಿ ಒಂದು ನಿಮಿಷವೂ ನಿನಗೆ ಲಭ್ಯವಾಗುವದಿಲ್ಲ. "ಏನು ಏನಾಗುತ್ತಿದೆ ಇಲ್ಲಿ? ಏನು ನಡೆಯುತ್ತಿದೆ ಇಲ್ಲಿ?" ಎನ್ನುವದನ್ನು ನೀನು ಕೇಳುವದಾದರೆ, ನೀನೆಂದೆಂದಿಗೂ ಅಲ್ಲಿ ಸ್ಥಿತಗೊಂಡಿರು; ನಿನ್ನ ಅಭೀಪ್ಸೆಯ ಬೇರುಗಳು ಅಲ್ಲಿಯೇ ಗಟ್ಟಿಯಾಗಿರಲಿ; ಏನನ್ನಾದರೂ ಕಳೆದುಕೊಳ್ಳುತ್ತೇನೆ ಎಂದು ಹೆದರಿಕೆಯಾಗುತ್ತಿದ್ದಲ್ಲಿ, ಅಲ್ಲಿ ನಿನ್ನ ಸಂತುಲನವನ್ನು ಮಾತ್ರ ಕಳೆದುಕೊಳ್ಳಬಹುದಾಗಿದೆ ಎಂದು ಹೇಳಬೇಕಗುತ್ತದೆ.

ಈ ಹಿನ್ನೆಲೆಯಲ್ಲಿಯೇ ನಾನು 'ಸ್ಥೈರ್ಯ'ದ ಬಗೆಗೆ ಮಾತನಾಡಿದ್ದು. ಆದರೆ ಅದು ನಿಜವಾಗಿಯೂ 'ಅಭೀಪ್ಸೆಯೇ' ಆಗಿದೆ. ಇವೆರಡೂ ಜೊತೆಜೊತೆಯಾಗಿಯೇ ಸಾಗುತ್ತವೆ. ನೈಜ ಅಭೀಪ್ಸೆ ಎಂದರೆ ಅದು ಪೂರ್ಣ ಸ್ಥೈರ್ಯವೇ ಆಗಿರುತ್ತದೆ.

## ಶರಣಾಗತಿ (ಸಮರ್ಪಣೆ)

ಇದೀಗ ಸಮರ್ಪಣೇಯ ವಿಷಯವನ್ನು ಗಮನಿಸೋಣ. ಇಂಗ್ಲೀಷ ಭಾಷೆಯಲ್ಲಿ ಮಾತ್ರ ಇದು "ಸರೆಂಡರ್" ಎಂದಿದೆ. ಆದರೆ ಈ ಅರ್ಥದಲ್ಲಿ ಫ್ರೆಂಚ್ ಭಾಷೆಯಲ್ಲಿ ಇಲ್ಲ. ಅಂತಹ ಅರ್ಥ ಕೊಡುವ ಶಬ್ದವು ಫ್ರೆಂಚ್ ಭಾಷೆಯಲ್ಲಿ ಇಲ್ಲ. ಆದರೆ ಶ್ರೀ ಅರವಿಂದರು ಹೇಳಿರುವದೇನೆಂದರೆ, "ನಾವು ಇದನ್ನು ಅಭ್ಯಸಿಸುವದು ಸೂಕ್ತವೆಂದು ನನ್ನ ಯೋಚನೆ ಇದೆ. ಆದರೆ ಈ 'ಸಮರ್ಪಣೆ' ಎನ್ನುವದು ಪ್ರಪ್ರಥಮವಾಗಿರುವ ಅಂಶವಾಗಿದೆ. ಅಲ್ಲದೇ ಯೋಗವನ್ನು ಅನುಷ್ಠಾನಿಸಲು

ಏಕೈಕ ಮಾರ್ಗವಾಗಿದೆ.” ಆದ್ದರಿಂದ, ಅವರು ಹೇಳಿರುವದನ್ನು ನಾವು ಒಂದು ವೇಳೆ ಅನುಸರಿಸಿದಲ್ಲಿ, ಇದು ಕೇವಲ ಅವಶ್ಯವಿರುವ ಗುಣಗಳಲ್ಲಿ ಕೇವಲ ಒಂದೇ ಒಂದು ಅಂಶ ಮಾತ್ರವಾಗಿರುವದಿಲ್ಲ. ಯೋಗವನ್ನು ಪ್ರಾರಂಭಿಸಲು ಅತ್ಯಾವಶ್ಯವಿರುವ ಪ್ರಪ್ರಥಮ ದೃಷ್ಟಿಕೋನವಾಗಿರುತ್ತದೆ. ಒಂದು ವೇಳೆ ಯಾರಾದರೂ ಸಂಪೂರ್ಣ ಸಮರ್ಪಣೆಯನ್ನು ನಿರ್ಧರಿಸಿಕೊಳ್ಳದಿದ್ದರೆ ಅವನು ಯೋಗವನ್ನು ಪ್ರಾರಂಭಿಸಲಾರ ಎಂದೇ ಆಗುತ್ತದೆ.

## ಸಹನಶೀಲತೆ ಅಥವಾ ದೃಢತೆ

ಸಂಪೂರ್ಣ ಸಮರ್ಪಣೆಗೆ ಈ ಎಲ್ಲ ಅಂಶಗಳೂ ಅಗತ್ಯವಾಗಿವೆ. ಇಲ್ಲಿ ಇದಕ್ಕೆ ಮತ್ತೊಂದು ಅಂಶವನ್ನು ಜೋಡಿಸುತ್ತಿದ್ದೇನೆ, – ಅಂದರೆ ಒಟ್ಟಿನಲ್ಲಿ ನಾವು ‘ನಾಲ್ಕು’ ಗುಣಗಳನ್ನು (ಅಂಶಗಳನ್ನು) ಈಗಾಗಲೇ ಗಮನಿಸಿದ್ದೇವೆ. ಇದೀಗ ನಾನು ಸಹನಶಿಲತೆಯನ್ನು ಇದಕ್ಕೆ ಜೋಡಿಸುತ್ತೇನೆ. ಒಂದು ವೇಳೆ ಅಲ್ಲಿರುವ ತೊಂದರೆಗಳ ವಿಷಯವಾಗಿ, ಅವುಗಳನ್ನು ಎದುರಿಸಲು ನಾವು ಅಸಮರ್ಥರಾದಾಗ, ಈ ಪ್ರಯತ್ನವನ್ನು– ಅಂದರೆ ಧೈರ್ಯಗೆಡದಂತೆ ಹಾಗೂ ಗುರಿಯನ್ನು ಸಾಧಿಸಲು ಇರುವ ಪ್ರಯತ್ನವನ್ನು ಬಿಟ್ಟುಕೊಡದಂತೆ ಇರುವ ಸಲುವಾಗಿ ರೂಪಿಸಿದ್ದೇನೆ. ಒಂದು ವೇಳೆ ನೀವು ಅಸಮರ್ಥರಾಗಿದ್ದಲ್ಲಿ, ... ಸರಿ. ಈ ರೀತಿಯ ಆಘಾತಗಳನ್ನು ಸದಾ ಕಾಣುತ್ತಲೇ ಇರಬೇಕಾಗುತ್ತದೆ! ಮತ್ತೆ ಮತ್ತೆ ನೀವು ಮುಂದುವರೆಯುತ್ತಿದ್ದಲ್ಲಿ, ಅಂತಹ ಆಘಾತಗಳನ್ನು ಸದಾ ಕಾಣುತ್ತಲೇ ಇದ್ದರೆ, ಅವುಗಳನ್ನು ‘ಕರಗತಗೊಳಿಸಿಕೊಳ್ಳುವ’ ಸಲುವಾಗಿಯೇ ಮುಂದುವರೆಯುತ್ತಾ ಇರುತ್ತೀರಿ. ಹೀಗಾಗಿ ಅದು ಹೇಳುತ್ತಿರುವ ಸಂಗತಿ ಏನೆಂದರೆ, ನೀನು ಮಾಡುತ್ತಿರುವ ತಪ್ಪುಗಳ ಕಾರಣದಿಂದಾಗಿ ಈ ರೀತಿಯ ಆಘಾತಗಳನ್ನು ಎದುರಿಸುತ್ತಿದ್ದೀಯಾ, ಅವುಗಳನ್ನು ನಿನ್ನ ಸ್ವಾಧೀನದಲ್ಲಿಯೇ ಇಟ್ಟುಕೊಂಡೇ ಮತ್ತೆ ಪ್ರಗತಿಯತ್ತ ಸಾಗಬೇಕು. ಇಲ್ಲಿ ಯಾವುದೇ ರೀತಿಯ ಹೆದರಿಕೆ ಬೇಡ. ಏಕೆಂದರೆ ನೀನೇನೂ ಮತ್ತೂ ಮತ್ತೂ ದೂರ ಹೋಗಬೇಕಿಲ್ಲ. ಇನ್ನೂ ಪ್ರಪ್ರಥಮ ತಿರುವಿನಲ್ಲಿಯೇ ಇದ್ದು, ನೀನು ಆ ನಿನ್ನ ಸೀಮಿತ ಸಂಪ್ರದಾಯದ ಜೀವನದ ಕವಚವನ್ನು ತ್ಯಜಿಸಿರುತ್ತೀಯಾ, ಆದರೂ ನೀನು ಹತಾಶೆಯಲ್ಲಿ ಮುಳುಗುತ್ತೀಯಾ. ಮತ್ತೆ ಮೇಲಾಗಿ, ಈ ಶೋಧನಾ ಸಾಹಸವನ್ನು ಬಿಟ್ಟುಕೊಟ್ಟಿರುತ್ತೀಯಾ.

ಇದನ್ನು ನಾನು ಹೇಗೆ ... ಹೇಗೆ ಹೇಳಲಿ? ಬಹುತೇಕವಾಗಿ... ಹೌದು ಬಹುತೇಕವಾಗಿ ಇದು ದೃಢತೆಯ ಲೌಕಿಕ ಸ್ವರೂಪವಾಗಿದೆ. ಎಲ್ಲಿಯವರೆಗೂ ನೀನು ಇದನ್ನು ಪರಿಹರಿಸಿಕೊಳ್ಳಲು ಸಮರ್ಥನಾಗಿಲ್ಲವೋ, ಮತ್ತು ಆ ದಿಸೆಯೆಡೆಗೆ ಪಯಣವನ್ನು ಪ್ರಾರಂಭಿಸುವದಿಲ್ಲವೋ, ಆಗ ಮತ್ತೆ ಮತ್ತೆ ಸಾವಿರಾರು ಬಾರಿ ಇಂತಹ ಪ್ರಯತ್ನವನ್ನು ಮಾಡುತ್ತಲೇ ಇರಬೇಕಾಗುತ್ತದೆ,.. ಇನ್ನೂ ಮುಖ್ಯವಾಗಿ ನಿನಗೆ ತಿಳಿದಿರಬೇಕಾದ ವಿಷಯವಾಗಿದೆ.

ನನ್ನ ಬಳಿ ಬಂದವರೆಲ್ಲರೂ ಹತಾಶೆಯಲ್ಲಿಯೇ ಸಿಲುಕಿದವರಾಗಿದ್ದಾರೆ. ಆದರೆ ನಾನು ಯೋಚಿಸುತ್ತಿರುವದೇನೆಂದರೆ, "ಇದೆಲ್ಲವೂ ಈಗಾಗಲೇ ಘಟಿಸಲ್ಪಟ್ಟದೆ, ಮತ್ತೆ ಇದೀಗ ಪುನರಾರಂಭಿಸಬೇಕಿದೆ!" ಅವರಿಗೆ ಇದನ್ನು ಹೇಳಿದಾಗಲೂ "ಆದರು ಅದು ಏನೂ ಅಲ್ಲ" ಎಂದೇ ಭಾವವಿರುತ್ತದೆ. ನೀನು ಮತ್ತೆ ಮತ್ತೆ ನೂರಾರು ಬಾರಿ ಪ್ರಯತ್ನಿಸು, ಪ್ರಾರಂಭಿಸು, ಅದು ಸಾವಿರ ಬಾರಿಯಾದರೂ ಆದೀತು. ನೀನು ಸುರಕ್ಷೆಯಲ್ಲಿಯೇ ಇರುವೆ. ಅದಕ್ಕಾಗಿ ಅದೇ ಧೈರ್ಯದಲ್ಲಿ ಮತ್ತೊಂದು ಹೆಜ್ಜೆ ಮುಂದಿಡು. ಆದರೆ ಮುಂದೆ ಹೋದಂತೆಲ್ಲ ಹೋದಂತೆಲ್ಲ, ಹಿಂದೆ ತಳ್ಳುವ ಅನೇಕ ತೊಂದರೆಗಳು ಇದ್ದೇ ಇರುತ್ತವೆ. ನೀನು ಸಮಸ್ಯೆಯನ್ನು ಪರಿಹರಿಸಿಕೊಳ್ಳುತ್ತಿದ್ದೇನೆ ಎಂದು ಯೋಚಿಸುತ್ತಿದ್ದೀಯಾ, ಮತ್ತೊಮ್ಮೆ ಆ ಸಮಸ್ಯೆಯನ್ನು ಪರಿಹಾರ ಮಾಡಿಕೊಳ್ಳಲೇಬೇಕು. ಆಗ ಮಾತ್ರ ಮತ್ತೊಂದು ದೃಷ್ಟಿಕೋನದಿಂದ ಕಾಣುವ ಸ್ಥಿತಿ ಇರುತ್ತದೆ, ಆದರೆ ಅಲ್ಲೂ ಸಹಿತ ಇದೇ ರೀತಿಯ ತೊಂದರೆಗಳು ಇದ್ದೇ ಇರುತ್ತವೆ. ಒಂದು ವೇಳೆ ನೀನು ದೃಢ ಸ್ವಭಾವವನ್ನು ಹೊಂದಿಲ್ಲದಿದ್ದರೆ, ಆಗ ಲಕ್ಷಾಂತರ ಬಾರಿ ಪುನರಾವರ್ತಿಸುವಷ್ಟು ಹಿಂದೆ ಬಂದಿರುತ್ತೀಯಾ. ನಾನು ಮಾತ್ರ ಲಕ್ಷ–ಲಕ್ಷ ಬಾರಿಯಾದರೂ ಸರಿಯೇ ಪ್ರಯತ್ನಿಸುತ್ತೇನೆ.

ಆದರೆ ನಾನು ಅದರೊಡನೆಯೇ ಮುಂದುವರೆಯುತ್ತೇನೆ. ಸರಿ ಹಾಗದರೆ, ನೀನು ಯೋಗವನ್ನು ಆಚರಿಸಲು ಸಮರ್ಥನಿಲ್ಲ ಎಂದಾಯಿತು. ಏನೇ ಆದರೂ ಈ ಅಂಶವು ಮಾತ್ರ ಖಂಡಿತವಾಗಿಯೂ ಅನಿವಾರ್ಯವೇ ಆಗಿದೆ.

ಕೆಲವು ಆಕರ್ಷಕ ಅನುಭವಗಳನ್ನು ಹೊಂದಿದ ಕೆಲವರು ಹೇಳುವದೇನೆಂದರೆ, "ಓ ಹೋ.. ಇದೋ ನೋಡಿ ಅದು ಹೀಗೆ ಇದೆ!" ಎನ್ನುತ್ತಾರೆ. ಆದರೆ

ತದನಂತರದಲ್ಲಿ ಅಲ್ಲಿ ಕುಸಿತ ಕಾಣಿಸಿಕೊಳ್ಳುತ್ತದೆ. ಇಲ್ಲವೇ ಪರದೆಯಲ್ಲಿ ಹುಗಿದು ಹೋಗುತ್ತದೆ. ಕರಗಿ ಬಿಡುತ್ತದೆ. ಮತ್ತೆ ಇದ್ದಕಿದ್ದಂತೆಯೇ ಅನಿರೀಕ್ಷಿತವಾಗಿ, ಪೂರ್ಣತಹ ಸಾಮಾನ್ಯ ಎಂದೇ ಇರುವ ಸ್ಥಳಗಳಲ್ಲಿ ಮತ್ತು ಮೇಲ್ನೋಟಕ್ಕೆ ಆಸಕ್ತಿಯೇ ಇರದಂತಹ ವಿಷಯವು ನಿನ್ನ ಎದುರು ಬರುತ್ತದೆ. ಅಷ್ಟೇ ಅಲ್ಲ ಅದು ನಿನ್ನ ದಾರಿಯನ್ನೂ ಅಡ್ಡಗಟ್ಟುತ್ತದೆ. ಈ ಸಂದರ್ಭದಲ್ಲಿ ನಾನು ಹೇಳುವದೇನೆಂದರೆ, "ಓ ಓ ಈ ರೀತಿಯಾಗಿ ಮತ್ತೆ ಪುನರಾರಂಭ ಮಾಡುವ ಹಂತ ಬರುವದಾದಲ್ಲಿ, ಇಲ್ಲಿರುವ ಒಳ್ಳೆಯ ಅಂಶವಾದರೂ ಏನು? ನಾನೇಕೆ ಇದನ್ನು ಮಾಡಬೇಕು? ನಾನೇಕೆ ಇದನ್ನು ಮಾಡಬೇಕು? ನಾನು ಪ್ರಯತ್ನಿಸುತ್ತಿಲ್ಲ, ನಾನು ಜಯಶೀಲನಾಗಬೇಕಿತ್ತು, ಏನನ್ನಾದರೂ ಸಾಧಿಸಿಕೊಳ್ಳಬೇಕು. ಆದರೆ ಈಗ ಇಲ್ಲಿ ನನಗೆ ದೊರೆತಿರುವದು ನಾನು ಏನೂ ಪ್ರಯತ್ನಿಸಿಯೇ ಇಲ್ಲವೆನ್ನುವಂತೆ ಇರುವ ಶೂನ್ಯ ಪರಿಣಾಮ ಮಾತ್ರ!" ಎಂದು ಭಾವಿಸಿಕೊಳ್ಳುತ್ತಿದ್ದಲ್ಲಿ, ಇದು ನಿಜವಾಗಿಯೂ ಭರವಸೆ ಇರದ ಸಂಗತಿಯಾಗಿದೆ. ಅಷ್ಟೇ ಅಲ್ಲ ನೀನು ದೃಢತೆಯನ್ನು ಹೊಂದಿಲ್ಲ ಎಂದೇ ತೋರಿಸುತ್ತದೆ.

ಒಂದು ವೇಳೆ ಯಾವುದೇ ವ್ಯಕ್ತಿಯು ದೃಢತೆಯನ್ನು ಹೊಂದಿದ್ದಲ್ಲಿ, ಆಗ ಅವನು ಹೇಳುವದೇನೆಂದರೆ, "ಇದೆಲ್ಲವೂ ಸೂಕ್ತವಾಗಿದೆ. ಒಳ್ಳೆಯದೇ ಇದೆ. ಅವಶ್ಯವಿದೆ ಎಂದಾದಲ್ಲಿ ನಾನು ಮತ್ತೆ ಮೊದಲಿನಿಂದ ಪ್ರಾರಂಭಿಸುವೆ. ಸಾವಿರಾರು ಬಾರಿ ಪುನರಾವರ್ತಿಸುವಂತಾದರೂ ಸರಿಯೆ, ಅಥವಾ ಲಕ್ಷ ಲಕ್ಷ ಬಾರಿ ಪುನರಾವರ್ತಿಸುವಂತಾದರೂ ಸರಿಯೇ, ನಾನು ಆ ಪ್ರಯತ್ನವನ್ನು ಮುಂದುವರೆಸುವೆ. ಹೀಗೆ ನಾನು ಆ ಚರಮದವರೆಗೂ ಸಾಗಬಲ್ಲೆ. ಇಲ್ಲಿ ನನ್ನನ್ನು ತಡೆಯುವ ಯಾವ ಶಕ್ತಿಯೂ ಇರುವದಿಲ್ಲ". ಇದು ಇಲ್ಲಿ ಅತ್ಯಾವಶ್ಯವಾಗಿ ಇರುವ ಸಂಗತಿಯಾಗಿದೆ.

ಹೌದು ಇದೇ ಇಲ್ಲಿ ಅತ್ಯಾವಶ್ಯವಾಗಿರುವ ಸಂಗತಿಯಾಗಿದೆ. ಹೀಗಾಗಿ ಇಲ್ಲಿ ನಾನು ಪ್ರಸ್ತಾಪಿಸುತ್ತಿರುವದೇನೆಂದರೆ, ಮೊದಲು ನಾವು 'ಸಮರ್ಪಣೆ'ಯನ್ನು ಪ್ರಪ್ರಥಮವಾಗಿ ಆಯ್ಕೆ ಮಾಡಿಕೊಳ್ಳಬೇಕಾಗಿದೆ. ಅದೂ ಆಯ್ಕೆಯ ಪಟ್ಟಿಯಲ್ಲಿ ಸದಾ ಅಗ್ರ ಸ್ಥಾನದಲ್ಲಿಯೇ ಇರಬೇಕು. ಇದು ಶ್ರೀ ಅರವಿಂದರು ಏನನ್ನು ಹೇಳಿದ್ದಾರೆಯೋ ಅದನ್ನೇ ಸ್ವೀಕರಿಸದಂತೆ ಇರುತ್ತದೆ. ಅದರಲ್ಲೂ ಪೂರ್ಣ

ಯೋಗವನ್ನು ಪ್ರಾರಂಭಿಸಲು ಇಚ್ಛಿಸುವ ಯಾವುದೇ ವ್ಯಕ್ತಿಯು ಆ ದೈವತ್ವಕ್ಕೆ ಪ್ರಥಮವಾಗಿ ತನ್ನನ್ನು ಸಮರ್ಪಣೆ ಮಾಡಿಕೊಳ್ಳಬೇಕು. ಇದೇ ಅವರ ಹೇಳಿಕೆಯಾಗಿದೆ.

ಈ ವಿಷಯವನ್ನು ಬಿಟ್ಟು ಅಲ್ಲಿ ಬೇರೆ ಮಾರ್ಗವೇ ಇರುವದಿಲ್ಲ. ಇದು ಮಾತ್ರ ಸೂಕ್ತವಾದ ಪಥವಾಗಿದೆ. ಆದರೆ ಇದಾದ ನಂತರದಲ್ಲಿ, ಆ ವ್ಯಕ್ತಿಯ ಈ ಐದು ಮನೋವೈಜ್ಞಾನಿಕ ಸದ್ಗುಣಗಳನ್ನು, ಐದು ಮನೋವೈಜ್ಞಾನಿಕ ಪೂರ್ಣತೆಯನ್ನು ಹೊಂದಬೇಕಾಗುತ್ತದೆ.

ಈ ಐದು ಅಂಶಗಳನ್ನು ಪರಿಪೂರ್ಣತೆಯಾಗಿದ್ದು ಅವು ಈ ರೀತಿಯಲ್ಲಿವೆ;

**ಪ್ರಾಮಾಣಿಕತೆ ಅಥವಾ ಪಾರದರ್ಶಕತೆ**
**ನಂಬಿಕೆ ಅಥವಾ ವಿಶ್ವಾಸ (ದೈವತ್ವದಲ್ಲಿ ವಿಶ್ವಾಸ)**
**ಭಕ್ತಿ ಅಥವಾ ಕೃತಜ್ಞತೆ**
**ಸ್ಥೈರ್ಯ ಅಥವಾ ಅಭೀಪ್ಸೆ**
**ಸಹನಶೀಲತೆ ಅಥವಾ ದೃಢತೆ**

ಸಹನಶೀಲತೆಯು ಒಂದು ವಿಶ್ವಾಸಪೂರ್ಣತೆಯಾಗಿದೆ. ಇದು ವಿಶ್ವಾಸ ಹೊಂದಿದವರಾಗಿ ಇರಲು ರೂಪಿತಗೊಳಿಸುತ್ತದೆ. ಒಮ್ಮೆ ಈ ರೀತಿಯ ರೂಪಿತದ ಪ್ರಕ್ರಿಯೆಗೆ ಸಿದ್ಧವಾಗಿದ್ದಲ್ಲಿ, ಮತ್ತೋರ್ವನು ರೂಪಣೆಗೆ ವಿಶ್ವಾಸ ಹೊಂದಿರುತ್ತಾನೆ. ಇದೇ ಸಹನಶೀಲತೆಯಾಗಿದೆ.

ಅಲ್ಲಿಯೇ ನೀನು ಇರುತ್ತೀಯಾ.

ಒಬ್ಬ ವ್ಯಕ್ತಿಯು ದೃಢ ಚಿತ್ತವನ್ನು ಹೊಂದಿದ್ದರೂ, ಅಲ್ಲಿ ವಿಜಯಿಯಾಗುವ ಎಲ್ಲ ಅವಧಿ ಖಂಡಿತವಾಗಿಯು ಅಲ್ಲಿ ಆಗಮಿಸುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 8/36–42 – ಶ್ರೀಮಾತೆ**

ಶ್ರೀಮಾತೆಯವರು ತಮ್ಮ ಕೈಯಲ್ಲಿ ಹಿಡಿದುಕೊಂಡಿದ್ದ ಪುಷ್ಪವನ್ನೇ ಅವಲೋಕಿಸುತ್ತಿದ್ದರು. ಇದು "ಸ್ವರ್ಣ ಚಂಪಕ ಪುಷ್ಪ". ನೀವು ಈ ಪುಷ್ಪವನ್ನು ನೋಡಿದ್ದೀರಾ?

ಇದಕ್ಕೆ ಹನ್ನೆರಡು ದಳಗಳಿವೆ. ಅದೂ ನಾಲ್ಕು ನಾಲ್ಕು ನಾಲ್ಕರ ಮೂರು ಸರಣಿಗಳಲ್ಲಿ ಇವೆ. ಅದಕ್ಕಾಗಿಯೇ ನಾವು ಇದನ್ನು "ಅತಿಮಾನಸದ ಮನೋವೈಜ್ಞಾನಿಕ ಪರಿಪಕ್ವತೆ" ಎಂದು ಕರೆಯುತ್ತೇವೆ.

ಅದಕ್ಕೆ ಮೂರು ಸಾಲುಗಳಿರುವದನ್ನು ನಾನು ಈ ಮೊದಲು ನೋಡಿರಲೇ ಇಲ್ಲ. ಈ ರೀತಿಯಲ್ಲಿ, ಒಂದು ಚಿಕ್ಕ ಸಾಲು, ಇನ್ನೊಂದು ಅದಕ್ಕಿಂತ ದೊಡ್ಡದು, ಮತ್ತೊಂದು ಮತ್ತೂ ದೊಡ್ಡದಾಗಿದೆ. ಅವೆಲ್ಲವೂ ನಾಲ್ಕರ ವರ್ಗೀಕರಣದಲ್ಲಿ ಇವೆ. ಹೌದು ನಾಲ್ಕು ದಳ, ನಾಲ್ಕು ದಳ, ನಾಲ್ಕು ದಳ.


ಒಳ್ಳೆಯದು, ಒಂದು ವೇಳೆ ಯಾರಾದರೂ ಪ್ರಕೃತಿಯ ಸ್ವರೂಪಗಳನ್ನು ಈ ರೀತಿಯ ಪ್ರತಿಮಾತ್ಮಕದ ಅಭಿವ್ಯಕ್ತಿಯಲ್ಲಿ ಕಾಣಬಯಸಿದಲ್ಲಿ, ಅಲ್ಲಿ ಮಧ್ಯದ ಕೇಂಧ್ರದಲ್ಲಿ 'ಪರಮ ಸತ್ಯ'ವಿರುವದನ್ನು ಕಾಣಬಹುದು.

ಮತ್ತೂ ಮೂರು ರೂಪಧಾರಣೆಯನ್ನು – ಏಕೆಂದರೆ ನಾಲ್ಕು ರೂಪಾಂತರಕ್ಕೆ ಪ್ರಾತಿನಿಧಿಕವಾಗಿ ಇರುತ್ತದೆ. ಈ ಮೂರೂ ಅಧಿರೋಪಣೆಗೊಂಡ ಜಗತ್ತುಗಳಾಗಿವೆ; ಪೂರ್ತಿ ಹೊರ ಭಾಗದಲ್ಲಿ ಇರುವದು – ಅವೆಲ್ಲವೂ ದೊಡ್ಡ ದೊಡ್ಡ ದಳಗಳೇ ಆಗಿವೆ – ವರ್ಣದಲ್ಲಿ ಕೊಂಚ ಪೇಲವವಾಗಿವೆ. ಇದು ಭೌತಿಕ ಜಗತ್ತು ಆಗಿದೆ.

ಇದಾದ ನಂತರದಲ್ಲಿ ಜೈವಿಕ (ಪ್ರಾಣಿಕ) ಜಗತ್ತು. ಅದಾದ ಮೇಲೆ ಕೇಂಧ್ರದಲ್ಲಿ ಅತಿಮಾನಸೀಯ ಸತ್ಯ (ಋತ) ಇರುತ್ತದೆ.

ಮತ್ತೆ ಇದೇ ರೀತಿಯಾಗಿ ಇರುವ ಇತರೇ ಸಾದೃಶ್ಯಗಳನ್ನೂ ರೂಪಿಸಬಹುದಾಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 8/158 – ಶ್ರೀಮಾತೆ**



ಸರ್ವವೂ ದೈವತ್ವದಿಂದಲೇ ರೂಪಿತಗೊಳ್ಳುತ್ತದೆ. ಈ ಹೃದಯ, ಪರಿಶುದ್ಧಗೊಂಡ ಸ್ವಭಾವ, ಜಾಗೃತಗೊಂಡ ಅಂತಃಪ್ರಜ್ಞೆ, ಅಲ್ಲಿರುವ ಎಲ್ಲ ಕವಚಗಳೂ ನಿವಾರಿಸಲ್ಪಟ್ಟಿರುತ್ತವೆ. ಇದೆಲ್ಲವೂ ಸಾಧ್ಯವಾಗುವದು, ಓರ್ವ ವ್ಯಕ್ತಿಯು ಸಂಪೂರ್ಣವಾಗಿ ವಿಶ್ವಾಸದಿಂದ ಮತ್ತು ನಂಬಿಕೆಯಿಂದ ತನ್ನನ್ನು ಸಮರ್ಪಿಸಿಕೊಂಡಲ್ಲಿ ಮಾತ್ರ ಸಾಧ್ಯವಾಗುತ್ತದೆ. ಮತ್ತೆ ಇವೆಲ್ಲವನ್ನೂ ಒಂದೇ ಬಾರಿಗೆ ಮಾಡಲಾಗದಿದ್ದರೂ, ಮತ್ತೆ ಮತ್ತೆ ಪ್ರಯತ್ನಿಸುತ್ತಿದ್ದಲ್ಲಿ, ಅದರ ಸಂಪರ್ಕಕ್ಕೆ ಬಂದಲ್ಲಿ, ಆಗ ಆದು ಈ ದೈವತ್ವವು ಅವನ ಅಂತರಂಗದಲ್ಲಿಯೇ ಅವತರಿಸುವ ಮೂಲಕವೇ ಅವನಿಗೆ ಮಾರ್ಗದರ್ಶನವೀಯುತ್ತದೆ.

ಒಂದು ವೇಳೆ ಪ್ರಶ್ನೆಗಳನ್ನು ಎದುರಿಸುವ ಮನೋಸ್ಥಿತಿ ಇದ್ದಲ್ಲಿ, ಆಗ ಕಡಿಮೆ ಕ್ರಿಯಾತ್ಮಕವಾಗಿ ಪರಿವರ್ತನಗೊಳ್ಳುತ್ತದೆ. ನಿಮ್ಮಲ್ಲಿ ಮೂಡುವ ವಿಧೇಯತೆ ಮತ್ತು ಸಮರ್ಪಣೆಗೊಳ್ಳಲು ಇರುವ ಇಚ್ಛೆಗಳು ಖಂಡಿತವಾಗಿಯೂ ನಿಮ್ಮಲ್ಲಿ ಪ್ರಗತಿಯನ್ನು ರೂಪಿಸುತ್ತದೆ. ಈ ತೆರನಾದ ಬದ್ಧತೆಯನ್ನು ಹೊಂದಿರಬೇಕಾದುದು ಪರಿಪೂರ್ಣವಾಗಿ ಸಾಧ್ಯವಿದೆ. ಹೀಗಿದ್ದಲ್ಲಿ ಬೇರೆ ಯಾವುದೇ ಬಲ ಅಥವಾ ತಪಸ್ಸಿನವಶ್ಯಕತೆ ಇರುವದಿಲ್ಲ. ಆದರೆ ಇದೇ ಏಕ ಮಾತ್ರ ಪಥವಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/69 – ಶ್ರೀ ಅರವಿಂದರು**

# ಸಾಧನೆಯ ಗುಣಗಳು

– ಅನುವಾದ: ನಾಗಜ್ಯೋತಿ ಯಲಿವಾರ

**ಅತ್ಯವಶ್ಯಕ ಗುಣಗಳು**

ನೀವು ಮಾತನಾಡುವ ಗುಣಗಳು ಆಧ್ಯಾತ್ಮಿಕ ಹಾದಿಯ ವಿಧಾನಕ್ಕೆ ಸಹಕಾರಿಯಾಗುತ್ತವೆ ಎಂದು ಹೇಳುವ ಅವಶ್ಯಕತೆಯಿಲ್ಲ, ಆದರೆ ಈ ಮಾರ್ಗದಲ್ಲಿ ನೀವು ಎಣಿಸುವ ದೋಷಗಳು ಪ್ರತಿಯೊಂದು ಗಂಭೀರವಾದ ಎಡವಿ ಬೀಳಿಸುವ ಅಡೆತಡೆಗಳಾಗಿವೆ, ಪ್ರಾಮಾಣಿಕತೆ ವಿಶೇಷವಾಗಿ ಆಧ್ಯಾತ್ಮಿಕ ಪ್ರಯತ್ನಕ್ಕೆ ಅತ್ಯವಶ್ಯಕವಾಗಿದೆ. ಮತ್ತು ಅಡ್ಡನೆಯು ನಿರಂತರ ಅಡಚಣೆಯಾಗಿದೆ. ಸಾತ್ವಿಕ ಸ್ವಭಾವವು ಆರ್ಧಯಾತ್ಮಿಕ ಜೀವನಕ್ಕೆ ಅತ್ಯಂತ ಸೂಕ್ತ ಮತ್ತು ಸಿದ್ಧವಾಗಿರುತ್ತದೆ, ಆದರೆ ರಾಜಸಿಕ ಸ್ವಭಾವವು ಅದರ ಆಸೆಗಳಿಂದ ಮತ್ತು ಭಾವೋದ್ರೇಕಗಳಿಂದ ಸುತ್ತವರೆಯಲ್ಪಟ್ಟಿರುತ್ತದೆ. ಅದೇ ಸಮಯದಲ್ಲಿ ಆಧ್ಯಾತ್ಮಿಕತೆಯು ದ್ವಂದ್ವಗಳನ್ನು ಮೀರಿದುದಾಗಿದೆ. ಮತ್ತು ಇದಕ್ಕೆ ಅತ್ಯವಶ್ಯಕವೇನೆಂದರೆ ನಿಜವಾದ ಊರ್ಧ್ವಮುಖ ಅಭೀಪ್ಸೆ. ಇದು ರಾಜಸಿಕ ವ್ಯಕ್ತಿಗೆ ಮಾತ್ರವಲ್ಲದೆ ಸಾತ್ವಿಕ ವ್ಯಕ್ತಿಗೂ ಬರಬಹುದು. ಈ ರೀತಿಯಾದರೆ, ಆತನ ಸೋಲುಗಳ ಮತ್ತು ಆಸೆಗಳ ಮತ್ತು ಉದ್ರೇಕಗಳನ್ನು ಮೀರಿ, ಇತರರು ತಮ್ಮ ಸದ್ಗುಣಗಳನ್ನು ಮೀರಿ, ದೈವೀ ಪ್ರಾವಿತ್ಯತೆ ಮತ್ತು ಜ್ಯೋತಿ ಮತ್ತು ಪ್ರೀತಿಯೆಡೆಗೆ ಬೆಳೆಯಬಹುದು.

ಅವಶ್ಯವಾಗಿ ಆತನು ತನ್ನ ಕೆಳ ಪ್ರಕೃತಿಯನ್ನು ಜಯಿಸಿದಾಗ ಮತ್ತು ತನ್ನಿಂದ ಇದನ್ನು ಕಿತ್ತೆಸೆದಾಗ ಮಾತ್ರ ಇದು ಸಾಧ್ಯವಾಗುತ್ತದೆ; ಆತನು ಇದರೊಳಗೆ ಮರುಕಳಿಸಿದರೆ, ಆತನು ಮಾರ್ಗದಿಂದ ಕೆಳಬೀಳುವ ಸಾಧ್ಯತೆಯಿದೆ. ಅಥವಾ ಎಲ್ಲಿಯವರೆಗೆ ಮರುಕಳಿಸುವಿಕೆ ಇರುತ್ತದೆಯೋ ಇದರಿಂದ ಆಂತರಿಕ ಪ್ರಗತಿಯಲ್ಲಿ ತಡೆಹಿಡಿಯಲಾಗಿರುತ್ತದೆ. ಆದರೆ ಎಲ್ಲಾ ಮಹಾನ್ ಪಾಪಿಗಳನ್ನು ಮಹಾ ಸಂತರನ್ನಾಗಿ ಪರಿವರ್ತಿಸುವುದು. ಕ್ಷುಲಕ ಅಥವಾ ಸದ್ಗುಣಗಳಿಲ್ಲದ ವ್ಯಕ್ತಿಗಳನ್ನು ಆಧ್ಯಾತ್ಮಿಕ ಅನ್ವೇಷಕರು ಮತ್ತು ದೇವರ ಪ್ರೇಮಿಗಳನ್ನಾಗಿಸುವ ಕಾರ್ಯವು ಆಗಾಗ್ಗೆ ಧಾರ್ಮಿಕ ಮತ್ತು ಆಧ್ಯಾತ್ಮಿಕ ಇತಿಹಾಸದಲ್ಲಿ ಸಂಭವಿಸಿದೆ. ಯುರೋಪಿನ ಸೇಂಟ್‌ಆಗಸ್ಟೀನ್, ಭಾರತದ ಚೈತನ್ಯರ ಜಗೈ ಮತ್ತು ಮಾಧೈ ಬಿಲ್ವಮಂಗಲ್ ಮತ್ತು ಇತರರು. ಯಾರೇ ಪ್ರಾಮಾಣಿಕವಾಗಿ ದೈವತ್ವದ

ಬಾಗಿಲನ್ನು ತಟ್ಟಲಿ ಅವರಿಗಾಗಿ ಪರಮಾತ್ಮನ ಮನೆಯು ಎಂದೂ ಮುಚ್ಚಿರುವುದಿಲ್ಲ, ಅವರ ಹಿಂದಿನ ಅಡೆತಡೆಗಳು ಮತ್ತು ತಪ್ಪುಗಳು ಏನೇ ಆಗಿರಲಿ ಮಾನವನ ಸದ್ಗುಣಗಳು ಮತ್ತು ಮಾನವ ದೋಷಗಳು ನಮ್ಮಲ್ಲಿರುವ ದೈವೀ ಅಂಶದ ಪ್ರಕಾಶಮಾನವಾದ ಮತ್ತು ಗಾಢವಾದ ಹೊದಿಕೆಯಾಗಿವೆ. ಇವೆರಡನ್ನು ಮೀರಿ ನಮ್ಮ ದೈತ್ವವು ಬೆಳೆದಾಗ ಚೈತನ್ಯದ ಉನ್ನತ ಸ್ತಿತ್ವದೆಡೆಗೆ ಜ್ವಾಲೆಯಾಗಿ ಏರುವುದು.

ದೈವತ್ವದ ಮುಂದಿರುವ ನಮ್ರತೆಯು ಜೀವನದ ಅತ್ಯವಶ್ಯಕ ಭಾಗವಾಗಿದೆ. ಮತ್ತು ಆಧ್ಯಾತ್ಮಿಕ ಗರ್ವ, ಸೊಕ್ಕು ಅಥವಾ ಜಂಬ ಮತ್ತು ತನ್ನ ಸಾಮರ್ಥ್ಯದ ಮೇಲೆ ನಂಬಿಕೆ ಯಾವಾಗಲೂ ಕೆಳಮುಖವಾಗಿರುತ್ತದೆ. ಆದರೆ ದೈವತ್ವದಲ್ಲಿ ಆತ್ಮವಿಶ್ವಾಸ ಮತ್ತು ತಮ್ಮ ಆಧ್ಯಾತ್ಮಿಕ ಹಣೆ ಬರಹದಲ್ಲಿ ಶ್ರದ್ಧೆ – (ಅಂದರೆ ನನ್ನ ಹೃದಯ ಮತ್ತು ಆತ್ಮ ದೈವಕ್ಕಾಗಿ ಹುಡುಕುತ್ತಿರುವವರೆಗೆ ನಾನು ಸೋಲುವುದಿಲ್ಲ) ಇವು 'ಹಾದಿ'ಯ ತೊಂದರೆಗಳ ದೃಷ್ಟಿಯನ್ನು ಹೆಚ್ಚು ಅನವಶ್ಯಕವಾಗಿವೆ. ಏಕೆಂದರೆ ವಿಶೇಷವಾಗಿ ದೈವತ್ವವು ಎಲ್ಲರಲ್ಲಿಯೂ ಇದೆ. ಸ್ಪಷ್ಟವಾಗಿ, ಮನುಷ್ಯರ ಚಟುವಟಿಕೆಗಳು ಮತ್ತು ಅಭೀಪ್ಸೆಗಳು ಕ್ಷುಲಕವಲ್ಲ ಮತ್ತು ಅಯೋಗ್ಯವಲ್ಲ, ಎಲ್ಲಾ ಜೀವನವು ಕತ್ತಲೆಯಿಂದ ಬೆಳಕಿನೆಡೆಗೆ ಆತ್ಮದ ಬೆಳವಣಿಗೆಯಾಗಿದೆ. ಆದರೆ ನಮ್ಮ ಮನೋಭಾವವೆಂದರೆ ಮಾನವ ಜನಾಂಗವು ಮನುಷ್ಯನ ಮನಸ್ಸು , ರಾಜಕೀಯ, ಸಾಮಾಜಿಕ ಸುಧಾರಣೆ, ಲೋಕೋಪಕಾರ ಇತ್ಯಾದಿಗಳಿಂದ ಅಳವಡಿಸಿಕೊಂಡ ಸಾಮಾನ್ಯ ವಿಧಾನಗಳಿಂದ ತನ್ನ ಮಿತಿಗಳಿಂದ ಹೊರಬಂದು ಬೆಳೆಯಲು ಸಾಧ್ಯವಿಲ್ಲ. ಇವು ಕೇವಲ ತಾತ್ಕಲಿಕ ಅಥವಾ ಸ್ಥಳೀಯ ಉಪಶಮನಕಾರಗಳು, ಇದರಿಂದ ನಾವು ಹೊರಬರಬೇಕೆಂದರೆ, ಪ್ರಜ್ಞೆಯ ಬದಲಾವಣೆ ಶ್ರೇಷ್ಠವಾದ, ವಿಶಾಲವಾದ ಮತ್ತು ಪವಿತ್ರವಾದ ಅಸ್ತಿತ್ವದೆಡೆಗಿನ ಬದಲಾವಣೆ ಮತ್ತು ಅದರ ಮೇಲೆ ಆಧಾರಿತವಾದ ಕ್ರಿಯೆ ಮತ್ತು ಜೀವನ. ಒಂದು ಬಾರಿ ನಾವು ಆಧ್ಯಾತ್ಮಿಕದೆಡೆಗೆ ಸಂಪೂರ್ಣವಾಗಿ ತಿರುಗಿದಾಗ, ನಮ್ಮ ಎಲ್ಲಾ ಶಕ್ತಿಗಳನ್ನು ಇದಕ್ಕೆ ಧಾರೆ ಎರೆಯಬೇಕು. ಇದರರ್ಥ ನಮ್ಮ ಸಾಮಾನ್ಯ ಜೀವನವು ವ್ಯರ್ಥವೆಂದಲ್ಲ, ಅಯೋಗ್ಯವೆನೆಸಿದ ಅಂಶಗಳು ಬಿಟ್ಟು ಯೋಗ್ಯ ಅಂಶಗಳನ್ನು ಆರಿಸಿಕೊಳ್ಳುವುದಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/42–43 – ಶ್ರೀ ಅರವಿಂದರು**

# ಪ್ರಾಮಾಣಿಕತೆ

## ಪ್ರಾಮಾಣಿಕತೆಯ ಅರ್ಥ

ಪ್ರಾಮಾಣಿಕತತೆಯು ಒಂದು ಅತ್ಯವಶ್ಯಕ ಸ್ಥಿತಿಯಾಗಿದೆ.

*

'ಪ್ರಾಮಾಣಿಕ' ಎಂದರೇನು? ಪ್ರಾಮಾಣಿಕತೆ ಎಂದರೆ ಸಂಪೂರ್ಣವಾಗಿ ದೈವತ್ವ ಕಡೆಗೆ ತಿರುಗುವುದು ಮತ್ತು ದೈವೀ ಪ್ರಚೋದನೆಗಳನ್ನು ಮಾತ್ರ ಸ್ವೀಕರಿಸುವುದು – ಇದರರ್ಥ ನಿಜವಾದ ಮತ್ತು ಸತತವಾದ ಸಂಕಲ್ಪ ಅಥವಾ ಈ ರೀತಿಯಾಗಿರಲು ಪ್ರಯತ್ನಿಸುವುದು.

*

ಪ್ರಾಮಾಣಿಕವು ಕೇವಲ ನಾಮವಿಶೇಷಣ ಅರ್ಥವಾಗಿದ್ದು, ಸಂಕಲ್ಪವು ನಿಜವಾದ ಸಂಕಲ್ಪವಾಗಿರಬೇಕು. ನೀವು ಸುಮ್ಮನೆ 'ನಾನು ಅಭೀಪ್ಸೆ' ಪಡುತ್ತಿದ್ದೇನೆ ಎಂದು ಯೋಚಿಸಿ ಮತ್ತು ಈ ಅಭೀಪ್ಸೆಗೆ ವ್ಯತಿರಿಕ್ತವಾದ ಕೆಲಸಗಳನ್ನು ಮಾಡಿದರೆ, ಅಥವಾ ನಿಮ್ಮ ಆಸೆಗಳನ್ನು ಹಿಂಬಾಲಿಸಿದರೆ ಅಥವಾ ವಿರುದ್ಧವಾದ ಪ್ರಭಾವಗಳಿಗೆ ನಿಮ್ಮನ್ನು ನೀವು ತೆರೆದುಕೊಂಡರೆ, ಆಗ ಇದು ಪ್ರಾಮಾಣಿಕ ಸಂಕಲ್ಪವಾಗಲಾರದು.

*

ಪ್ರಾಮಾಣಿಕತೆ ಎಂದರೆ ಕೇವಲ ನಿಷ್ಕಪಟತೆಗಿಂತಲೂ ಹೆಚ್ಚು. ಇದರರ್ಥ ನೀವು ಹೇಳುವ ಮಾಡುವ ಉದ್ದೇಶವು ಒಂದೇ ಆಗಿರಬೇಕು. ಏನಿದೆಯೋ, ಅದನ್ನೇ ಭಾವಿಸಬೇಕು, ನಿಮ್ಮ ಸಂಕಲ್ಪ ಶ್ರದ್ಧೆಯಿಂದ ಕೂಡಿರಬೇಕು. ಸಾಧಕನು ದೈವತ್ವದ ಉಪಕರಣ ಮತ್ತು ದೈವತ್ವ ದೈವತ್ವದೊಂದಿಗೆ ಒಂದಾಗಲೂ ಅಭೀಪ್ಸೆ ಪಡುವಂತೆ, ಆತನಲ್ಲಿರುವ ಪ್ರಾಮಾಣಿಕತೆ ಎಂದರೆ ಅವನು ನಿಜವಾಗಿಯೂ ತನ್ನ ದೈವತ್ವವನ್ನು ಹೊರತುಪಡಿಸಿ ಬೇರೆಲ್ಲಾ ಸಂಕಲ್ಪ ಅಥವಾ ಪ್ರಚೋದನೆಯನ್ನು ತಿರಸ್ಕರಿಸಬೇಕು.

*

[ಪ್ರಾಮಾಣಿಕತೆ:] ಅಸ್ಥಿತ್ವದ ಯಾವುದೇ ಭಾಗವು ದೈವತ್ವದೆಡೆಗಿನ ಅತ್ಯುನ್ನತ ಅಭೀಪ್ಸೆಯಲ್ಲಿ ಯಾವುದೇ ವಿರೋಧಭಾಸಕ್ಕೆ ಅನುಮತಿಸದಿರುವುದು.

*

ಎಲ್ಲಾ ಪ್ರಾಮಾಣಿಕ ಅಭೀಪ್ಸೆಯು ತನ್ನ ಪ್ರಭಾವವನ್ನು ಹೊಂದಿದೆ; ನೀವು ಪ್ರಾಮಾಣಿಕವಾಗಿದ್ದರೆ, ನೀವು ದೈವೀ ಜೀವನದೆಡೆಗೆ ಬೆಳೆಯುತ್ತೀರಿ.

ಸಂಪೂರ್ಣವಾಗಿ ಪ್ರಾಮಾಣಿಕ ಎಂದರೆ, ದೈವೀ 'ಸತ್ಯ'ವನ್ನು ಮಾತ್ರ ಬಯಸುವುದು. ನಿಮ್ಮನ್ನು ನೀವು ಹೆಚ್ಚು ಹೆಚ್ಚಾಗಿ 'ದೈವೀ ಮಾತೆ'ಗೆ ಸಮರ್ಪಿಸಿಕೊಳ್ಳುವುದು ಈ ಒಂದು ಅಭೀಪ್ಸೆಯನ್ನು ಹೊರತುಪಡಿಸಿ ಎಲ್ಲಾ ವೈಯಕ್ತಿಕ ಬೇಡಿಕೆ ಮತ್ತು ಬಯಕೆಯನ್ನು ತಿರಸ್ಕರಿಸುವುದು, ಜೀವನದ ಪ್ರತೀ ಕ್ರಿಯೆಯನ್ನು ದೈವತ್ವಕ್ಕೆ ಅರ್ಪಿಸುವುದು. ಮತ್ತು ಕೊಟ್ಟ ಕೆಲಸವನ್ನು ಅಹಂಕಾರದ ವ್ಯವಹಾರವಿಲ್ಲದಂತೆ ಮಾಡುವುದು. ಇದು ದೈವೀ ಜೀವನದ ಬುನಾದಿಯಾಗಿದೆ.

ಒಬ್ಬರು ಒಮ್ಮೆಗೇ ಇದಾಗಲು ಸಾಧ್ಯವಿಲ್ಲ. ಆದರೆ ಒಬ್ಬರು ಇದಕ್ಕಾಗಿ ಎಲ್ಲಾ ಸಮಯದಲ್ಲಿ ಅಭೀಪ್ಸಪಟ್ಟರೆ ಮತ್ತು ಯಾವಾಗಲೂ ನಿಜವಾದ ಹೃದಯ ಮತ್ತು ನೇರ ಇಚ್ಛಾಶಕ್ತಿಯೊಂದಿಗೆ ದೈವೀ ಶಕ್ತಿಯ ಸಹಾಯವನ್ನು ಕರೆದರೆ, ಈ ಪ್ರಜ್ಞೆಯಲ್ಲಿ ಹೆಚ್ಚು ಹೆಚ್ಚಾಗಿ ಬೆಳೆಯುತ್ತಾನೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/50–51**

## ಸಾಧನೆಯಲ್ಲಿ ಪ್ರಾಮಾಣಿಕತೆ

ಮನುಷ್ಯರು ಯಾವಾಗಲೂ ಗುಣಗಳಿಂದ ಮಿಶ್ರಣಗೊಂಡಿರುತ್ತಾರೆ ಮತ್ತು ಗುಣಗಳು ಮತ್ತು ಅವಗುಣಗಳು ತಮ್ಮ ಸ್ವಭಾವದಲ್ಲಿ ಬಹುತೇಕವಾಗಿ ಬೇರ್ಪಡಿಸಲಾಗದಂತೆ ಬೆರೆತಿರುತ್ತವೆ. ಒಬ್ಬ ವ್ಯಕ್ತಿಯು ಏನಾಗಬೇಕೆಂದು ಬಯಸುತ್ತಾನೋ ಅಥವಾ ಬೇರೆಯವರು ತನ್ನಲ್ಲಿ ಏನು ನೋಡಬಯಸುತ್ತಾನೋ ಅಥವಾ ತನ್ನ ಸ್ವಭಾವದ ಒಂದು ಬದಿಯಲ್ಲಿ ಕೆಲವೊಮ್ಮೆ ತಾನು ಏನು ಇದ್ದಾನೋ ಅಥವಾ ಬೇರೆಯ ಸಂಬಂಧಗಳಲ್ಲಿ ನಿಜದಲ್ಲಿ ಬದಿಯಲ್ಲಿ ಕೆಲವೊಮ್ಮೆ ತಾನು ಏನು ಇದ್ದಾನೋ ಅಥವಾ ಬೇರೆಯ ಸಂಬಂಧಗಳಲ್ಲಿ ನಿಜದಲ್ಲಿ ತಾನು ಏನು ಇರುವನೋ ಅಥವಾ ತನ್ನ ಸ್ವಭಾವದ ಇನ್ನೊಂದು ಬದಿಯಲ್ಲಿ ಬೇರೆಯೇ ಇರಬಹುದು. ಪರಿಪೂರ್ಣ ಪ್ರಾಮಾಣಿಕನಾಗಿರುವುದು, ನೇರ ಸ್ವಭಾವದ, ತೆರೆದ ಮನೋಭಾವದಿಂದಿರುವುದು ಮಾನವನ ಸ್ವಭಾವಕ್ಕೆ ಸುಲಭದ ಸಾಧನೆಯೇನಲ್ಲ. ಆಧ್ಯಾತ್ಮಿಕ ಪ್ರಯತ್ನದಿಂದ ಮಾತ್ರ ಅದನ್ನು ಸಾಕ್ಷಾತ್ಕರಿಸಿಕೊಳ್ಳಬಹುದು. ಮತ್ತು ಅದನ್ನು ಮಾಡಲು ಅಂತರಾವಲೋಕದ ಸ್ವ–ದೃಷ್ಟಿಯ ತೀವ್ರತೆಯ ಅವಶ್ಯಕತೆಯಿದೆ.

ಸ್ವಯಂ–ವೀಕ್ಷಣೆಯ ಅಸಹನೀಯ ಪರಿಶೀಲನೆಯ ಪ್ರಯತ್ನವನ್ನು ಮಾಡಲು ಬಹಳಷ್ಟು ಸಾಧಕರು ಅಥವಾ ಯೋಗಿಗಳೂ ಕೂಡ ಅಸಾಧ್ಯವಾದುದು ಮತ್ತು ಕೇವಲ ಪ್ರಕಾಶಮಾನವಾದ 'ಕೃಪೆ' ಮಾತ್ರ ಸಾಧಕನಿಗೆ ತನ್ನನ್ನು ತಾನು ಅರಿಯಲು ಸಹಾಯಮಾಡುತ್ತದೆ. ಮತ್ತು ಆತನಲ್ಲಿ ಏನು ಕೊರತೆಯಿದೆಯೋ ಅದನ್ನು ಸರಿಪಡಿಸಿ ರೂಪಾಂತರಗೊಳಿಸುತ್ತದೆ. ಮತ್ತು ಇಷ್ಟಾಗಿಯೂ ಕೇವಲ ಅವನ ಒಪ್ಪಿಗೆಯಿದ್ದರೆ ಹಾಗೂ ತನ್ನನ್ನು ತಾನು ದೈವೀ ಕ್ರಿಯೆಗೆ ಅರ್ಪಿಸಿಕೊಂಡರೆ ಮಾತ್ರ.

ನೇರ ನಡೆಯೆಂದರೆ ಕೇವಲ ತನ್ನೊಂದಿಗೆ ಮತ್ತು 'ದೈವತ್ವ'ದೊಂದಿಗೆ ನಿಷ್ಕಪಾನವಾಗಿರುವುದು. ಮತ್ತು ತನ್ನದೇ ರೀತಿಯಲ್ಲಿ ಅಡ್ಡದಾರಿ ಹಿಡಿದಿರಬಾರದು. ಸ್ವಯಂ ಸಮರ್ಥನೆಯೆಂದರೆ ಒಂದು ತಪ್ಪನ್ನು ಗುರುತಿಸುವ ಇಚ್ಛೆಯಿಲ್ಲದಿರುವುದು ಮತ್ತು ಶ್ರೀಮಾತೆಯವರ ಆಕ್ಷೇಪಣೆಯ ವಿರುದ್ಧವಾಗಿಯೂ ಸಹ ತಾನು ಸರಿ ಎಂದು ಸಾಬೀತು ಪಡಿಸುವ ಪ್ರಯತ್ನ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/51, 54**

## ಅಭೀಪ್ಸೆ

– ಅನುವಾದ: ಡಾ॥ ಮಹಾದೇವ ಸಕ್ರಿ, ವಿಜಯಪುರ

### ಆಕಾಂಕ್ಷೆಯ ಪ್ರಾಧಾನ್ಯತೆ

ಹೃದಯದಿಂದ ಒಂದು ಸರಳವಾದ, ನೇರವಾದ ಮತ್ತು ಪ್ರಾಮಾಣಿಕ ಕರೆ ಮತ್ತು ಆಕಾಂಕ್ಷೆ ಒಂದು ಪ್ರಮುಖ ವಿಷಯ ಮತ್ತು ಸಾಮರ್ಥ್ಯಗಳಿಗಿಂತ ಹೆಚ್ಚು ಅವಶ್ಯಕ ಮತ್ತು ಪರಿಣಾಮಕಾರಿ.

*

ನಾವು ಪ್ರಾಮಾಣಿಕವಾಗಿ ತಾಯಿಯವರ ಶಕ್ತಿಗೆ ಆಶಿಸುವುದು ಮತ್ತು ಸಾಧ್ಯವಾದಷ್ಟು ನಮ್ಮನ್ನು ನಾವು ಮುಕ್ತವಾಗಿರಿಸಿಕೊಳ್ಳುವುದು ಮಾತ್ರ. ಆಗ ಯಾವುದೇ ತೊಂದರೆಗಳು ಎದುರಾದರೂ ಅವುಗಳು ನಿವಾರಣೆಯಾಗುತ್ತವೆ – ಇದು ಸ್ವಲ್ಪ ಸಮಯ ತೆಗೆದುಕೊಳ್ಳಬಹುದು ಆದರೆ ಫಲಿತಾಂಶವು ಖಚಿತ.

*

ನಾವು ಆ ಶಕ್ತಿಯನ್ನು ಎಲ್ಲೆಡೆಯೂ ಊಹಿಸಿಕೊಳ್ಳಬೇಕು ಮತ್ತು ಕರೆಯಬೇಕು – ಅದು ಬಹಳೇ ಒಳ್ಳೆಯದು ಎಂದು ಅನಿಸಿದರೆ, ಆದರೆ ಕರೆಯಲ್ಲಿ ನಂಬುಗೆ ಮತ್ತು ಪ್ರಭಾವ ಇದ್ದಾಗ್ಯೂ ಸಹ ಅನ್ಯಥಾ ಅದು ಒಳಕ್ಕೆ ಹರಿಯಬಹುದು.

*

ನಾವು ಭಗವಂತನ ಮೇಲೆ ಭರವಸೆಯಿಡಲೇಬೇಕು ಮತ್ತು ಆದರೂ ಸ್ವಲ್ಪ ಸಾಧ್ಯವಾಗಿಸುವ ಸಾಧನೆ ಮಾಡಬೇಕು – ಆಗ ಭಗವಂತನು ನಮಗೆ ಫಲವನ್ನು ಆತ್ಮದ ಮತ್ತು ಅದರ ಆಕಾಂಕ್ಷೆಯ ಪರಿಮಾಣದ ಮೇಲೆ ನೀಡುತ್ತಾನೆ ಹೊರತು ಸಾಧನೆಯ ಪರಿಮಾಣದ ಮೇಲೆ ಅಲ್ಲ. ಚಿಂತಿಸುವುದೂ ಸಹ ಒಳ್ಳೆಯದನ್ನು ಮಾಡದು – "ನಾನು ಇದಾಗತಕ್ಕದ್ದು, ನಾನು ಅದಾಗತಕ್ಕದ್ದು, ನಾನು ಏನಾಗತಕ್ಕದ್ದು?". "ಭಗವಂತನು ನಾನು ಏನಾಗಬೇಕೆಂದು ಬಯಸಿದ್ದಾನೋ ಅದಾಗಲು ತಯಾರಿದ್ದೇನೆ ಆದರೆ ನಾನಂದುಕೊಂಡಂತೆ ಅಲ್ಲ" – ಉಳಿದೆಲ್ಲವೂ ಅದರ ತಳಹದಿಯ ಮೇಲೆ ಹೋಗಬೇಕು ಎಂದು ಹೇಳು.

*

ಯಾವುದೇ ಯೋಚನೆ, ಯಾವುದೇ ಸಂಗತಿ, ಯಾವುದಾದರೊಂದು ನಿನ್ನ ಮತ್ತು ಭಗವಂತನ ಮಾರ್ಗ ಮಧ್ಯೆ ಬರಲು ಏಕೆ ಸಮ್ಮತಿಸುವಿ; ನೀನು ಪೂರ್ಣ ಆಕಾಂಕ್ಷೆಯಲ್ಲಿ ಮತ್ತು ಸಂತಸದಲ್ಲಿ ಇದ್ದಾಗ ದೇವರ ಹಾಗೂ ನಿನ್ನ ಆಕಾಂಕ್ಷೆ ಹೊರತು ಯಾವ ಸಂಗತಿಯೂ ಮಹತ್ವದ್ದಲ್ಲ, ಯಾವುದೂ ಗಣನೆಗಲ್ಲ. ನಮಗೆ ಭಗವಂತನು ಬೇಗನೆ, ಸಂಪೂರ್ಣವಾಗಿ, ಪೂರ್ತಿಯಾಗಿ ಬೇಕಾದರೆ, ಪರಿಪೂರ್ಣ, ಸರ್ವ ತಲ್ಲೀನವಾಗಿರುವ, ಆ ಒಂದು ವಿಷದೊಡನೆ ಯಾವುದೂ ಹಸ್ತಕ್ಷೇಪ ಮಾಡದ, ಉತ್ಸಾಹದ ವಿಧಾನ ಅದಾಗಬೇಕು.

ಭಗವಂತನ ಬಗ್ಗೆ ಮಾನಸಿಕ ಕಲ್ಪನೆಗಳು ಯಾವ ಮೌಲ್ಯವನ್ನು ಹೊಂದಿವೆ, ಅವನು ಹೇಗಿರಬೇಕು, ಅವನು ಹೇಗೆ ವರ್ತಿಸಬೇಕು, ಅವನು ಹೇಗೆ ವರ್ತಿಸಬಾರದು ಎಂಬ ಕಲ್ಪನೆಗಳು – ಅವೆಲ್ಲವೂ ಮಾರ್ಗದಲ್ಲಿ ಬರಬಹುದು. ಭಗವಂತನು ಮಾತ್ರ ಮುಖ್ಯ. ನಿಮ್ಮ ಪ್ರಜ್ಞೆಯು ದೈವವನ್ನು ಸ್ವೀಕರಿಸಿದಾಗ ಮಾತ್ರ ದೈವೀಕತೆ ಏನು ಎಂದು ನೀವು ತಿಳಿಯಬಹುದು, ಮೊದಲಲ್ಲ. ಕೃಷ್ಣ ಕೃಷ್ಣನೇ, ಅವನೇನು ಮಾಡಿದ, ಮಾಡಲಿಲ್ಲ ಎಂಬ ಚಿಂತೆ ನಮಗೆ ಬೇಡ; ಅವನನ್ನು ನೋಡುವುದು, ಅವನನ್ನು ಭೇಟಿಯಾಗುವುದು, ಅವನ ಬೆಳಕನ್ನು,

ಉಪಸ್ಥಿತಿಯನ್ನು, ಪ್ರೀತಿಯನ್ನು, ಆನಂದವನ್ನು ಅನುಭವಿಸುವುದು ಮಾತ್ರ ಮುಖ್ಯ. ಆದ್ದರಿಂದ ಯಾವಾಗಲೂ ಇದು ಆಧ್ಯಾತ್ಮಿಕ ಆಕಾಂಕ್ಷೆಯಾಗಿರುತ್ತದೆ – ಇದು ಆಧ್ಯಾತ್ಮಿಕ ಜೀವನದ ನಿಯಮವಾಗಿದೆ.

ಮನಸ್ಸಿನ ಈ ಕಲ್ಪನೆಗಳಲ್ಲಿ ಅಥವಾ ಚೈತನ್ಯದ ಯಾವುದೇ ಸೆಳೆತಗಳಲ್ಲಿ ಸಮಯವನ್ನು ಯಾವುದೆ ಕಾರಣಕ್ಕೂ ವ್ಯರ್ಥ ಮಾಡಬೇಡಿ – ಈ ಎಲ್ಲ ಅಸ್ಪಷ್ಟತೆಗಳನ್ನು ದೂರವಿಡಿ. ಅವಶ್ಯವಾದ ಒಂದು ವಸ್ತುವಿನ ಮೇಲೆ ಸ್ಥಿರವಾಗಿರಿ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/55–56**

**ಆಕಾಂಕ್ಷೆ ಮತ್ತು ಎಳೆತ (ಸೆಳೆತ)**

ಸಾಮಾನ್ಯವಾಗಿ, ಸೆಳೆತವು ಸ್ವಂತಕ್ಕಾಗಿ ವಸ್ತುಗಳನ್ನು ಬಯಸುವುದರಿಂದ ಬರುತ್ತದೆ – ಆಕಾಂಕ್ಷೆಯಲ್ಲಿ ಉನ್ನತ ಪ್ರಜ್ಞೆಯ ಅವರೋಹಣಕ್ಕಾಗಿ ಮತ್ತು ಅದನ್ನು ಕೈವಶ ಮಾಡಿಕೊಳ್ಳಲು ಸಮರ್ಪಣೆ ಇದೆ – ಕರೆಯು ಹೆಚ್ಚು ತೀವ್ರವಾದಂತೆ ಸಮರ್ಪಣೆಯು ಉತ್ಕಟವಾಗುತ್ತದೆ.

*

ಬೆಳಕನ್ನು ಒತ್ತಾಯಪೂರ್ವಕವಾಗಿ ಕೆಳತರುವ ಕೆಲಸವು ನಿಶ್ಚಿತವಾಗಿಯೂ ಒಂದು ತಪ್ಪು ಕೆಲಸ – ಅದನ್ನು ಕೆಳಗೆ ಎಳೆಯುವುದು. ಅತಿಮಾನಸವನ್ನು ಅಬ್ಬರದಿಂದ ಸ್ವೀಕರಿಸಲಾಗದು. ಸಮಯ ಬಂದಾಗ ಅದು ತನ್ನಷ್ಟಕ್ಕೆ ತಾನೆ ತೆರೆದುಕೊಳ್ಳುತ್ತದೆ – ಆದರೆ ಅಲ್ಲಿ ಮೊದಲಿಗೆ ಒಂದು ಮಹತ್ವದ ಒಪ್ಪಂದವನ್ನು ಸಹನೆಯಿಂದ ಮತ್ತು ಆತುರವಿಲ್ಲದೆ ಮಾಡಿಕೊಳ್ಳಬೇಕಾಗುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/61 – ಶ್ರೀ ಅರವಿಂದರು**

ಯಾವುದೇ ಮಾರ್ಗ ಅನುಸರಿಸಿದರೂ, ಮಾಡಬೇಕಾದ ಸಂಗತಿ ಯಾವುದೆಂದರೆ, ನಿಷ್ಠೆಯಿಂದಿರುವುದು ಮತ್ತು ಕೊನೆಯತನಕ ಹೋಗುವುದು. ನೀವು ಬಹಳ ಸಲ ಆ ನಿರ್ಣಯವನ್ನು ತೆಗೆದುಕೊಂಡಿದ್ದೀರಿ – ಅದಕ್ಕೆ ನೆರವಾಗಿ, ಚೇತನದ ಬಿರುಗಾಳಿಯು ನಿಮ್ಮ ಆತ್ಮದ ಆಕಾಂಕ್ಷೆಯನ್ನು ತಣಿಸದಿರಲಿ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/71 – ಶ್ರೀ ಅರವಿಂದರು**

# ಶರಣಾಗತಿ (ಸಮರ್ಪಣೆ)

## ಶರಣಾಗತಿಯ ತಾತ್ಪರ್ಯ

ಯಾವುದೇ ಸಂಕೋಚವಿಲ್ಲದೆ ಮತ್ತು ಅವರ ಎಲ್ಲ ಅಂಗಗಳಲ್ಲಿ ಯಾರು ತಮ್ಮನ್ನು ತಾವು ಭಗವಂತನಿಗೆ ಒಪ್ಪಿಸಿಕೊಳ್ಳುತ್ತಾರೊ ಅಂಥವರಿಗೆ ಭಗವಂತನು ತನ್ನನ್ನು ತಾನು ನೀಡುತ್ತಾನೆ. ಅಂಥವರಿಗೆ, ಶಾಂತ, ಜ್ಯೋತಿ, ಸಾಮರ್ಥ್ಯ, ಆನಂದ, ಸ್ವಾತಂತ್ರ್ಯ, ವಿಶಾಲತೆ, ಎಲ್ಲವುಗಳೂ ಜ್ಞಾನದ ಔನ್ನತ್ಯಗಳು ಮತ್ತು ಆನಂದದ ಸಾಗರಗಳು.

*

ಭಗವಂತನಿಗೆ ನಮ್ಮನ್ನು ನಾವು ಸಮರ್ಪಿಸಿಕೊಳ್ಳುವುದೇ ಶರಣಾಗತಿ – ನಾವೇನಾಗಿದ್ದೇವೆ ಅಥವಾ ನಮ್ಮ ಹತ್ತಿರ ಏನಿದೆ ಮತ್ತು ಸ್ವಂತದ್ದೆಂಬ ಭಾವನೆಯಿಲ್ಲದೆ ಎಲ್ಲವನ್ನೂ ಅರ್ಪಿಸುವುದು, ಬೇರೆ ಯಾವುದನ್ನೂ ಅಲ್ಲದೆ ಭಗವಂತನ ಇಚ್ಛೆಯನ್ನು ಮಾತ್ರ ಅನುಸರಿಸುವುದು, ಅಹಂಕಾರಕ್ಕಲ್ಲದೆ ಭಗವಂತನಿಗಾಗಿ ಮಾತ್ರ ಇರುವುದು.

*

ಸ್ವ–ಶರಣಾಗತಿ ಎಂದರೆ ನಿಮ್ಮದೆಲ್ಲವನ್ನೂ ಹಾಗೂ ನಿಮ್ಮನ್ನು, ಮನಸ್ಸನ್ನು ಮತ್ತು ಸರ್ವಸ್ವವನ್ನೂ ಭಗವಂತನಿಗಾಗಿ ತ್ಯಜಿಸಿಕೊಳ್ಳುವುದು. ಅದರಿಂದ, ಭಗವತ್ ಶಕ್ತಿಯು ಎಲ್ಲವನ್ನೂ ತೆಗೆದುಕೊಂಡು ಅದನ್ನು ಪರಿವರ್ತನೆ ಮಾಡಬಹುದು.

*

ಶರಣಾಗತಿ ಎಂದರೆ ನಮ್ಮಲ್ಲಿರುವುದೆಲ್ಲವನ್ನೂ ಭಗವಂತನಿಗಾಗಿ ಮೀಸಲಿಡುವುದು, ನಮ್ಮನ್ನೂ ಮತ್ತು ನಮ್ಮಲ್ಲಿ ಇದ್ದುದೆಲ್ಲವನ್ನೂ ಅರ್ಪಣೆ ಮಾಡುವುದು, ಆದರೆ ಭಗವತ್ ಸತ್ಯವು ನಮ್ಮ ಭಾವನೆಗಳ, ಕಾಮನೆಗಳ ಅಭ್ಯಾಸಗಳ ಇತ್ಯಾದಿಗಳ ಮೇಲೆ ಆಗ್ರಹ ಮಾಡದೆ ಅವೆಲ್ಲವುಗಳನ್ನೂ ತನ್ನ ಜ್ಞಾನದಿಂದ, ಸಂಕಲ್ಪದಿಂದ ಮತ್ತು ಕಾರ್ಯದಿಂದ ಎಲ್ಲೆಲ್ಲಿಯೂ ಬದಲಾಯಿಸಲು ಸಮ್ಮತಿಸಲಿಕ್ಕಾಗಿ.

*

ಅಲ್ಲಿ ಎರಡು ಸಾಧ್ಯತೆಗಳಿವೆ, ಒಂದು ವೈಯಕ್ತಿಕ ಪ್ರಯತ್ನದಿಂದ ಶುದ್ಧೀಕರಣ ಮಾಡಿಕೊಳ್ಳುವುದು (ಇದು ದೀರ್ಘ ಸಮಯ ತೆಗೆದುಕೊಳ್ಳುತ್ತದೆ), ಮತ್ತೊಂದು, ಭಗವಂತನ ಕೃಪೆಯ ನೇರ ಮಧ್ಯ ಪ್ರವೇಶದಿಂದ ಶುದ್ಧೀಕರಣ ಮಾಡಿಕೊಳ್ಳುವುದು (ಇದು ತ್ವರಿತವಾದ ಮಾರ್ಗ). ಎರಡನೆಯದಕ್ಕಾಗಿ, ಸಂಪೂರ್ಣ ಶರಣಾಗತಿ ಮತ್ತು ಸ್ವ–ಸಮರ್ಪಣೆ ಇರಲೇಬೇಕು. ಮತ್ತು ಅದಕ್ಕಾಗಿ ಭಗವತ್ ಶಕ್ತಿಯು ಪ್ರತಿ ಹೆಜ್ಜೆಯಲ್ಲೂ ತನ್ನ ಪೂರ್ಣ ಅಂಟಿಕೊಳ್ಳುವಿಕೆಯಿಂದ ಅದನ್ನು ಬೆಂಬಲಿಸುತ್ತ ಕಾರ್ಯಮಾಡಲು ಅನುವು ಮಾಡಿಕೊಡುವ, ಇಲ್ಲವಾದರೆ ನಿಶ್ಚಲವಾಗಿ ಮತ್ತು ನಿಶ್ಯಬ್ದವಾಗಿ ಉಳಿಯುವ ಅತಿ ಹೆಚ್ಚು ಶಾಂತ ಮನಸ್ಸನ್ನು ನಾವು ಹೊಂದಿರುವುದು ಆವಶ್ಯಕ. ರಾಮಕೃಷ್ಣರು ಹೇಳಿರುವಂತೆ ಮರಿ ಬೆಕ್ಕಿನ ಮನೋಭಾವವನ್ನು ಹೋಲುವ ಈ ಕೊನೆಯ ಷರತ್ತನ್ನು ಹೊಂದಿರುವುದು ಕಷ್ಟ. ಅವರು ಮಾಡುವ ಎಲ್ಲ ಆಲೋಚನೆಯ ಮತ್ತು ಬಯಕೆಯ ಅತ್ಯಂತ ಕ್ರಿಯಾತ್ಮಕ ಚಲನೆಗೆ ಒಗ್ಗಿಕೊಂಡಿರುವವರು ಚಟುವಟಿಕೆಯನ್ನು ಸ್ಥಗಿತಗೊಳಿಸಲು ಮತ್ತು ಮಾನಸಿಕ ಸ್ವಯಂ ನೀಡುವಿಕೆಯ ಸ್ತಬ್ಧತೆಯನ್ನು ಅಳವಡಿಸಿಕೊಳ್ಳಲು ಕಷ್ಟವಾಗುತ್ತದೆ. ಇದರರ್ಥ, ಅವರು ಯೋಗವನ್ನು ಮಾಡಲು ಅಥವಾ ಸ್ವಯಂ ನೀಡುವಿಕೆಗೆ ಬರಲು ಸಾಧ್ಯವಿಲ್ಲವೆಂದಲ್ಲ – ಶುದ್ಧೀಕರಣ ಮತ್ತು ಸ್ವಯಂ ನೀಡುವಿಕೆಯನ್ನು ಪೂರ್ಣಗೊಳಿಸಲು ಮಾತ್ರ ಬಹಳ ಸಮಯ ತೆಗೆದುಕೊಳ್ಳುತ್ತದೆ, ಮತ್ತು ಅದನ್ನು ಪೂರ್ತಿಮಾಡಲು ನಿರಂತರ ಪರಿಶ್ರಮ ಮತ್ತು ಧೃಢ ಸಂಕಲ್ಪ ನಾವು ಹೊಂದಿರಲೇಬೇಕು.

*

ನಂಬಿಕೆ, ದೇವರ ಮೇಲೆ ಅವಲಂಬನೆ, ಶರಣಾಗತಿ ಮತ್ತು ದೈವೀ ಶಕ್ತಿಗೆ ಸ್ವಯಂ ಸಮರ್ಪಣೆ ಅಗತ್ಯ ಮತ್ತು ಅನಿವಾರ್ಯ. ಆದರೆ ದೇವರ ಮೇಲಿನ ಅವಲಂಬನೆಯನ್ನು ಸೋಮಾರಿತನಕ್ಕೆ, ದೌರ್ಬಲ್ಯಕ್ಕೆ ಮತ್ತು ಕೆಳ ಸ್ವಭಾವದ ಪ್ರಚೋದನೆಗಳಿಗೆ ಶರಣಾಗತಿಗೆ ಒಂದು ಕ್ಷಮೆಯನ್ನಾಗಿ ಮಾಡಿಕೊಳ್ಳಬಾರದು; ಅದು ಅವಿರತ ಆಕಾಂಕ್ಷೆಯೊಂದಿಗೆ ಮತ್ತು ದೈವೀ ಸತ್ಯದ ಮಾರ್ಗದಲ್ಲಿ ಬರುವ ಸರ್ವವನ್ನೂ ನಿರಂತರವಾಗಿ ತಿರಸ್ಕರಿಸುವ ಅವಿಚ್ಛಿನ್ನ ಸ್ವಭಾವದೊಂದಿಗೆ ಸಾಗಬೇಕು. ದೈವೀ ಶರಣಾಗತಿಯು ಒಂದು ಕ್ಷಮೆಯಲ್ಲಿ, ಒಂದು ಮುಸುಕಿನಲ್ಲಿ ಅಥವಾ ನಮ್ಮ ಸ್ವಂತ ಬಯಕೆಗಳಿಗೆ ಮತ್ತು ನಿಮ್ನ ಚಲನೆಗಳಿಗೆ ಶರಣಾಗುವ

ಒಂದು ಸಂದರ್ಭದಲ್ಲಿ ಅಥವಾ ನಮ್ಮ ಅಹಮಿಕೆಗೆ ಅಥವಾ ಭಗವಂತನ ಕೃತಕ ತೋರಿಕೆಯ ಮೇಲೆ ಇಡುವಂಥ ಅಜ್ಞಾನದ ಹಾಗೂ ಕತ್ತಲೆಯ ಒಂದು ಪ್ರಭಾವದಲ್ಲಿ ಆವರ್ತನೆಯಾಗಲೇಬಾರದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/67, 86–87**

**ಶರಣಾಗತಿಯ ಕಾರ್ಯವಿಧಾನ**

ಶರಣಾಗತಿಯನ್ನು ಒಮ್ಮೆಲೆ ಮಾಡಲು ಸಾಧ್ಯವಿಲ್ಲ – ಅದು ಅಷ್ಟು ಸಲೀಸಾದುದಲ್ಲ; ಏಕೆಂದರೆ ಪ್ರತಿರೋಧಿಸುವಂಥದ್ದು ಜೀವಿಯಲ್ಲಿ ಬಹಳಷ್ಟಿದೆ. ಆದರೆ ಶರಣಾಗತರಾಗುವ ಬಯಕೆ ನಮ್ಮಲ್ಲಿ ಇರಬೇಕು. ಇದು ಒಂದು ಉಪಕರಣವಾಗುವ ಹಾಗೆ. ನಮ್ಮಲ್ಲಿ ಬಯಕೆ ಇದ್ದರೆ ಹಾಗೂ ಶ್ರೀಮಾತೆಯವರನ್ನು ಕೂಗಿದರೆ ಮತ್ತು ಅವರಿಗೆ ಸಾಧ್ಯವಾದಷ್ಟು ಹೆಚ್ಚು ತೆರೆದುಕೊಂಡರೆ, ಆಗ ಈ ಸಂಗತಿಗಳು ಸಹಜ ಗುಣದಲ್ಲಿ ನಿಧಾನವಾಗಿ ವಿಕಸಿಸುತ್ತವೆ.

*

ಶರಣಾಗತವಾಗುವ ಕಾರ್ಯವಿಧಾನವೇ ಒಂದು ತಪಸ್ಸು. ಅಷ್ಟೇ ಅಲ್ಲ, ವಾಸ್ತವವಾಗಿ ತಪಸ್ಸಿನ ಒಂದು ದ್ವಿಗುಣ ಕಾರ್ಯವಿಧಾನ ಮತ್ತು ಹೆಚ್ಚುತ್ತಿರುವ ಶರಣಾಗತಿ, ಶರಣಾಗತಿಯು ತಕ್ಕಮಟ್ಟಿಗೆ ಚನ್ನಾಗಿ ಪ್ರಾರಂಭವಾದಾಗಲೂ ಸಹ ದೀರ್ಘ ಸಮಯದವರೆಗೆ ಧೃಢವಾಗಿರುತ್ತದೆ. ಆದರೆ, ನಾವು ಸಾನಿಧ್ಯ ಮತ್ತು ಪ್ರಭಾವವನ್ನು  ಅನುಭವಿಸುವ ಒಂದು ಸಮಯ ಬರುತ್ತದೆ ಮತ್ತು ಅದು (ಶರಣಾಗತಿ) ಎಲ್ಲವನ್ನೂ ಮಾಡುತ್ತಿದೆ ಎಂದು ಹೆಚ್ಚೆಚ್ಚು  ಭಾಸವಾಗುತ್ತದೆ – ಆದ್ದರಿಂದ ದುಷ್ಟ ತೊಂದರೆಗಳು ಈ ಭಾವವನ್ನು ವ್ಯಾಕುಲಪಡಿಸುವುದಿಲ್ಲ ಮತ್ತು ವೈಯಕ್ತಿಕ ಪ್ರಯತ್ನವು ಇನ್ನು ಮುಂದೆ ಅಗತ್ಯವಿಲ್ಲ, ಕಷ್ಟದಿಂದ ಸಹ ಸಾಧ್ಯವಿಲ್ಲ. ಅದು ಸಹಜ ಗುಣವನ್ನು ದೈವದ ಕೈಗೆ ಪೂರ್ಣವಾಗಿ ಶರಣಾಗುವ ಸಂಕೇತವಾಗಿದೆ. ಈ ಅನುಭವ ಬರುವ ಮೊದಲೇ ನಂಬಿಕೆಯಲ್ಲಿ ಈ ಸ್ಥಾನವನ್ನು ತೆಗೆದುಕೊಳ್ಳುವ ಕೆಲವರು ಇದ್ದಾರೆ ಮತ್ತು ಭಕ್ತಿ ಹಾಗೂ ನಂಬಿಕೆ ಪ್ರಭಲವಾಗಿದ್ದರೆ ಅದು ಅನುಭವ ಬರುವವರೆಗೂ ಅವುಗಳನ್ನು ಅದರ ಮೂಲಕ ಸಾಗಿಸುತ್ತದೆ. ಆದರೆ ಎಲ್ಲರೂ ಮೊದಲಿನಿಂದಲೂ ಈ ಸ್ಥಾನವನ್ನು ತೆಗೆದುಕೊಳ್ಳಲು ಸಾಧ್ಯವಿಲ್ಲ – ಮತ್ತು ಅದನ್ನು ದೈವವೆಂದು ಭಾವಿಸಿ ತಪ್ಪು ಶಕ್ತಿಯ ಕೈಗೆ ತಮ್ಮನ್ನು ತಾವು

ಅರ್ಪಿಸಿಕೊಂಡರೆ ಕೆಲವರಿಗೆ ಇದು ಅಪಾಯಕಾರಿಯಾಗಬಹುದು. ಹೆಚ್ಚಿನವರಿಗೆ ತಪಸ್ಸಿನ ಮೂಲಕ ಶರಣಾಗತಿಯ ಒಳಗಡೆಗೆ ಬೆಳೆಯುವುದು ಅವಶ್ಯಕ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/69, 82**

**ಶರಣಾಗತಿಯ ತಿರುಳು**

ಮನಸ್ಸಿನ ಮತ್ತು ಪ್ರಾಣದ ಈ ಆಂತರಿಕ ಶರಣಾಗತಿಯನ್ನು ನಾನು ಶರಣಾಗತಿ ಎಂದು ಹೇಳಿದ್ದು. ಸಹಜವಾಗಿಯೇ ಅಲ್ಲಿ ಬಾಹ್ಯ ಶರಣಾಗತಿಯೂ ಇದೆ, ಚೇತನ ಅಥವಾ ಸಾಧನೆಯ ಅಗತ್ಯಕ್ಕೆ, ಸಮರ್ಪಣೆಯ ದೈವೀ ಮಾರ್ಗದರ್ಶನದ ನಮ್ರತೆಗೆ ಅಥವಾ ಗುರುವಿನ ಮಾರ್ಗದರ್ಶನಕ್ಕೆ (ನೇರವಾಗಿ ಅಥವಾ ಚೈತ್ಯನ ಮುಖಾಂತರ ಆ ಸ್ಥಿತಿಯನ್ನು ತಲುಪಿದ್ದರೆ) ವಿರುದ್ಧವಾಗಿ ಕಂಡುಬರುವ ಎಲ್ಲವನ್ನೂ ಬಿಟ್ಟುಕೊಡುವುದು. ಪ್ರಯೋಪವೇಶನವು (ಸಾಯುವವರೆಗೆ ಉಪವಾಸವಿರುವುದು) ಶರಣಾಗತಿಯೊಂದಿಗೆ ಯಾವುದೇ ಸಂಬಂಧವಿಲ್ಲವೆಂದು ನನಗೆ ತೋರುತ್ತಿಲ್ಲ ಎಂದು ನಾನು ಹೇಳಬಹುದು; ನನ್ನ ಅಭಿಪ್ರಾಯದಲ್ಲಿ ಇದೊಂದು ವಿಪರೀತ ರೀತಿಯ, ಸಾಮಾನ್ಯವಾಗಿ ಅಪಾಯಕಾರಿಯಾದ ತುಂಬಾ ಕಠಿಣವಾದ ತಪಸ್ಸಿನ ಒಂದು ರೂಪವಾಗಿದೆ. ಆದರೆ ನನ್ನ ಪತ್ರದಲ್ಲಿ ನಾನು ಮಾತನಾಡುತ್ತಿರುವುದು ಆಂತರಿಕ ಶರಣಾಗತಿಯ ಬಗ್ಗೆ.

ಭಗವಂತನಲ್ಲಿ ವಿಶ್ವಾಸ ಮತ್ತು ಭರವಸೆ ಈ ಆಂತರಿಕ ಶರಣಾಗತಿಯ ತಿರುಳಾಗಿದೆ. "ನನಗೆ ಭಗವಂತನಲ್ಲದೆ ಮತ್ತೆ ಬೇರೇನೂ ಅಲ್ಲ" ಎಂಬ ನಿಲುವನ್ನು ನಾವು ತೆಗೆದುಕೊಳ್ಳಬೇಕು. ಅದನ್ನು ಬಿಟ್ಟುಕೊಡಲು ನಿನಗೆ ಕೇಳಬಹುದೆಂದು ನೀನು ಯಾಕೆ ಯೋಚಿಸಬೇಕೆಂದು ನನಗೆ ತಿಳಿಯುತ್ತಿಲ್ಲ – ಅದು ಅಲ್ಲಿ ಇರದಿದ್ದರೆ, ಆಗ ಯೋಗವನ್ನು ಮಾಡಲಾಗುವುದಿಲ್ಲ. "ನನ್ನ ಆತ್ಮವು ಅದನ್ನು ಬಯಸುವುದರಿಂದ ನನ್ನನ್ನು ಸಂಪೂರ್ಣವಾಗಿ ಅವನಿಗೆ ಒಪ್ಪಿಸಿಕೊಳ್ಳುತ್ತೇನೆ, ಅದು ಹಾಗಾಗುವುದಿಲ್ಲ ಆದರೆ ನಾನು ಅವನನ್ನು ಭೇಟಿಯಾಗುತ್ತೇನೆ ಮತ್ತು ಅವನನ್ನು ಅರಿತುಕೊಳ್ಳುತ್ತೇನೆ. ಅದನ್ನು ಮತ್ತು ನನ್ನನ್ನು ಅವನ ಬಳಿಗೆ ತರಲು ಅವನು ನನ್ನಲ್ಲಿ ಮಾಡಿದ ಕ್ರಮದ (ರಹಸ್ಯ ಅಥವಾ ಮುಕ್ತ, ಮುಸುಕಿದ ಅಥವಾ ವ್ಯಕ್ತವಾದ) ಹೊರತುಪಡಿಸಿ ನಾನು ಏನನ್ನೂ ಕೇಳುವುದಿಲ್ಲ. ನನ್ನ ಸ್ವಂತ ಸಮಯ ಮತ್ತು ಮಾರ್ಗದ ಪ್ರಕಾರ ನಾನು ಆಗ್ರಹಿಸುವುದಿಲ್ಲ, ಅವನು ತನ್ನ ಸಮಯ

ಮತ್ತು ಮಾರ್ಗದ ಪ್ರಕಾರ ಮಾಡಲಿ, ನಾನು ಅವನಲ್ಲಿ ನಂಬಿಕೆ ಇಡುತ್ತೇನೆ, ಅವನ ಸಂಕಲ್ಪವನ್ನು ಒಪ್ಪುತ್ತೇನೆ, ಅವನ ಬೆಳಕು ಮತ್ತು ಉಪಸ್ಥಿತಿ ಹಾಗೂ ಸಂತೋಷಕ್ಕಾಗಿ ಅಚಲವಾಗಿ ಬಯಸುತ್ತೇನೆ, ಯಾವ ಸಂದರ್ಭದಲ್ಲೂ ಬಿಟ್ಟುಕೊಡದೆ ಮತ್ತು ಅವನ ಮೇಲೆ ಭರವಸೆಯಿಡುತ್ತ ಎಲ್ಲ ಕಷ್ಟಗಳ ಮತ್ತು ವಿಳಂಬಗಳ ಮೂಲಕ ಹೋಗುವೆ. ನನ್ನ ಮನಸ್ಸು ಶಾಂತವಾಗಿರಲಿ ಮತ್ತು ಅವನ ಕಡೆಗೆ ತಿರುಗಲಿ ಮತ್ತು ಅದನ್ನು ಅವನ ಬೆಳಕಿಗೆ ತೆರೆಯಲಿ; ನನ್ನ ಚೈತನ್ಯವು ಶಾಂತವಾಗಿರಲಿ ಮತ್ತು ಅವನ ಕಡೆಗೆ ಮಾತ್ರ ತಿರುಗಲಿ ಮತ್ತು ಅದನ್ನು ಅವನ ಶಾಂತಿ ಮತ್ತು ಸಂತೋಃಷಕ್ಕೆ ತೆರೆಯಲಿ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/70–71**

---

ನೀವು ಖಿನ್ನತೆಗೆ ಒಳಗಾದಾಗ ನಿಮ್ಮ ಮಾಮೂಲಿನ ಕೆಲಸವನ್ನು ನೀವು ತ್ಯಜಿಸಬೇಕಾದ ಸತ್ಯಾಂಶ ನೀವು ಸ್ಥಿರತೆಯಲ್ಲಿ ಗಳಿಸಿಲ್ಲ ಎಂದಲ್ಲ – ಇದರರ್ಥ ನೀವು ಗಳಿಸಿದ ಸ್ಥಿರತೆ ವೈಯಕ್ತಿಕ ಸದ್ಗುಣವಲ್ಲ ಆದರೆ ಅದು ಶ್ರೀಮಾತೆಯವರೊಂದಿಗೆ ನಿಮ್ಮ ಸಂಪರ್ಕವನ್ನು ಇಟ್ಟುಕೊಳ್ಳುವುದರ ಮೇಲೆ ಅವಲಂಬಿತವಾಗಿರುತ್ತದೆ – ಶ್ರೀಮಾತೆಯವರ ಪ್ರಭಾವವು ಅದರ ಹಿಂದೆ ಮತ್ತು ನೀವು ಮಾಡಬಹುದಾದ ಎಲ್ಲ ಪ್ರಗತಿಯ ಹಿಂದೆ ಇದೆ. ಅದಕ್ಕೆ ಸಂಪೂರ್ಣವಾಗಿ ತೆರೆದುಕೊಳ್ಳಲು ಮತ್ತು ಆಧ್ಯಾತ್ಮಿಕ ಪ್ರಗತಿಯನ್ನು ನಿಮ್ಮ ಸ್ವಂತ ಉದ್ದೇಶಕ್ಕಾಗಿ ಮಾತ್ರವಲ್ಲದೆ ದೈವೀ ಉದ್ದೇಶಕ್ಕಾಗಿ ಸಹ ಆ ಪ್ರಭಾವದ ಮೇಲೆ ಹೆಚ್ಚು ಅವಲಂಬಿಸಲು ಕಲಿಯಿರಿ – ನಂತರ ನೀವು ಹೆಚ್ಚು ಸರಾಗವಾಗಿ ಮುಂದುವರೆಯುವಿರಿ. ಅತ್ಯಂತ ಬಾಹ್ಯ ದೈಹಿಕ ಪ್ರಜ್ಞೆಯಲ್ಲಿ ಪೂರ್ಣ ಚೈತ್ಯನ ತೆರೆಯುವಿಕೆನ್ನು ಪಡೆಯುವಿರಿ. ನಿಮ್ಮ ಪ್ರಸ್ತುತ ಪ್ರತಿಕೂಲ ಅನುಭವದಿಂದ ನೀವು ತೆಗೆದುಕೊಳ್ಳಬೇಕಾದ ಪಾಠ ಅದು ಮತ್ತು ನಿರಾಶೆಯಲ್ಲ ಎಂಬುದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/113–14 – ಶ್ರೀ ಅರವಿಂದರು**

ಶರಣಾಗತಿ ಶ್ರೀಮಾತೆಯವರಿಗೆ – ಪ್ರಭಾವಕ್ಕೂ ಸಹ ಅಲ್ಲ, ಆದರೆ ಶ್ರೀಮಾತೆಯವರಿಗೆ ಮಾತ್ರ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/78 – ಶ್ರೀ ಅರವಿಂದರು**

# ವಿಶ್ವಾಸ

– ಅನುವಾದ: ಡಾ॥ ಬಲಭೀಮ ಭೀಡ, ರಾಯಚೂರು

**ಶ್ರದ್ಧೆ, ನಂಬಿಕೆ, ವಿಶ್ವಾಸ, ಭರವಸೆ**

ಶ್ರದ್ಧೆ ಅನ್ನುವುದು ಸಾಮಾನ್ಯ ಶಬ್ದ–ದೈವೀ ಅಸ್ತಿತ್ವ, ಜ್ಞಾನ, ಶಕ್ತಿ, ಪ್ರೇಮ ಮತ್ತು ಕೃಪೆ ಇವುಗಳಲ್ಲಿ ನಂಬಿಕೆ, ವಿಶ್ವಾಸ, ಮತ್ತು ಭರವಸೆಗಳು ಶ್ರದ್ಧೆಯ ರೂಪಗಳು, ಪರಿಣಾಮಗಳು.

ನಿಷ್ಠೆಯಿಂದ ಪ್ರಾರ್ಥಿಸಿದರೆ ಪರಮಾತ್ಮ ಖಂಡಿತವಾಗಿಯೂ ಆಲಿಸುತ್ತಾನೆ, ಸಹಾಯ ಮಾಡುತ್ತಾನೆ ಹಾಗೂ ಪರಮಾತ್ಮನು ಏನೇ ಮಾಡಲಿ ನಮ್ಮ ಒಳ್ಳೆಯದಕ್ಕೇ ಎಂಬ ಭಾವನೆಯೇ ವಿಶ್ವಾಸ.

ಭರವಸೆ ಅಂದರೆ ಮನಸ್ಸು ಮತ್ತು ಹೃದಯಗಳು ಪರಮಾತ್ಮನ ಮೇಲೆ ಮಾರ್ಗದರ್ಶನ, ರಕ್ಷಣೆಗಾಗಿ ಪೂರ್ಣ ರೂಪದಿಂದ ಅವಲಂಬನೆ ಹೊಂದಿರುವುದು.

*

*ಶ್ರದ್ಧೆ–ಕ್ರಿಯಾತ್ಮಕವಾದ ಸಂಪೂರ್ಣ ನಂಬಿಕೆ ಮತ್ತು ಸ್ವೀಕಾರ ನಂಬಿಕೆ. ಕೇವಲ ಬೌದ್ಧಿಕವಾಗಿ ಒಪ್ಪಿಕೊಳ್ಳುವುದು.*

*ಮನೋನಿಶ್ಚಯ–ಸರಿಯಾದ ತರ್ಕವೆಂದು ತೋರುವುದರ ಮೇಲಿನ ಬೌದ್ಧಿಕ ನಿಶ್ಚಯ.*

*ಅವಲಂಬನೆ–ವಿಶ್ವಾಸದ ಆಧಾರದಿಂದ ಬೇರೆಯವರ/ಬೇರೆಯವರ ಮೇಲೆ ಅವಲಂಬಿಸುವುದು.*

*ಭರವಸೆ–ಬೇರೆಯವರ (ಅಥವಾ ಪರಮಾತ್ಮನ) ಹೇಳಿಕೆಯೇ ಅವರ ಸಹಾಯ ನಮಗೆ ಸಿಕ್ಕೇತಿರುವುದೆಂಬ ಗಟ್ಟಿಯಾದ ಭಾವನೆ.*

*ವಿಶ್ವಾಸ–ಭರವಸೆಯ ಜೊತೆಗೆ ಒಂದು ರೀತಿಯ ಸುರಕ್ಷಿತ ಭಾವ.*

**ಶ್ರದ್ಧೆ ಅನುಭವದ ಮೇಲೆ ಆಧಾರಿತವಾಗಿರುವುದಿಲ್ಲ**

ಶ್ರದ್ಧೆಯು ಅನುಭವದ ಮೇಲೆ ಆಧಾರಿತವಾಗಿರುವುದಿಲ್ಲ. ಅದು ಅನುಭವವಾಗುವುದಕ್ಕಿಂತ ಮೊದಲೇ ಇರುತ್ತದೆ. ಯೋಗ ಆರಂಭವಾಗುವುದು

ಅನುಭವದ ಮೇಲಿಂದಲ್ಲ, ಶ್ರದ್ಧೆಯ ಬಲದ ಮೇಲಿಂದ, ಇದು ಕೇವಲ ಯೋಗ ಅಥವಾ ಆಧ್ಯಾತ್ಮಿಕ ಜೀವನದ ಬಗೆಗಳಲ್ಲ, ಸಾಮಾನ್ಯ ಜೀವನದಲ್ಲಿ ಕೂಡ ಇದು ಸತ್ಯ. ಕರ್ಮಯೋಗಿಗಳು, ಸಂಶೋಧನಾಕಾರರು, ಜ್ಞಾನವಂತರು ಎಲ್ಲರೂ ಒಂದು ಶ್ರದ್ಧೆಯಿಂದಲೇ ಸಾಗುತ್ತಾರೆ. ಒಂದು ಹಂತದವರೆಗೆ ಅಂದರೆ, ಸಾಕ್ಷಿ–ಪುರಾವೆ ಸಿಕ್ಕುವವರೆಗೆ, ಎಷ್ಟೇ ನಿರಾಶೆಯಾಗಲಿ, ಅಪಜಯವಾಗಲಿ, ಯಾವುದೇ ಒಂದು ಅಂಶ ಇದು ಸತ್ಯ ಎಂದು ಹೇಳುತ್ತಿರುವುದರಿಂದ, ಅವರು ಹಾಗೆಯೇ ಮುಂದು–ವರಿಯುತ್ತಾರೆ. ರಾಮಕೃಷ್ಣ ಪರಮಹಂಸರು ಯಾರೋ ಒಂದು ಸಲ ಅಂಥ ಶ್ರದ್ಧೆ ತಪ್ಪಲ್ಲವೇ ಎಂದು ಪ್ರಶ್ನೆ ಮಾಡಿದಾಗ ಅವರು ಹೇಳಿದಂತೆ, ಶ್ರದ್ಧೆ ಅಂದರೆ ಶ್ರದ್ಧೆ ಅಷ್ಟೇ, ಶ್ರದ್ಧೆ ಕುರುಡು ಇದ್ದೇ ಇರುತ್ತದೆ ಅಥವಾ ಇರುವುದೇ ಇಲ್ಲ. ಅದು ಅನ್ಯಥಾ ತಾರ್ಕಿಕ, ಸಾಕ್ಷ್ಯಾಧಾರಿತ ನಿರ್ಧಾರ ಅಥವಾ ಸಿದ್ಧ ಜ್ಞಾನವಾಗಿರುತ್ತದೆ.

**ಯೋಗದಲ್ಲಿ ಮೂಲಭೂತವಾಗಿ ಶ್ರದ್ಧೆ ಬೇಕೇ ಬೇಕು**

ಯಾವುದು ಇನ್ನು ಪ್ರಕಟವಾಗಿಲ್ಲವೋ, ಸಿದ್ಧವಾಗಿಲ್ಲವೋ ಅಥವಾ ಸಾಕಾರಗೊಂಡಿಲ್ಲವೋ, ಆದರೂ ನಮ್ಮೊಳಗಿನ ಜ್ಞಾತೃವಿಗೆ, ಯಾವುದೇ ಲಕ್ಷಣಗಳಲ್ಲದಿದ್ದರೂ ಯಾವುದು ಸತ್ಯವೆಂದು ಅನಿಸುವುದೋ, ಏನೇ ಆಗಲಿ ಅದನ್ನು ಅನುಸರಿಸುವುದು, ಪಡೆಯುವುದೇ ಪರಮಧ್ಯೇಯವೆಂದು ಅನಿಸುವುದೋ ಅದನ್ನು ಶ್ರದ್ಧೆ ಎಂದು ಕರೆಯಬೇಕು. ಅದನ್ನು ಆತ್ಮವು ಸಾಕ್ಷೀ ರೂಪದಿಂದ ಕಂಡುಕೊಂಡಿರುತ್ತದೆ. ಮನಸ್ಸಿನಲ್ಲಿ ಯಾವುದೇ ನಿರ್ದಿಷ್ಟ ನಂಬಿಕೆ ಇಲ್ಲದಿದ್ದರೂ, ಪ್ರಾಣಿಕವು ನಿರಾಕರಿಸಿದರೂ, ವಿರುದ್ಧವಾಗಿ ಹೋರಾಡಿದರೂ ಸಹ ಈ ಶ್ರದ್ಧೆ ಕೊನೆಯವರೆಗೂ ಉಳಿಯುತ್ತದೆ. ಯೋಗಾಭ್ಯಾಸ ಮಾಡುತ್ತಿದ್ದರೂ ಸಹ ನಿರಾಶೆಯ, ಖಿನ್ನತೆಯ ಅವಧಿಯನ್ನು, ದೀರ್ಘ ಅವಧಿಯನ್ನು ಅನುಭವಿಸಿದವರು ಯಾರಿದ್ದಾರೆ – ಆದರೆ ಏನೇ ಆಗಲಿ ಶ್ರದ್ಧೆಯು ಅವನನ್ನು ತಾಳ್ಮೆಗೆಡದಂತೆ ಮಾಡುತ್ತದೆ, ತಾನು ಅನುಸರಿಸಿರುವುದು ಪರಮಸತ್ಯ ಎಂದು ಅದಕ್ಕೆ ಗೊತ್ತಿರುತ್ತದೆ. ಯೋಗದಲ್ಲಿ ಶ್ರದ್ಧೆ ಅಂದರೆ ಮೂಲಭೂತವಾಗಿ ಇದೇ – ಅದು ಆತ್ಮದಲ್ಲಿ ಅಂತರ್ಗತವಾಗಿರುತ್ತದೆ, ಪರಮಾತ್ಮನಿದ್ದಾನೆ. ಪರಮಾತ್ಮನನ್ನು ಮಾತ್ರ ಸೇವಿಸಬೇಕು ಎಂಬ ಗಟ್ಟಿಯಾದ ಭಾವ, ನಿರ್ಧಾರ ಇರುತ್ತದೆ. ಅದಕ್ಕೆ ಹೋಲಿಸಿದರೆ ನಮ್ಮ ಜೀವನದಲ್ಲಿ ಅದಕ್ಕಿಂತ ಹೆಚ್ಚಿನ ಮುಖ್ಯವನ್ನಷ್ಟು ಬೇರೆ ಯಾವುದೂ ಇಲ್ಲ. ಈ ಶ್ರದ್ಧೆ ಬೆಳೆದಿದೆ. ಅಂತೆಯೇ ಯೋಜನೆಯೆಡೆಗೆ ಬರಲು

ನಿರ್ಧರಿಸಿದ್ದೀರಿ, ಮತ್ತು ಈ ಶ್ರದ್ಧೆಗೆ ಯಾರೂ ಹೆಚ್ಚಲ್ಲ ಅಥವಾ ಕಡಿಮೆಯಾಗಿಲ್ಲ – ನೀನು ನಿನ್ನ ಸಾಕ್ಷ್ಯದಲ್ಲಿರುವದನ್ನು ಗಮನಿಸಿದರೆ ಯೋಗವು ಇನ್ನೂ ಹೆಚ್ಚು ತೀಕ್ಷ್ಣದಲ್ಲಿ ಹಾಗೂ ವ್ಯಾಪಕವಾಗಿದೆ ಎಂದು ತೋರುತ್ತದೆ. ಅಲ್ಲಿಯವರೆಗೆ ವ್ಯಕ್ತಿಯಲ್ಲಿ ಇದು ಇರುವುದೋ, ಅವನು ಆಧ್ಯಾತ್ಮಿಕ ಜೀವಾತ್ಮನಿದ್ದಾನೆ ಎಂದು ಅರ್ಥ. ಅಂಥವನಿಗೆ ಅನೇಕ ತೊಂದರೆಗಳಿದ್ದರೂ, ಅಡಚಣೆಗಳಿದ್ದರೂ, ವಿರೋಧ, ನಿರಾಕರಣೆ ಇದ್ದರೂ ಕೂಡ, ಅವನು ಆಧ್ಯಾತ್ಮಿಕ ಜೀವನದಲ್ಲಿ ಯಶಸ್ಸು ಗಳಿಸುವುದು ಖಚಿತವೆಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ.

*

ಇಂಥ ಶ್ರದ್ಧೆಯನ್ನು ನೀವು ಬೆಳೆಸಿಕೊಳ್ಳಬೇಕು – ಅಂದರೆ ಶ್ರದ್ಧೆಯು ತರ್ಕ ಮತ್ತು ಸಾಮಾನ್ಯ ಜ್ಞಾನಕ್ಕೆ ಅನುಗುಣವಾಗಿರಬೇಕು – ಭಗವಂತ ಇದ್ದಾನೆ, ನಿಮ್ಮನ್ನು ಅವನೇ ಆ (ಯೋಗ) ಮಾರ್ಗದರ್ಶಕ್ಕೆಯುತ್ತಿದ್ದಾರೆ ಅಂದರೆ, ಭಗವಂತನ ಮಾರ್ಗದರ್ಶನ ಅವಶ್ಯಕವಾಗಿ ಇದ್ದೇ ಇರುವುದು, ಆದ್ದರಿಂದ ಏನೇ ತೊಂದರೆಗಳು ಅವುಗಳನ್ನು ಪಾರು ಮಾಡುವಿರಿ ಎಂಬ ಗಟ್ಟಿ ನಂಬಿಕೆ ಬೇಕು. ವಿರೋಧಿ ಶಕ್ತಿಗಳ ಮಾತುಗಳನ್ನು ಆಲಿಸಬಾರದು. ಅವು ಸದಾ ಅಪಜಯವನ್ನು ಕುರಿತೇ ಹೇಳುತ್ತಾ ನಿಮ್ಮ ಪ್ರಾಣಿಕವು ಸಹ ಅದನ್ನೇ ಪ್ರತಿಧ್ವನಿಸುತ್ತ ಹೋಗುವುದು ಅದನ್ನು ಸಹ ಕೇಳಿಸಿಕೊಳ್ಳಲೇಬಾರದು, ಅನೇಕ ತೊಂದರೆಗಳಿವೆ. ಕಷ್ಟಗಳು ಎಂದ ಮಾತ್ರಕ್ಕೆ ಯಶಸ್ಸು ಸಿಗುವುದಿಲ್ಲವೆಂದಾಗಲೀ, ಭಗವಂತನಪ್ರಕಟವಾಗಿಲ್ಲ ಎಂದ ಮಾತ್ರಕ್ಕೆ ಅವನು ಪ್ರಕಟ ಆಗುವುದಿಲ್ಲವೆಂದು ಯೋಚಿಸಬಾರದು. ಸಾಮಾನ್ಯವಾಗಿ ತುಂಬ ಕಠಿಣದಿಂದ ಹಾಗೂ ಮಹಾಗುರಿಯನ್ನು ಸಾಧಿಸಬೇಕಾದರೆ ವ್ಯಕ್ತಿಯು "ಶ್ರಮವೇ" ಗೆಲ್ಲುವವರೆಗೆ ಪ್ರಯತ್ನ ಮಾಡುತ್ತಲೇ ಇರುತ್ತೇನೆ, ಮತ್ತು ನಿಯತ್ತಾಗಿ ಖಂಡಿತವಾಗಿಯೂ ಗೆದ್ದೇ ಗೆಲ್ಲುತ್ತೇನೆ – ಏನೇ ಕಠಿಣ ಪ್ರಸಂಗಗಳು ಬಂದರು ಅಡ್ಡಿ ಇಲ್ಲ ಎಂಬ ಮನೋಭಾವ ತಾಳುತ್ತನಲ್ಲವೇ, ಅಂಥ ದೃಢವಾದ ಮನಃಸಂಕಲ್ಪ ಬೇಕೇಬೇಕು. ಅಷ್ಟೇ ಅಲ್ಲ ಆಸ್ತಿಕನಾದವನು ಇದೇ ನಿರ್ಧಾರಕ್ಕೆ "ಭಗವಂತ ಇದ್ದಾನೆ, ಅವನಿದ್ದಾನೆ ಅಂತಲೇ ನಾನು ಅವನನ್ನು ಅನುಸರಿಸಿಕೊಂಡು ಹೋಗುವ ದಾರಿ ಎಂದಿಗೂ ತಪ್ಪದು. ಅವನು ಸಿಕ್ಕುವವರೆಗೆ ಏನೇ ಆಗಲಿ ನಾನು ಮುನ್ನಡೆಯುತ್ತೇವೆ" ಎಂಬ ಶ್ರದ್ಧೆಯನ್ನು ಬೆರೆಸುತ್ತಾರೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/88, 91–94**

## ಶ್ರದ್ಧಾ ಪೂರ್ಣತೆ

ಆತ್ಮದ ಬೆಳಕಿಗೆ ಮತ್ತು ಪರಮಾತ್ಮನ ಕಡೆಗೆ ಶ್ರದ್ಧೆಯಿಂದ ಇರುವುದೆಂದರೆ, ಹಿಂದೆ ಏನೋ ಘಟಿಸಿದೆ, ನಿಮ್ಮಿಂದ ಏನೋ ತಪ್ಪಾಗಿದೆ ಎಂಬ ವಿಚಾರವನ್ನು ಕುರಿತು ನಾನು ಮಾತನಾಡುತ್ತಿಲ್ಲ. ನಾನು ಎಲ್ಲ ರೀತಿಯ ದುರ್ಭಕ ಪ್ರಸಂಗಗಳಲ್ಲಿ ಮತ್ತು ಆಕ್ರಮಣಗಳಲ್ಲಿ ಕೂಡ ಯಾವುದೇ ತಪ್ಪು ಸಂದೇಶಗಳಿಗೆ ಕಿವಿಗೊಡದಿರುವುದು ಯಾವುದೇ ದುಷ್ಟ ಪ್ರಭಾವ, ಆಮಿಷಗಳಿಗೆ ಬಲಿಬೀಳದಿರುವುದು ಹಾಗೂ ಪರಮ ಸತ್ಯದ ಕರೆಗೆ ಹಾಗೂ ಬೆಳಕಿನ ಆಹ್ವಾನಕ್ಕೆ ವಿರುದ್ಧವಾಗಿರುವ ಎಲ್ಲವನ್ನು ವಿರೋಧೀಸುವುದು ಅತ್ಯಂತ ಅವಶ್ಯಕ ಎಂಬುದನ್ನು ಪ್ರಬಲವಾಗಿ ಪ್ರತಿಪಾದಿಸಿಲಿಚ್ಛೆಸುತ್ತೇನೆ. ಏನೇ ಸಂದೇಹ ನಿರಾಶೆಯ ಪ್ರಸಂಗ ಎದುರಾದಾಗಲೆಲ್ಲ "ನಾನು ಪರಮಾತ್ಮನ ಸಂಬಂಧಪಟ್ಟವನು, ನಾನೆಂದಿಗೂ ಸೋಲಲಾರ" ಎಂದು ಗಟ್ಟಿಮಾಡಿ ವಿಶ್ವಾಸದಿಂದ ಹೇಳಬೇಕು. ಅಪ್ರವಿತ್ರವಾದ ಸಲಹೆಗಳು, ಅಯೋಗ್ಯ ಉಪದೇಶಗಳಿಗೆ "ನಾನು ಪರಮಾತ್ಮನೇ ಆಯ್ಕೆ ಮಾಡಿದ ಅಮೃತತ್ವದ ಕೂಸು. ನಾನು ತನ್ನ ಬಗೆಗೂ ಹಾಗೂ ಪರಮಾತ್ಮನಿಗೂ ಶ್ರದ್ಧೆಯಿಂದಿರಬೇಕು – ಗೆಲವು ಶತಸಿದ್ಧ, ನಾನೊಬ್ಬ ಎಡವಿಗೂ ಸಹ ಪುನಃ ಮೇಲೇಳುತ್ತೇನೆ" ಎಂದು ಉತ್ತರಿಸಬೇಕು. ಇವೆಲ್ಲವನ್ನು ಬಿಟ್ಟು ಇನ್ನಾವುದೋ ಕ್ಷುಲಕ ಆದರ್ಶದ ಬೆನ್ನು ಬೀಳಬೇಕು ಎಂದು ಆಯುಷ್ಯವೊಡ್ಡುವ ಎಲ್ಲ ಪ್ರಭಾವಗಳಿಗೂ 'ಇಲ್ಲ', ಇದು ಎಲ್ಲದಕ್ಕೂ ಸಂತೈಸಬಲ್ಲದು. 'ನಾನು ಎಲ್ಲ ಪರೀಕ್ಷೆಗಳನ್ನು ತಾಳಿಕೊಳ್ಳುತ್ತೇನೆ, ದೈವೀ ಯಾತ್ರೆಯ ಕೊನೆಯ ಗುರಿ ಮುಟ್ಟುವವರೆಗೂ ಎಲ್ಲ ಕಿರಿಕಿರಿಗಳನ್ನು ಸಹಿಸಿಕೊಳ್ಳುತ್ತೇನೆ' ದೈವೀ ಕರೆಗೆ ಶ್ರದ್ಧಾವಂತನಾಗಿರರುವುದೆಂದರೆ ಇದು ಎಂದು ಹೇಳಬಯಸುತ್ತೇನೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/99**

## ಶ್ರದ್ಧೆಯ ಸಿದ್ಧಾಂತ

ನಾನು ಅತ್ಯಂತ ಪ್ರಬಲ ಕೇಂದ್ರೀಕೃತ, ಮತ್ತು ಸಾಧ್ಯವಾಗುವುದಾದರೆ ಸಂಪೂರ್ಣ ಶ್ರದ್ಧೆಯು ಬಗ್ಗೆ ಹೇಳಿದೆ. ಏಕೆಂದರೆ ನಿನ್ನ ಮನಃಸ್ಥಿತಿ ಬಹುಶಃ ಹಾಗೆಯೇ ಇದೆ ಎಂದೆನ್ನಿಸಿತು, ನೀನು ಸಂಪೂರ್ಣವಾಗಿ ಪ್ರತಿಸ್ಪಂದನೆಯ ಬಗೆಗೆ ಕಾಳಜಿ ವಹಿಸುತ್ತೀ – ಅಂದರೆ ಸಾಕ್ಷಾತ್ಕಾರ, ಸಾನಿಧ್ಯ ಮುಂತಾದ ಅನೇಕ ಇಲ್ಲವಾದರೆ ಎಲ್ಲೋ ಕೆಲವು ಜನ ಮಾತ್ರ ಸಾಧನೆ ಮಾಡಲು ಸಾಧ್ಯವಾದೀತು. ಒಟ್ಟಿನಲ್ಲಿ ನಾನು ಹೇಳಬಯಸುವುದೇನೆಂದರೆ, ಕೇಂದ್ರಿಕೃತವಾದ ಶ್ರದ್ಧೆ ಅಂದರೆ

ಅಂತರಾತ್ಮದಲ್ಲಿರುವ ಶ್ರದ್ಧೆ, ಕೇಂದ್ರ ಸತ್ತೆಯಲ್ಲಿರುವ ಶ್ರದ್ಧೆ, ಇದು ಮನಸ್ಸಿನ ಹಿಂದೆ, ಅದರ ಸಂದೇಹಗಳ ಹಿಂದೆ, ಪ್ರಾಣಿಕದ ನಿರಾಶೆಗಳ ಹಿಂದೆ ಹಾಗೂ ಭೌತಿಕದ ಅವಶ್ಯಕತೆಗಳ ಹಿಂದೆ ಇರುತ್ತದೆ, ಆದರೆ ಇವೆಲ್ಲ ಭೌತಿಕದ ಅವಶ್ಯಕತೆಗಳ ಹಿಂದೆ ಇರುತ್ತದೆ, ಆದರೆ ಇವೆಲ್ಲ ಹೋಗಬೇಕು. ಅಂದರೆ ವಿರೋಧ ಶಕ್ತಿಗಳ ಆಕ್ರಮಣದ ನಂತರ ಕೂಡ ಪುನಃ ಬಂದು ವ್ಯಕ್ತಿಯನ್ನು ಮುಂದಕ್ಕೊಯ್ಯುವುವು. ಶ್ರದ್ಧೆ ಬಲಿಷ್ಠವಾಗಿರಬಹುದು, ಪ್ರಕಾಶಮಾನವಾಗಿರಬಹುದು, ಅಥವಾ ತುಸು ಪೇಲವವಾಗಿರಬಹುದು, ದುರ್ಬಲವೆಂದು ತೋರಬಹುದು, ಆದರೆ ಏನೇ ಆಗಲಿ ಅದು ಮಾಯವಾಗದೆ ಹಾಗೆಯೇ ಉಳಿದರೆ, ಅದು ವಸ್ತುತಃ ನಿಜವಾದ ಸಂಗತಿಯೇ, ನಿರಾಶೆ, ಕತ್ತಲೆಯ ಸ್ಥಿತಿ ಇವು ಸಾಧನೆಯಲ್ಲಿ ಸಾಮಾನ್ಯವಾಗಿ ಬಂದು ಹೋಗುತ್ತವೆ, ಪಾಶ್ಚಿಮಾತ್ಯ ಅಥವಾ ಪೌರ್ವಾತ್ಯ ಯಾವುದೇ ದೇಶಗಳಲ್ಲಿರಲಿ, ಯೋಗದಲ್ಲಿ ಇದು ಸಾಮಾನ್ಯ. ಅವೆಲ್ಲವೂ ನನಗೆ ಚೆನ್ನಾಗಿ ಗೊತ್ತಿದೆ. ಆದರೆ ನನ್ನ ಅನುಭವದ ಪ್ರಕಾರ, ಅವು ತೀರ ಅವಶ್ಯಕ ಸಂಗತಿಗಳೇನಲ್ಲ, ಬೇಕಾದರೆ ಅವುಗಳನ್ನು ನಿರಾಕರಿಸಬಹುದು. ಆದ್ದರಿಂದಲೇ ಅವು ನಿನ್ನೊಳಗೆ ಆಗಲಿ ಅಥವಾ ಮತ್ತಾರಿಗೋ ಆಗಲಿ ಬಂದಾಗ, ಅವುಗಳ ಸಮ್ಮುಖದಲ್ಲಿ ನಾನು ಈ ಶ್ರದ್ಧೆಯ ಸಿದ್ಧಾಂತವನ್ನು ಹೇಳುತ್ತಿರುತೇನೆ, ಅಷ್ಟರ ಮೇಲೂ ಅವು ಬಂದರೆ, ಅವುಗಳನ್ನು ತಾಳಿಕೊಳ್ಳಬೇಕು. ಅವುಗಳಿಂದ ಪಾರಾಗಬೇಕು, ಬೆಳಕಿನಲ್ಲಿ ಬರುವ ಪ್ರಯತ್ನ ಮಾಡಬೇಕು. ಸಮುದ್ರದ ಬಗೆಗಿನ ನಿನ್ನ ಕನಸು ಪೂರ್ಣತಃ ಸತ್ಯವಾಗಿದೆ, ಕೊನೆಯಲ್ಲಿ ಬಿರುಗಾಳಿ ಮತ್ತು ಭರತಗಳು ಸಾಧಕನಲ್ಲಿ ದೈವೀ ಕೃಪೆ ಬರುವುದನ್ನು ತಡೆಯುವುದಿಲ್ಲ. ನಿನ್ನೊಳಗಿನ ಇರುವು ಬಹುಶಃ ಇದನ್ನೇ ಕೇಳುತ್ತಿದೆ ಎಂದು ನನಗೆ ತೋರುತ್ತಿದೆ. – ಕೃಪೆಯ ಅಲೌಕಿಕ ಪವಾಡ, ಅಂದರೆ ನಿನ್ನೊಳಗೆ ಆತ್ಮ ಪರಿಪೂರ್ಣತೆಗಾಗಿ ದೀರ್ಘಕಾಲ ಪರಿಶ್ರಮ ಪಡುವುದು, ದೀರ್ಘ ತಪಸ್ಸು ಇವುಗಳ ಬಗ್ಗೆ ಅಸಹನೆ ಇದೆ ಎಂದು ತೋರುತ್ತದೆ. ಆಯಿತು. ಅದು ಬಂದೇ ಬರುತ್ತದೆ, ಇಲ್ಲಿ ಎಷ್ಟೋ ಜನರಿಗೆ ಬಂದಿದೆ, ಎಷ್ಟೋ ವರ್ಷಗಳ ಪದೇ ಪದೇ ಸೋಲಿನ ನಂತರ, ಅನೇಕ ತೊಂದರೆ, ಕಠಿಣ ಪರಿಶ್ರಮದ ನಂತರ ಸಿದ್ಧಿಸಿದೆ. ಆದರೆ ಅದು ಸಾಮಾನ್ಯವಾಗಿ ಹಾಗೆಯೇ ಬರುತ್ತದೆ, ನಿಧಾನವಾಗಿ ಬೆಳೆದು ಬರುವ ದೈವೀ ಅನುಗ್ರಹಕ್ಕಿಂತ ಈ ರೀತಿ ಬರುವುದೇ ಹೆಚ್ಚು. ಏನೇ ಆಗಲಿ, ಎಷ್ಟೇ ಸಲ ಅಯಶಸ್ವಿಯಾಗಲಿ ಪದೇಪದೇ ಬಿಡದೇ ನಿರಂತರವಾಗಿ ದೈವೀಕೃಪೆಗಾಗಿ ಪ್ರಾರ್ಥನೆ ಮಾಡುತ್ತಲೇ ಇದ್ದರೆ, ಅದು ಬಂದೇ ಬರುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/95–96 – ಶ್ರೀ ಅರವಿಂದರು**

*ದೈವೀ ಕೃಪೆಯ ಬಗ್ಗೆ ಸಂದೇಹವೇ ಇಲ್ಲ. ಅದು ಪೂರ್ಣತಃ ಸತ್ಯ. ಮಾನವನು ಪ್ರಾಮಾಣಿಕನಾಗಿದ್ದರೆ, ದಿವ್ಯತೆಯುಳ್ಳವನಾಗಿದ್ದರೆ ಖಂಡಿತ–ವಾಗಿಯೂ ಭಗವಂತನನ್ನು ತಲುಪೇ ತಲುಪುತ್ತಾನೆ. ಆದರೆ ಅತಿ ಶ್ರೀಘವಾಗಿ ಹಾಗೆ ಆಗುತ್ತದೆ ಎಂದಿಲ್ಲ. ನಿಮ್ಮ ತಪ್ಪುಗಳೂ ಇರುತ್ತವೇ ಭಗವಂತನಿಗೆ ಆ ರೀತಿ ಐದು ವರ್ಷ, ಆರು ವರ್ಷ ಹೀಗೆ ಅವಧಿ ನಿಗದಿತಗೊಳಿಸಬೇಡಿ. ಪರಿಣಾಮ ಕಂಡುಬಂದಿಲ್ಲವೆಂದು ಸಂದೇಹಪಡಬೇಡಿ. ವ್ಯಕ್ತಿಯು ಕೇಂದ್ರದ ಸತ್ತೆಗೆ ನಿಷ್ಠಾವಂತನಾಗಿರಬಹುದು, ಆದರೆ ಸಾಕ್ಷಾತ್ಕಾರ ಆಗುವ ಮೊದಲು ಅನೇಕ ಸಂಗತಿಗಳು ಸರಿ ವರ್ತನೆ ಹೊಂದಬೇಕಾದ ಅವಶ್ಯಕತೆ ಇರಬಹುದು ಅವನ ನಿಷ್ಠೆಯು ಅವನಿಗೆ ಸಹನೆಯನ್ನು ಕಲಿಸಬೇಕು. ಏಕೆಂದರೆ ಪರಮಾತ್ಮನಿಗಾಗಿ ಇರುವ ಬಯಕೆಯನ್ನು ಯಾವುದೂ ಇಂಗಿಸಲಾರದು ವಿಳಂಬ, ನಿರಾಶೆ, ತೋರಿ ಅಥವಾ ಬೇರೆ ಇನ್ನೇನು ಇರಲಿ, ಯಾವುದು ಇಂಗಿಸಲಾರದು.*

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/117 – ಶ್ರೀ ಅರವಿಂದರು**

## ಅಸ್ತಿತ್ವ

### ಗತಿ ಪಡೆದು ಪ್ರಗತಿಯನ್ನು ನಿಧಾನಗೊಳಿಸುತ್ತದೆ

ಆಳವಾದ ಮತ್ತು ಆಧ್ಯಾತ್ಮಿಕ ಅರ್ಥದಲ್ಲಿ ನಿಜವಾದ ದೃಢ ಸಾಕ್ಷಾತ್ಕಾರದಲ್ಲಿ ಸಾಕ್ಷಾತ್ಕಾರವಾದ ಸಂಗತಿಯು ಭೌತಿಕ ಸಂಗತಿಗಳಿಂದ ಹೆಚ್ಚು ಸತ್ಯವೂ, ವಾಸ್ತವಿಕವೂ, ಕ್ರಿಯಾಶೀಲವೂ ಅಸ್ತವೂ ಆಗುತ್ತದೆ. ಸಗುಣ ಅಥವಾ ನಿರ್ಗುಣ ಬ್ರಹ್ಮನ ಸಾಕ್ಷಾತ್ಕಾರವು ಸಾಧನೆಯ ಆರಂಭದಲ್ಲಿ ಆಗುವುದಿಲ್ಲ. ಮೊದಲ ಕೆಲ ವರ್ಷಗಳಲ್ಲಿ ಅಥವಾ ಅನೇಕ ವರ್ಷಗಳವರೆಗೆ ಆಗುವುದಿಲ್ಲ. ಎಲ್ಲೋ ಅಪರೂಪಕ್ಕೆ ಕೆಲವರಿಗೆ ಹಾಗೆ ಆಗುವುದುಂಟು. ನನಗಂತೂ ಯೋಗ ಆರಂಭ ಮಾಡುವ 15 ವರ್ಷ ಮೊದಲು ಲಂಡನ್ನಿನಲ್ಲಿ ಇರುವಾಗ ಹಾಗೂ ಅನಂತರ ಯೋಗಾಭ್ಯಾಸ ಮಾಡಿದ 5 ವರ್ಷಗಳ ತರುವಾಯ ಈ ಅನುಭವ ಆಯಿತು. ಇದು ಅತ್ಯಂತ ಅಲ್ಪಾವಧಿಯಲ್ಲಿ ಬಹು ಶ್ರೀಘದಲ್ಲಿ ಅದೂ ಅಸಂಖ್ಯ ಎಂದು ನಾನು ಭಾವಿಸುತ್ತೇನೆ – ಎಕ್ಸ್‌ಪ್ರೆಸ್ ಟ್ರೇನ್ ಹೋಗುತ್ತದಲ್ಲ, ಆ ವೇಗದಲ್ಲಿ ಎಂದು ಹೇಳಬಹುದು – ಈ ಮಧ್ಯೆ ಅನೇಕ ಸಣ್ಣ ಪುಟ್ಟ ಲಕ್ಷಣ ಅನುಭವ, ಸಿಕ್ಕುಗಳು

ಆದವು ಅದು ಬೇರೆ ವಿಷಯ. ಆದರೆ ಇಷ್ಟು ಬೇಗ ಆಗಲೆಂಬ ನಿರೀಕ್ಷೆ ಹಾಗೂ ಬೇಡಿಕೆ ಹಾಗೂ ಅದಾಗದ್ದಿದ್ದರೆ ಬೇಜಾರಾಗಿ ನಿರಾಶೆ ಹೊಂದಿ, ಇದೆಲ್ಲ ಬೇಗ ಬರುವಂಥದಲ್ಲ. ಯೋಗ ಗೀಗ ಎಲ್ಲ ಅಸಾಧ್ಯದ ಮಾತು ಎಲ್ಲೋ ಕೆಲ ಯುಗಗಳಲ್ಲಿ, ಕೆಲ ಯೋಗಿಗಳಿಗೆ ಅಥವಾ ಸಾಧಕರಿಗೆ ಆಗಿತ್ತೋ ಏನೋ, ಆಗಬಹುದೇನೋ, ಎಂಬ ಧೋರಣೆ ತಾಳುವುದು ಸಹನೆಯ, ತಾಳ್ಮೆಯ ಕೊರತೆಯನ್ನು ತೋರಿಸುತ್ತದೆ. ಬಹಳ ಜನರು ಹೇಳುವಂತೆ ಆರಂಭದಲ್ಲಿ ನಿಧಾನವಾಗಿರಲೆಂದೇ ಆಶಿಸಬೇಕು. ಯಾವಾಗ ಪ್ರಕೃತಿಯು ತಯಾರಾಗುವುದೋ ಮತ್ತು ಪರಮಾತ್ಮನೆಡೆಗೆ ಪೂರ್ಣತಃ ಘನೀಭೂತವಾಗುವುದೋ, ಆಗ ನಿಶ್ಚಿತ ಪರಿಣಾಮಕಾರಿಯಾದ ಪರಿಣಾಮಗಳು ಬರುವುದು ಒಳ್ಳೆಯದು. ಕೆಲವರಿಗೆ ಅತಿ ಶ್ರೀಘ್ರದಲ್ಲಿ ಐಕ್ಯತೆಯ ಅನುಭವ ಬಂದುಬಿಡಬಹುದು, ಬೇರೆಯವರಿಗೆ ಹೋಲಿಸಿದರೆ ಬಹು ಬೇಗನೇ ಬಂದು ಬಿಡಲೂಬಹುದು. ಆದರೆ ಅಂಥವರೂ ಸಹ ತಮಗಾದ ಅನುಭವವು, ಗಟ್ಟಿಯಾದ ಸಾಕ್ಷಾತ್ಕಾರವಾಗಿ ಬೆಳೆಯಬೇಕೆಂದು ತಾಳ್ಮೆ, ಸಹನೆ ತಂದುಕೊಂಡು ಪ್ರಜ್ಞಾಪೂರ್ವಕವಾಗಿ ಪ್ರಯತ್ನ ಮಾಡುವುದನ್ನು ತಪ್ಪಿಸಿಕೊಳ್ಳಲಾರರು. ನಿನ್ನ ಬೇಡಿಕೆಯನ್ನು ನಾನು ಇಷ್ಟಪಡುತ್ತೇನೋ ಇಲ್ಲವೋ ಅದು ಬೇರೆ ವಿಷಯ, ಅದು ಸಂಬಂಧಿಸಿದ ಪ್ರಶ್ನೆಯಲ್ಲ. ಅದು ವಾಸ್ತವಿಕವಾಗಿ ಸತ್ಯ ಇಷ್ಟ–ಅನಿಷ್ಟಗಳ ಪ್ರಶ್ನೆ ಅಲ್ಲಿಲ್ಲ, ಇವೆರಡೂ ನನ್ನನ್ನು ಬಾಧಿಸುವುದಿಲ್ಲ. ಮುಖ್ಯವಾದದೇನೆಂದರೆ ಯಾರು ಕೃತಜ್ಞರಾಗಿದ್ದಾರೋ, ಉತ್ಸಾಹ ಪೂರ್ಣರಾಗಿದ್ದಾರೋ, ಹಂತ ಹಂತವಾಗಿ ನಿಧಾನವಾಗಿಯಾದರೂ ಅಡ್ಡಿ ಇಲ್ಲ, ಮುಂದುವರಿಯಲು ಸಿದ್ಧರಿದ್ದಾರೋ, ಮತ್ತು ಅವಶ್ಯಬಿದ್ದರೆ ಯಾರು ಸಹನೆ ಇಲ್ಲದೇ ಕೇವಲ ಗಡಿಬಿಡಿ ಮಾಡುತ್ತ, ಹೆಜ್ಜೆ ಹೆಜ್ಜೆಗೂ ಗೊಣಗುತ್ತ ನಿರಾಶರಾಗುತ್ತ ಹೋಗುವುರೋ, ಅವರಿಗಿಂತ ಬಹು ವೇಗವಾಗಿ ಮುಂದುವರಿಯಬಲ್ಲರು – ನಾನಿಂಥ ಅನೇಕ ಉದಾಹರಣೆಗಳನ್ನು ನೋಡಿದ್ದೇನೆ, ಇದಕ್ಕೆ ಅಪವಾದಗಳಿರಬಹುದು, ಇಲ್ಲವೆಂತಲ್ಲ, ಮತ್ತು ನೀನು ಅಂಥ ಅಪವಾದಗಳಲ್ಲಿ ಒಬ್ಬನಾಗಿದ್ದರೂ ಅಡ್ಡಿಯಿಲ್ಲ – ಆ ರೀತಿ ಇರುವುದು ಕಡಿಮೆ. ನಾನು ಹೇಳುವುದಿಷ್ಟೇ, ನೀನು 'ಭರವಸೆ ಮತ್ತು ಉತ್ಸಾಹ ಹಾಗೂ ನಂಬಿಕೆ'ಗಳನ್ನು ಉಳಿಸಿಕೊಂಡಿದ್ದೇ ಆದರೆ, ಬಹು ದೊಡ್ಡ ಅದೃಷ್ಟ ಕಾದಿದೆ.

**ಪರಿವರ್ತನೆಯ ಯೋಗದಲ್ಲಿ ತಾಳ್ಮೆಯ ಅವಶ್ಯಕತೆ**

ನೀನು ಹೇಳುವಂತೆ ಅನೇಕ ವರ್ಷಗಳ ನಂತರವೂ ನಿನ್ನ ಸ್ವಭಾವದಲ್ಲಿ ಬದಲಾವಣೆ ಆಗಿಲ್ಲ. ಕೆಲವು ವರ್ಷಗಳಲ್ಲಿಯೇ ಬಾಹ್ಯ ಪ್ರಕೃತಿಯನ್ನು

ಬದಲಾಯಿಸುವುದು ಸಾಧ್ಯವಾಗುವಷ್ಟು ಸುಲಭವಾಗಿದ್ದರೆ ಎಷ್ಟು ಚೆನ್ನಾಗಿತ್ತು ಎಂದು ನಾನು ಕೂಡ ಯೋಚಿಸುವುದುಂಟು. ನೀನು ನಿಜವಾದ ಸಮಸ್ಯೆಯನ್ನು ಮರೆಯುತ್ತಿರುವಿ, – ಈ ಪ್ರಕೃತಿಯಲ್ಲಿ ಎಲ್ಲೆಡೆ ವ್ಯಾಪ್ತವಾಗಿರುವ ಅಹಂದಿಂದ ಕಳಚಿಕೊಳ್ಳುವುದು – ಈ ಸಮಸ್ಯೆಯನ್ನು ಕೇವಲ ಇತ್ತೀಚೆಗಷ್ಟೇ ನೀನು ಎದುರಿಸುವ ಸಾಹಸವನ್ನು ಗಂಭೀರವಾಗಿ ತೆಗೆದುಕೊಂಡಿರುವಿ. ಆದರೆ ಅದನ್ನು ಕೆಲವೇ ತಿಂಗಳಲ್ಲಿ ಸಾಧಿಸಿಬಿಡವುದು ಸಾಧ್ಯವಾಗುವುದಿಲ್ಲ. ಒಳ್ಳೆಯ ಸಾಧಕರಾದವರು ಕೂಡ ಅನೇಕ ಅನುಭವಗಳ ನಂತರ, ಉನ್ನತ ಸ್ತರಗಳಲ್ಲಿ ಪರಿವರ್ತನೆ ಆದನಂತರವೂ ಕೂಡ ಇಲ್ಲಿ ಸಾಧಿಸುವುದು ತುಂಬಾ ಇದೆ ಎಂಬುದನ್ನು ಕಂಡುಕೊಳ್ಳುತ್ತಾರೆ. ಹೀಗಿರುವಾಗ ಎಲ್ಲರಿಗಿಂತ ಭಿನ್ನವಾಗಿ ನೀನು ಬಾಹ್ಯ ಪ್ರಕೃತಿಯ ದೋಷಗಳಿಂದ ಮುಕ್ತವಾಗಿ ಬಿಡಬೇಕೆಂದು ನಿರೀಕ್ಷಿಸುವಿರಿ? ಈ ತೆರನಾದ (ಅಂದರೆ ಪೂರ್ಣ ಯೋಗ) ಯೋಗಕ್ಕೆ ಅಪಾರ ತಾಳ್ಮೆ ಬೇಕು, ಏಕೆಂದರೆ ಇಲ್ಲಿ ಅತಿ ಮೂಲದಲ್ಲಿಂದ ಬದಲಾವಣೆ ಆಗುವುದರ ಜೊತೆಗೆ ಪ್ರತಿಯೊಂದು ಸಣ್ಣ ಪುಟ್ಟ ಭಾಗದ ಬದಲಾವಣೆ ಆಗಬೇಕಾಗಿದೆ. "ಈ ಸಲ ನನ್ನನ್ನು ಶ್ರೀಮಾತೆಗೆ ಸಂಪೂರ್ಣವಾಗಿ ಅರ್ಪಿಸಿಕೊಳ್ಳಲು ನನ್ನ ದೃಢ ನಿರ್ಧಾರ ಮಾಡಿದ್ದೇನೆ. ಆದರೆ ಈ ದಿನ ಅದು ಸಾಧ್ಯವಾಗಿಲ್ಲ, ವಿಪರೀತವಾಗಿ, ಹಳೆಯ ಸಂಗತಿಗಳೇ ಮತ್ತೆ ಎದ್ದುಕೊಡುತ್ತವೆ; ಮತ್ತೇನು ಮಾಡಲು ಸಾಧ್ಯ, ನಾನು ಈ ಯೋಗಕ್ಕೆ ಅಯೋಗ್ಯನಿದ್ದೇನೆ, ಈ ಯೋಗ ಸಾಧನೆಯನ್ನು ಬಿಟ್ಟುಬಿಡುವುದೇ ಒಳ್ಳೆಯದು" ಎಂದು ಮುಖ ತಿರುವುವದು ಸರಿಯಲ್ಲ. ನೀನು ಆ ರೀತಿಯ ನಿರ್ಧಾರ ಮಾಡಿರುವ ವಿಷಯಕ್ಕೆ ಬಂದರೆ, ಆ ರೀತಿ ನಿರ್ಧಾರ ಮಾಡುತ್ತಲೇ ಅದಕ್ಕೆ ವಿರುದ್ಧವಾಗಿರುವ ಎಲ್ಲ ಸಂಗತಿಗಳೂ ಎದ್ದು ಕೂಡುತ್ತವೆ. ಇದು ಅವಶ್ಯವಾಗಿ ಆಗಿಯೇ ಆಗುತ್ತದೆ. ನೀನು ಮಾಡಬೇಕಾದುದೇನೆಂದರೆ, ತುಸು ಹಿಂದೆ ಸರಿದು ನಿಲ್ಲಬೇಕು, ಗಮನಿಸಬೇಕು ಮತ್ತು ಅವಶ್ಯವಿರುವುದನ್ನು ತ್ಯಜಿಸಬೇಕು. ಇಂಥ ಸಂಗತಿಗಳು ದಾಳಿ ಮಾಡದಂತೆ, ನಿನ್ನನ್ನು ಆವರಿಸಿಕೊಳ್ಳದಂತೆ ಜಾಗ್ರತೆ ವಹಿಸಬೇಕು. ನಿನ್ನ ಕೇಂದ್ರ ಸಂಕಲ್ಪವನ್ನು ಇವುಗಳಿಂದ ದೂರದಲ್ಲಿರಿಸಬೇಕು, ಶ್ರೀಮಾತೆಯ ಶಕ್ತಿಗಾಗಿ ಪ್ರಾರ್ಥಿಸಬೇಕು, ಇಂಥ ವಿರೋಧಿ ಶಕ್ತಿಗಳಿಗೆ ಬಿದ್ದರೂ ಸಹ, ಇದು ಸಾಮಾನ್ಯವಾಗಿ ಆಗುವಂಥದೇ ಸಾಧ್ಯವಾದಷ್ಟೂ ಹೊರಬರಬೇಕು ಮತ್ತು ಮುನ್ನಡೆಯಬೇಕು. ಎಲ್ಲ ಯೋಗಿಗಳೂ ಇದನ್ನೇ ಮಾಡುತ್ತಾರೆ. ಅಸಾಧ್ಯ? ಅಸಾಧ್ಯ ಎಂಬುದೇ ಇಲ್ಲ. ತೊಂದರೆಗಳಿರುತ್ತವೆ, ಆದರೆ ಅಸಾಧ್ಯವೆಂಬುದಿರುವುದಿಲ್ಲ.

ಮಾಡಲೇಬೇಕೆಂಬುದುದನ್ನು ಗಟ್ಟಿಯಾಗಿ ನಿರ್ಧರಿಸಿದರೆ, ಈಗಲೇ ಆಗಲಿ ನಂತರವೇ ಆಗಲಿ ಮಾಡುವುದು ನಿಶ್ಚಿತ – ಏನೇ ಇರಲಿ ಸಾಧ್ಯವಾಗುವುದು ಖಂಡಿತ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/112–116 – ಶ್ರೀ ಅರವಿಂದರು**

---

*ಎಷ್ಟೇ ನಿಬಿಡಾಂಧಕಾರವಿರಲಿ ಈ ಜಗತ್ತಿನಲ್ಲಿ ಅಂಥ ಕತ್ತಲೆ ಹಾಗೂ ಮಾನವನ ಭೌತಿಕ ಸ್ವಭಾವ ಕೂಡ ಹಾಗೆಯೇ ಇದೆ. ನಿಜವಾದ ಸತ್ಯದ ಬೆಳಕಿನ ಕಿರಣವು ಎಂಥ ಘನವಾದ ಕತ್ತಲೆಯನ್ನು ಕ್ಷೀಣವಾಗಿಸುತ್ತದೆ. ಇದನ್ನು ನಂಬಿ ಮತ್ತು ಈ ನಂಬಿಕೆಗೆ ಬದ್ಧರಾಗಿರಿ.*

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/102 – ಶ್ರೀ ಅರವಿಂದರು**

## ಭಕ್ತಿ

– ಅನುವಾದ: ಪ್ರೊ. ವೀರಭದ್ರಪ್ಪ ಕೆ.

**ದೈವತ್ವದೆಡೆಗೆ ಒಂದೆ ಸಮೀಪ ಮಾರ್ಗ**

ದೈವವನ್ನು ಸಮೀಪಿಸಲು ಧ್ಯಾನವು ಒಂದು ವಿಧಾನ ಮತ್ತು ಒಂದು ಉನ್ನತ ಮಾರ್ಗವಾಗಿದೆ. ಆದರೆ ಅದನ್ನು ನಾವು ಸಮೀಪದ ದಾರಿ ಎನ್ನಲು ಬರುವುದಿಲ್ಲ – ಬಹಳಷ್ಟು ಜನರಿಗೆ ದೂರ ದಾರಿಯಾಗಿದೆ ಮತ್ತು ಅತಿ ಎತ್ತರಕ್ಕೆ ಕೊಂಡೊಯ್ಯುತ್ತಾದಾರೂ ಕಠಿಣ ಮಾರ್ಗವಾಗಿದೆ. ಅದು ಉನ್ನತವಾದುದನ್ನು ಅವತರಣಗೊಳಿಸಿ ತಂದಾಗ ಮಾತ್ರ ಅದು ಸಮೀಪ ಮಾರ್ಗ – ಅಷ್ಟಾದರೂ ಅದು ತ್ವರಿತವಾಗಿ ಇಟ್ಟಂತಹ ತಳಹದಿ ಮಾತ್ರವಾಗಿರುತ್ತದೆ. ತದನಂತರ ಧ್ಯಾನವು, ಆ ತಳಹದಿಯ ಮೇಲೆ ಒಂದು ಬೃಹತ್ ಕಟ್ಟಡ ಕಟ್ಟಬೇಕು, ಇದು ಅನಿವಾರ್ಯ ಕೂಡ, ಅದು ಬಿಟ್ಟರೆ ಬೇರೆ ಸಮೀಪ ಮಾರ್ಗವಿಲ್ಲ.

ಕರ್ಮ ಒಂದು ಸರಳ ದಾರಿ – ಆದರೆ ಮಾಡುವವರ ಮನಸ್ಸು ದೈವವನ್ನು ಹೊರತುಪಡಿಸಿ ಬರೀ ಕರ್ಮದ ಮೇಲೆ ಕೇಂದ್ರಿಕೃತಗೊಳ್ಳದಿದ್ದರೆ. ಗುರಿ ಮಾತ್ರ ದೈವವಿರಬೇಕು. ಆಗ ಆ ಕಾಯಕವು ಅದನ್ನು ತಲುಪಲು ವಿಧಾನ ಮಾತ್ರವಾಗಿದೆ, ಇಲ್ಲಿ ಸ್ತೋತ್ರಗಳನ್ನು, ಪದಗಳನ್ನು, ಕವನಗಳನ್ನು ಉಪಯೋಗಿಸುವುದು ಇತ್ಯಾದಿ. ಇದರಿಂದ ವ್ಯಕ್ತಿ ತನ್ನ ಅಂತರಂಗದ ಸತ್ತೆಯೊಂದಿಗೆ ನೇರ ಸಂಪರ್ಕ ಸಾಧಿಸಲು ತಯಾರುಗೊಳ್ಳಲು ಸಹಾಯ ಮಾಡುತ್ತದೆ, ಅಷ್ಟಕ್ಕೆ ನಾವು ನಿಲ್ಲಬಾರದು,

ಸತ್ಯವಸ್ತುವಿನ ತನಕ ಹೋಗಿ ತಲುಪಬೇಕು. "ನಾನು ಸಾಹಿತಿ" ನಾನೊಬ್ಬ ಕವಿ, ನಾನೊಬ್ಬ ಚಿತ್ರಕಲಾವಿದ ಎಂದು ಆಲೋಚಿಸಿದರೆ ಅವರಿಗಷ್ಟೆ ಉಪಯುಕ್ತ, ಅದು ಯೋಗಿಯ ಲಕ್ಷಣವಲ್ಲ. ಆದ್ದರಿಂದ ಕೆಲವು ಸಲ ನಾ ಹೇಳಿದಂತೆ ನಮ್ಮ ವ್ಯವಹಾರವೇನಿದ್ದರೂ ಯೋಗಿಯಾಗಿರುವುದು, ಬರೀ ಕವಿ, ಚಿತ್ರಕಲಾವಿದ ಇತ್ಯಾದಿ ಆಗಿರುವುದಲ್ಲ. ಪ್ರೇಮ, ಭಕ್ತಿ, ಶರಣಾಗತಿ, ಅಂತರಾತ್ಮದ ತೆರೆಯುವಿಕೆಗಳು ಮಾತ್ರ ದೈವಕ್ಕಾಗಿ ಇರುವ ಸಮೀಪ ಮಾರ್ಗಗಳು – ಅಥವಾ ಇರಬಹುದು; ಪ್ರೇಮ ಮತ್ತು ಭಕ್ತಿ ಪ್ರಾಮಾಣಿಕವಾಗಿದ್ದರೆ, ಆದುದರಿಂದ ಆಧ್ಯಾತ್ಮಿಕದ ಬೇಡಿಕೆ ಮತ್ತು ವಿರಹ, ಅಭಿಮಾನ, ನಿರಾಸೆ, ಇವುಗಳು ಮೇಲಕ್ಕೂ ಕೆಳಕ್ಕೂ ಆಟವಾಡಿ ಈ ಮಾರ್ಗವನ್ನು ಸಮೀಪ ಮಾರ್ಗ ಮಾಡದೆ ದೂರದ ಮಾರ್ಗವನ್ನಾಗಿಸುತ್ತವೆ, ಅಂಕು ಡೊಂಕು, ನೇರವಲ್ಲದ ಸಾಧನೆ, ತಮ್ಮ ಅಹಂಕಾರದ ಸುತ್ತು ಗಿರಕಿ ಹೊಡೆಯುತ್ತಾ ದೈವತ್ವದೆಡೆಗೆ ಸಾಗದೆ ಉಳಿಯುವಂತಾಗುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/212**

### ಪ್ರೇಮವು ಪ್ರಾಣದ ಭಾವನಾತ್ಮಕತೆಯಲ್ಲ

ದೈವದೆಡೆ ತಿರುಗಿದ ಪ್ರೇಮವನ್ನು ನಾವು ಸಾಮಾನ್ಯವಾಗಿ ಮನುಜರು ಕರೆಯುವ ಹಾಗಿರುವ ಪ್ರಾಣದ ಸಂವೇದನೆಯಲ್ಲ; ಅದು ಪ್ರೇಮವಲ್ಲ, ಆದರೆ ಪ್ರಾಣದ ಬಯಕೆ, ಸ್ವಾಧೀನಪಡೆದುಕೊಳ್ಳುವ ಪ್ರವೃತ್ತಿ, ಹಿಡಿದಿಟ್ಟುಕೊಳ್ಳುವ ತುಡಿತ ಮತ್ತು ಏಕಮೇವತ್ವವನ್ನು ಸಾಧಿಸುವುದು. ಇದಂತು ದೈವಿ ಪ್ರೇಮವಲ್ಲ, ಆದರೆ ಇದನ್ನು ಯಾವುದೇ ಪ್ರಮಾಣದಲ್ಲಿ ಯೋಗದಲ್ಲಿ ಬೆರೆಯಲು ಬಿಡಬಾರದು. ದೈವದೆಡೆಗಿನ ನಿಜವಾದ ಪ್ರೇಮವೆಂದರೆ ಸ್ವಯಂ–ಕೊಡುವುದು, ಬೇಡಿಕೆ ಇಲ್ಲದಿರುವುದು.

ನಿಜವಾದ ಪ್ರೇಮವೆಂದರೆ ಸ್ವಯಂ–ಕೊಡುವುದು, ಬೇಡಿಕೆ ಇಲ್ಲದಿರುವುದು, ಪೂರ್ತಿಯಾಗಿ ಸಮರ್ಪಿಸುವುದು ಮತ್ತು ಶರಣಾಗತಿ; ಯಾವುದೇ ಹಕ್ಕನ್ನು ಮಂಡಿಸುವುದಿಲ್ಲ ಯಾವುದೇ ಶರತ್ತನ್ನು ಇಡುವುದಿಲ್ಲ, ಚೌಕಾಶಿಯಿಲ್ಲ, ಹೊಟ್ಟೆಕಿಚ್ಚಿನ ಹಿಂಸಾಚಾರಗಳನ್ನು ತರುವುದಿಲ್ಲ ಅಥವಾ ಪ್ರತಿಷ್ಠೆ ಅಥವಾ ಸಿಟ್ಟು – ಇಂತಹುಗಳಿಂದ ಅದು ಕೂಡಿಲ್ಲ. ಇದಕ್ಕೆ ಪ್ರತಿಯಗಿ ದಿವ್ಯಮಾತೆ ತನ್ನನ್ನು ಕೊಟ್ಟುಕೊಳ್ಳುತ್ತಾಳೆ, ಆದರೆ ನಿಃಶುಲ್ಕವಾಗಿ – ಮತ್ತು ಇದು ಅಂತರಂಗಕ್ಕೆ ಕೊಡುಗೆಯಾಗುತ್ತದೆ – ಆಕೆಯ ಸಾನಿಧ್ಯ ನಿಮ್ಮ ಮನಸ್ಸಿನಲ್ಲಿ, ನಿಮ್ಮ ಪ್ರಾಣದಲ್ಲಿ,

ನಿಮ್ಮ ಭೌತಿಕ ಪ್ರಜ್ಞೆಯಲ್ಲಿ, ಆಕೆಯ ಶಕ್ತಿ ನಿಮ್ಮನ್ನು ದೈವಿ ಪ್ರಕೃತಿಯನ್ನಾಗಿ ಮರುನಿರ್ಮಾಣ ಮಾಡುತ್ತದೆ, ನಿಮ್ಮ ಶಕ್ತಿಯ ಎಲ್ಲಾ ಕ್ರಿಯೆಗಳನ್ನು ತೆಗೆದುಕೊಂಡು ಮತ್ತು ಅವುಗಳನ್ನು ಪರಿಪೂರ್ಣಗೊಳಿಸಲು ಮತ್ತು ತೃಪ್ತಿಗೊಳಿಸಲು ಅವಳ ಪ್ರೇಮ ನಿಮ್ಮನ್ನು ಆವರಿಸುತ್ತಾ, ತನ್ನ ಕರಗಳಿಂದ ನಿಮ್ಮನ್ನು ಆವರಿಸಿ ದೈವದೆಡೆಗೆ ನಿರ್ದೇಶಿಸುತ್ತಾಳೆ. ಇದನ್ನೆ ನೀವು ಅಭೀಪ್ಸೆಯನ್ನಾಗಿ ಸಂವೇದಿಸಬೇಕು ಮತ್ತು ನಿಮ್ಮ ಎಲ್ಲಾ ಸತ್ತೆಯಲ್ಲಿ ಮತ್ತು ಭೌತಿಕದ ತನಕ ಇದನ್ನು ಗಟ್ಟಿಗೊಳಿಸಬೇಕು, ಮತ್ತು ಇಲ್ಲಿ ಯಾವುದೇ ಸಮಯದ ಮತ್ತು ಸಂಪೂರ್ಣತೆಗೆ ಮಿತಿಯಿರುವುದಿಲ್ಲ. ನೀವು ನಿಜವಾಗಿ ಅಭೀಪ್ಸೆಪಟ್ಟು ಅದನ್ನು ಪಡೆದರೆ, ಬೇರೆ ಯಾವ ಹಕ್ಕು ಸಾಧಿಸಲೂ ಜಾಗವಿರುವುದಿಲ್ಲ ಅಥವಾ ಯಾವುದೇ ಆಸೆ ಈಡೇರಲಿಲ್ಲವೆಂಬ ನಿರಾಸೆಯಿರುವುದಿಲ್ಲ ನೀವು ನಿಜವಾಗಿ ಅಭೀಪ್ಸೆಪಟ್ಟರೆ, ವಿಫಲವಾಗದೆ ಪಡೆಯುವಿರಿ, ಹೆಚ್ಚು ಹೆಚ್ಚು ಪರಿಶುದ್ಧಿ ಸಾಧಿಸಿದಂತೆಲ್ಲ, ಪ್ರಕೃತಿಯಲ್ಲಿ ಅಥವಾ ಸ್ವಭಾವದಲ್ಲಿ ಏನು ಬದಲಾವಣೆ ಬೇಕಿದೆಯೋ ಅದಾಗಲಾರಂಭಿಸುತ್ತದೆ. ನೀವು ನಿಮ್ಮ ಪ್ರೇಮವನ್ನು ಸ್ವಾರ್ಥ ಸ್ವಾಮ್ಯದಿಂದ ಮತ್ತು ಆಸೆಯಿಂದ ದೂರವಿಟ್ಟು ಶುದ್ಧವಾಗಿಸಿ; ನೀವು ಉತ್ತರವಾಗಿ ನಿಮಗೆಷ್ಟು ಬೇಕು ಎಷ್ಟು ಪಡೆಯಲು ಸಮರ್ಥಿಸಿದ್ದೀರಿ ಅಷ್ಟು ಪ್ರೇಮ ನಿಮಗೆ ದಕ್ಕುವುದು ನಿಮ್ಮ ಗಮನಕ್ಕೆ ಬರುವುದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/338–39**

### ಭಕ್ತಿ ಮತ್ತು ಪ್ರೇಮ

ನಿಮಗಿಂತ ಉನ್ನತವಾದುದ್ದಕ್ಕೆ ಆರಾಧಿಸುವುದು, ಪೂಜಿಸುವುದು, ಸ್ವಯಂ ಅರ್ಪಿಸಿಕೊಳ್ಳುವುದು ಭಕ್ತಿಯ ಸ್ವಭಾವವಾಗಿದೆ – ಪ್ರೇಮದ ಸ್ವಭಾವವು ಸಾಮಿಪ್ಯ ಮತ್ತು ಒಂದಾಗುವುದನ್ನು ಹುಡುಕುವುದು ಅಥವಾ ಬಯಸುವುದಾಗಿದೆ, ಸ್ವಯಂ ಕೊಟ್ಟುಕೊಳ್ಳುವಿಕೆ ಎರಡರ ಗುಣಧರ್ಮವಾಗಿದೆ, ಯೋಗಕ್ಕೆ ಈ ಎರಡು ಸಂಗತಿಗಳ ಅಗತ್ಯವಿದೆ ಮತ್ತು ಎರಡೂ ಒಂದಕ್ಕೊಂದು ಬೆಂಬಲಿಸಿದರೆ, ಎರಡಕ್ಕೂ ಹೆಚ್ಚಿನ ಬಲ ಬರುತ್ತದೆ. ಪ್ರೇಮ ದೇವರ ಹೆಸರಲ್ಲ, ಅದು ಅದರ ಸತ್ತೆ ಮತ್ತು ಪ್ರಜ್ಞೆ, ಭಕ್ತಿ ಮತ್ತು ಪ್ರೇಮ ಎರಡು ಒಂದೇ ರೀತಿಯದ್ದಲ್ಲ, ಆದರೆ ಪ್ರೇಮವು ಭಕ್ತಿಯ ಒಂದು ಅಂಶ. ಭಕ್ತಿಗಳಲ್ಲಿ ಹಲವು ವಿಧಗಳು ಮತ್ತು ಯಾವ ಭಕ್ತಿಯ ಸ್ವಭಾವವು ಶಕ್ತಿಶಾಲಿ ಮತ್ತು ಉನ್ನತವಾದದ್ದು, ಹೆಚ್ಚು ತೀವ್ರತರವಾದದ್ದು ಮತ್ತು ಎಲ್ಲಕ್ಕಿಂತ ಆಧ್ಯಾತ್ಮಕವಾದದ್ದು ಆಗಿರುತ್ತದೆ. ಪ್ರೇಮದ ಸ್ವರೂಪ ಸ್ವಯಂ

ಕೊಟ್ಟುಕೊಳ್ಳುವಿಕೆಯಿಂದ ಮಾಡಲ್ಪಟ್ಟಿದೆ, ಸಮರ್ಪಣೆ, ಪರಿಪೂರ್ಣ ಆರಾಧನೆ, ನಿಸ್ವಾರ್ಥ ಕೊಡುವುಕೆಗಾಗಿನ ತುಡಿತವೇ ನಿಜವಾದ ಭಕ್ತಿಯ ನೈಜತ್ವವಿದೆ. ಅದೇ ನಿಜವಾದ ಪ್ರೇಮ, "ಗೆಲ್ಲುವ ಪ್ರೇಮ" ಅಥವಾ "ಪ್ರೇಮ ಗೆಲುವು" ಅದರರ್ಥ ಪ್ರೇಮದ ಪ್ರಭುತ್ವಕ್ಕೆ ಅಡ್ಡಬರುವ ಅಜ್ಞಾನ, ಸುಳ್ಳು, ಸ್ವಾರ್ಥ, ಅಹಂ, ಉತ್ಸಾಹ ಮತ್ತು ಕಾಮ, ಹೊರ ಅಥವಾ ಸ್ವಯಂ – ಸಲುವಾಗಿ ಆಸೆ ಮತ್ತು ಎಲ್ಲವನ್ನು ನಿವಾರಿಸುತ್ತದೆ ಮತ್ತು ತನ್ನ ಪ್ರಭುತ್ವವನ್ನು ಸ್ಥಾಪಿಸುವವರೆಗೆ ಮತ್ತು ಗೆಲುವು ಸಾಧಿಸುವವರೆಗೆ, ದೈವೀ ಪ್ರಜ್ಞೆಯ ಎಲ್ಲಾ ಪಾರಿತೋಷಕಗಳನ್ನು ಕೆಳಗಿಳಿಸಿ ತರುತ್ತದೆ. ಪ್ರೇಮದ ನಿಸ್ವಾರ್ಥತೆ ಅದರ ಶಕ್ತಿ, ಮತ್ತು ಸ್ವಯಂ ಕೊಟ್ಟುಕೊಳ್ಳುವಿಕೆಯಿಂದ ಸಾಧಕನ ಗೆಲುವಿಕೆಗೆ ಸಹಾಯವಾಗುತ್ತದೆ. ಅದು ನನಗನಿಸಿದ ಹಾಗೆ (ಪ್ರೇಮ ಭಕ್ತಿ) ಭಕ್ತಿಯು ಪ್ರೇಮದ ತಳಹದಿ ಮೇಲೆ; ಪೂಜೆ ಮಾಡುವದರಲ್ಲಿ ಭಕ್ತಿ, ಅರ್ಪಣೆಯಲ್ಲಿ, ಪೂಜ್ಯತೆಗಾಗಿ ವಿಧೇಯತೆಯಲ್ಲಿ, ಇತ್ಯಾದಿಗಳಲ್ಲಿ ಇರುತ್ತದೆ, ಆದರೆ ಪ್ರೇಮವಿಲ್ಲದೆ ಕೂಡ. ನಿಸ್ವಾರ್ಥತೆ, ಸ್ವಯಂ ಕೊಟ್ಟುಕೊಳ್ಳುವಿಕೆ, ಸಂಪೂರ್ಣ ನಂಬಿಕೆ ಮತ್ತು ವಿಶ್ವಾಸ, ಬೇಡಿಕೆ ಮತ್ತು ಆಸೆ ಇಲ್ಲದಿರುವಿಕೆ, ದೈವ ಸಂಕಲ್ಪಕ್ಕೆ ಶರಣಾಗಿರುವುದು ದೈವದ ಮೇಲೆ ಪ್ರೇಮ ಕೇಂದ್ರಿತವಾಗಿರುವುದು ಇವು ಕೆಲವೊಂದು ಮುಖ್ಯವಾದ ಚಿಹ್ನೆಗಳು (ನಿಜವಾದ ಪ್ರೇಮ ಮತ್ತು ಭಕ್ತಿಯ).

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/356 – ಶ್ರೀ ಅರವಿಂದರು**

## ಸರಳತೆ

ನಿಮಗೆ ಗೊತ್ತಿರುವ ಹಾಗೆ ನಾವು ತೊಡಕುಗಳಿಂದ ಸುತ್ತುವರೆಯಲ್ಪಟ್ಟಿದ್ದೇವೆ, ಆದರೆ ಎಲ್ಲೋ ಒಂದು ಕಡೆ ಸರಳ ಮತ್ತು ನೇರ ದಾರಿ ತೆರೆಯಲ್ಪಡುತ್ತವೆ – ಇದು ನನಗಾದ ನಿಜವಾದ ಅನುಭವ. ನೀವು ಹುಡುಕುತ್ತಾ, ಅದಕ್ಕಾಗಿ ಕೆಲಸ ಮಾಡುತ್ತಾ ವೃತ್ತಾಕಾರವಾಗಿ ತಿರುಗುತ್ತಾ ಎಲ್ಲೋ ಒಂದು ಕಡೆ ನಿಂತು ಬಿಟ್ಟಿರುವುದಾಗಿ ಭಾವಿಸುವಿರಿ; ಆಗ ಏನೋ ಒಂದು ನಮ್ಮ ಅಂತರಂಗದಲ್ಲೊಂದು ನಿಲುವು ಕೊಡಲು ತಾಳುತ್ತೆ, ಮತ್ತು ಆಗ ಇದ್ದಕ್ಕಿದ್ದ ಹಾಗೆ ಅದು ತೆರೆದುಕೊಳ್ಳುತ್ತೆ, – ತುಂಬಾ ಸರಳವಾಗಿ. ಈ ರೀತಿಯ ಅನುಭವಗಳ ನನಗೆ ಬಹಳ ಸಲ ಆಗಿದೆ, ಅದಕ್ಕಾಗಿ ಶ್ರೀ ಅರವಿಂದರಿಗೆ ಕೇಳಿ ನಿಮಗೆ ಕೊಡಲು ಹೇಳಿದೆ. ಮತ್ತು ಅವರು ಪದೆಪದೆ, ಒತ್ತಾಯಿಸುತ್ತಾ ಹೇಳುತ್ತಾರೆ; ಸರಳವಾಗಿರಿ, ಸರಳವಾಗಿರಿ. ನಿಮಗನಿಸಿದ್ದನ್ನು ಸರಳವಾಗಿ ಹೇಳಿರಿ. ಸರಳವಾಗಿರಿ, ಸರಳವಾಗಿರಿ, ಒತ್ತಾಯಪೂರ್ವಕವಾಗಿ.

ಇವೇ ಕೆಲವು ಶಬ್ದಗಳು, ಆದರೆ ನಿಜವಾಗಿ ಹೇಳುವುದಾದರೆ, ಯಾವಾಗ ಅವರು ಈ ರೀತಿ ಹೇಳಿದರೋ ಆಗ ಬೆಳಕಿನ ದಾರಿ ತೆರೆದುಕೊಂಡ ಹಾಗೆ, ಮತ್ತು ಎಲ್ಲವೂ ತುಂಬಾ ಸರಳವಾಗಿಬಿಟ್ಟಿತು: "ಒಂದು ಹೆಜ್ಜೆಯನಂತರ ಮತ್ತೊಂದು ಹೆಜ್ಜೆಯನ್ನಿಡಿರಿ, ಅದಿಷ್ಟೆ ನಾವು ಮಾಡಬೇಕಿರುವುದು!" ಅದೇ ರೀತಿ ನನಗನಿಸಿದ್ದು.

ಅದು ಕುತೂಹಲಕಾರಿ, ಎಲ್ಲಾ ತೊಡುಕುಗಳು ಅಲ್ಲಿ ಕಾಣಿಸುತ್ತಿದ್ದವು, (ಶ್ರೀಮಾತೆ ತಮ್ಮ ಹಣೆಯನ್ನು ಸ್ಪರ್ಶಿಸುತ್ತಾರೆ), ಬಹಳ ತೊಡಕಾದದ್ದು ಮತ್ತು ಸರಿಯಾಗಿಸುವುದು ಬಹಳ ಕಷ್ಟ ಮತ್ತು ಅವರು ಯಾವಾಗ ಇರಲು ಹೇಳಿದರೋ, ಸರಳವಾಗಿರಿ – ಎಷ್ಟು ಆಶ್ಚರ್ಯ – ಅವರ ಕಣ್ಣಿಂದ ಒಂದು ಬೆಳಕು ಬಂದ ಹಾಗೆ, ಯಾವ ರೀತಿ ಆಕಸ್ಮಾತ್ ಆಗಿ ಬೆಳಕಿನ ತೋಟವೆ ಗೋಚರವಾದಂತೆ. ಅದು ಅದೇ ಅನಿಸಿಕೆಯನ್ನು ಕೊಡುತ್ತೆ – ತೋಟವೆ ಬೆಳಕಿನಲ್ಲಿ ಮಿಂದ ಹಾಗೆ. ಇಂತಹ ಸರಳ ವಿಷಯಗಳಿಗೆ ಅಂತಹ ಉನ್ನತ ಒತ್ತಾಯ: ನೀವು ಏನು ನೋಡುವಿರಿ ಎನ್ನುವದನ್ನು ಸರಳವಾಗಿ ಹೇಳಿರಿ ಅಥವಾ ನಿಮಗೆ ಏನು ತಿಳಿದಿದೆ – ಸರಳವಾಗಿ, ಸರಳವಾಗಿ. ಒಂದು ಸರಳತೆ...ಅದು ಎಲ್ಲಾ ರೀತಿಯಿಂದ ಸಂತೋಷದ ತೋಟದ ಹಾಗೆ ಅನಿಸಿಕೆ. ಸರಳವಾಗಿ ಸರಳವಾಗಿರಿ. ಅಲ್ಲಿ ತೊಡಕುಗಳಿವೆ (ಅದೇ ಭಾವ), ಅದು ಕಠಿಣ ಮತ್ತು ತೊಡಕುಳ್ಳದ್ದು – ಮತ್ತು ಆವಾಗ ಬಾಗಿಲು ತೆರೆಯುತ್ತೆ: ಸರಳವಾಗಿರಿ...... ಅವರು ಯಾವುದಕ್ಕೆ ಸರಳ ಎಂದು ಕರೆಯುವರೋ ಅದು ಸಹಜವಾದ ಆನಂದ; ಕ್ರಿಯೆಯಲ್ಲಿ, ಅಭಿವ್ಯಕ್ತತೆಯಲ್ಲಿ, ಚಲನೆಯಲ್ಲಿ, ಜೀವನದಲ್ಲಿ – ಸರಳವಾಗಿರಿ, ಸರಳವಾಗಿರಿ, ಸರಳವಾಗಿರಿ. ಒಂದು ಸಹಜವಾದ ಆನಂದ. ವಿಕಾಸದಲ್ಲಿ ಅದನ್ನು ಮರುಶೋಧಿಸುವ ಸ್ಥಿತಿಯನ್ನೇ ದೈವವೆಂದು ಅವರು ಕರೆದರು. ಅದೊಂದು ಸಹಜವಾದ ಮತ್ತು ಸಂತೋಷದ ಸ್ಥಿತಿ. ನಾವು ಅದನ್ನು ಮರು–ಶೋಧಿಸಲೆಂದು ಅವರು ಬಯಸುತ್ತಾರೆ. ಮತ್ತು ಅವರು ಬಹಳ ದಿನಗಳಿಂದ ನನಗಿಲ್ಲಿ ಹೇಳುತ್ತಿದ್ದಾರೆ (ನಿಮ್ಮ ಸಾಧನೆಗೂ ಇದೇ ರೀತಿ): ಸರಳವಾಗಿರಿ, ಸರಳವಾಗಿರಿ, ಸರಳವಾಗಿರಿ. ಮತ್ತು ಅವರ ಸರಳತೆಯಲ್ಲಿ ಪ್ರಕಾಶಮಾನವಾದ ಆನಂದವಿದೆ. ಒಂದು ಸಹಜವಾದ ಆನಂದ. ಈ ಸಂಘಟನಾ ಮನಸ್ಸು ಬಹಳ ಭಯಾನಕ. ಅದು ಭಯಾನಕ, ಅದಿಲ್ಲದೆ ನಾವು ಏನೂ ಮಾಡಲಾರೆವೆಂದು ಮನದಟ್ಟು ಮಾಡಿದೆ. ಅದನ್ನು ವಿರೋಧಿಸುವುದು ಕಷ್ಟ. ನಿಜವಾಗಿ ಅದು ಎಲ್ಲಾ ಮಾನವರಿಗೆ ಮನದಟ್ಟು ಮಾಡಿದೆ. ಮಾನವನು ಶ್ರೇಷ್ಠರೆಂದು ಕರೆಯಲ್ಪಡುವರೆಲ್ಲಾ ಮನಸ್ಸಿನ

ಸಂಘಟನಾ ಶಕ್ತಿ ಇಲ್ಲದಿದ್ದರೆ ಪ್ರಶಂಸಾರ್ಹವಾದದ್ದನ್ನು ಸಾಧಿಸಲಾಗುವುದಿಲ್ಲವೆಂದು ಮನಗಂಡಿದ್ದಾರೆ. ಆದರೆ ಶ್ರೀ ಅರವಿಂದರು ಮಾತ್ರ ನಮ್ಮಲ್ಲಿ ಗುಲಾಬಿ ಅರಳುವ ರೀತಿಯಲ್ಲಿ ನಮ್ಮ ಸರಳ ಆನಂದವಿರಬೇಕೆನ್ನುವರು: ಸರಳವಾಗಿರಿ, ಸರಳವಾಗಿರಿ, ಸರಳವಾಗಿರಿ. ಮತ್ತು ನಾನದನ್ನು ಕೇಳಿದಾಗ ಅಥವಾ ನೋಡಿದಾಗ, ಅದೊಂದು ಬಂಗಾರದ ಬೆಳಕಿನ ಝುರಿಯಂತೆ, ಸುವಾಸನೆ ಬೀರುವ ತೋಟದ ಹಾಗೆ, ಎಲ್ಲಾ, ಎಲ್ಲಾ, ಎಲ್ಲಾ ತೆರೆದಿದೆ, ಸರಳವಾಗಿರಿ ....

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಸೆಪ್ಟೆಂಬರ್ 16, 1961**

ನಾನು ಏನು ಬರೆದೆನೆಂದರೆ ಅದು ನಿನ್ನ ಮುಂಚಿನ ಯೋಗ ಕಲ್ಪನೆಗೆ, ಉತ್ತರವಾಗಿತ್ತು. ಅದರ ಪ್ರಕಾರ ಯಾರಾದರೂ ದೈವವನ್ನು ಬಯಸಿದ್ದೆ ಆದರೆ, ದೈವವೆ ಸ್ವತಃ ಹೃದಯವನ್ನು ನಿರ್ಮಲಗೊಳಿಸುವದು ಮತ್ತು ಸಾಧನವನ್ನು ಬೆಳೆಸುವದು ಮತ್ತು ಬೇಕಾದ ಅನುಭವವನ್ನು ಕೊಡುತ್ತದೆ. ನನ್ನ ಅರ್ಥದಲ್ಲಿ ಹೇಳುವುದಾದರೆ ಅದೇ ರೀತಿ ಆಗಿಯೇ ಆಗುತ್ತದೆ ಮತ್ತು ಮಾಡುತ್ತದೆ ಕೂಡ, ಆದರೆ ನಂಬಿಕೆ ಮತ್ತು ವಿಶ್ವಾಸ ದೇವರ ಮೇಲೆ ಇರಬೇಕು ಮತ್ತು ಶರಣಾಗುವ ಸಂಕಲ್ಪ ಇರಬೇಕು. ಆ ರೀತಿ ಮಾಡಬೇಕೆಂದಾಗ ನಾವು ದೈವದ ಕೈಗೆ ನಮ್ಮನ್ನು ಕೊಟ್ಟುಕೊಳ್ಳಬೇಕು. ಬದಲಾಗಿ ನಮ್ಮ ಪ್ರಯತ್ನವನ್ನಷ್ಟೆ ನಂಬಬಾರದು ಮತ್ತು ಇದು ಏನು ತೋರಿಸುತ್ತದೆಯೆಂದರೆ, ನಾವು ನಮ್ಮ ನಂಬಿಕೆ ಮತ್ತು ವಿಶ್ವಾಸಗಳನ್ನು ದೈವದ ಮೇಲೆ ಇಡಬೇಕು ಮತ್ತು ಸ್ವಯಂ ಕೊಟ್ಟುಕೊಳ್ಳುವಿಕೆಯನ್ನು ಹೆಚ್ಚಿಸಿಕೊಳ್ಳಬೇಕು. ಇದು ನಿಜವಾದ ಸಾಧನೆಯ ತತ್ವ ನಾನು ಸ್ವಯಂ ಪಾಲಿಸಿದ್ದು ಮತ್ತು ಯೋಗದ ಕೇಂದ್ರೀಯ ತತ್ವ, ನಾನು ಕಂಡುಕೊಂಡಿದ್ದು ಇದನ್ನೇ. ಇದು ಒಂದು ತರಹದ ಶ್ರೀ ರಾಮಕೃಷ್ಣರ (ಪರಮಹಂಸ) ಬೆಕ್ಕಿನ ಮರಿಯ ಉದಾಹರಣೆಯ ತರಹ. ಆದರೆ ಎಲ್ಲವೂ ಇದೇ ರೀತಿ ಒಂದೇ ಸಲಕ್ಕೆ ಆಗುವುದಿಲ್ಲ; ಆ ರೀತಿ ಆಗುವುದಕ್ಕೆ ಸಮಯ ಬೇಕಾಗುತ್ತದೆ – ಮನಸ್ಸು ಮತ್ತು ಪ್ರಾಣ ಶಾಂತವಾಗಿದ್ದಾಗ ಇದು ಹೆಚ್ಚಾಗಿ ಬೆಳೆಯುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/70**

ಸರಳವಾಗಿರಿ,
ಸಂತೋಷವಾಗಿರಿ,
ಪ್ರಶಾಂತವಾಗಿರಿ,
ನೀವು ಎಷ್ಟು ಮಾಡುವುದಕ್ಕೆ ಸಾಧ್ಯವೋ ಅಷ್ಟು ಕಾರ್ಯ ಮಾಡಿರಿ,
ಎಲ್ಲಾ ಸಮಯದಲ್ಲೂ ನೀವು ನನ್ನಡೆಗೆ ತೆರೆದುಕೊಂಡಿರಿ.
ಇಷ್ಟನ್ನೆ ನಿಮ್ಮಿಂದ ಕೇಳಿಕೊಳ್ಳುವುದು.

**– ಶ್ರೀಮಾತೆ**

ಬಹುಶಃ ನಾನು ಇಲ್ಲಿ ಒಂದೆರಡು ವಿಷಯಗಳನ್ನು ಹೇಳಿ ನಿಮ್ಮ ತಪ್ಪು ಗ್ರಹಿಕೆಗಳನ್ನು ನಿವಾರಿಸುತ್ತೇನೆ. ಮೊದಲನೆಯದಾಗಿ, ದೈವದ ಮೇಲಿರುವ ಪ್ರೇಮ, ನಾನು ಮಾತಾನಾಡುತ್ತಿರುವುದು ಮಾನಸಿಕ ಪ್ರೇಮ ಮಾತ್ರ ಅಲ್ಲ; ಅದು ಒಟ್ಟಾರೆ ಎಲ್ಲಾ ಸತ್ತೆಯ ಪ್ರೇಮ, ಪ್ರಾಣಿಕ ಮತ್ತು ಪ್ರಾಣ–ಭೌತಿಕವನ್ನೂ ಸೇರಿದೆ – ಎಲ್ಲವೂ ಸ್ವಯಂ–ಕೊಟ್ಟುಕೊಳ್ಳುವಷ್ಟು ಸಮರ್ಥವಾಗಿವೆ. ಮತ್ತು ಅಸೆಯ ತೃಪ್ತಿಯನ್ನು ಹೇರುತ್ತದೆ ಅನ್ನುವುದು ತಪ್ಪು ತಿಳುವಳಿಕೆ ಅಥವಾ ಪ್ರಾಣವು ಯಾವುದೇ ವ್ಯಾಮೋಹಕ್ಕೆ ಅಂಟಿಕೊಳ್ಳಲು ಬಯಸದೆ ವಸ್ತುವಿನಿಂದ ತನ್ನ ಪ್ರೇಮವನ್ನು ದೂರ ಕೊಂಡೊಯ್ಯುವುದು. ಪ್ರಕೃತಿಯ ಎಲ್ಲಾ ಭಾಗದಷ್ಟೆ ಪ್ರಾಣವು ಕೂಡ ತನ್ನ ಸ್ವಯಂಕೊಟ್ಟುಕೊಳ್ಳುವಿಕೆಯಲ್ಲಿ ಪ್ರಶ್ನಾತೀತವಾಗಿದೆ; ತನ್ನ ಪ್ರೀತಿ ಪಾತ್ರರಿರಾಗಿ ತನ್ನನ್ನೆ ಮರೆತು ಕ್ರಿಯಾಶೀಲವಾಗುವುದರಲ್ಲಿ ಪ್ರಾಣಕ್ಕಿಂತ ಯಾವುದೂ ಧಾರಾಳವಾಗಿಲ್ಲ. ಪ್ರಾಣ ಮತ್ತು ಭೌತಿಕಗಳು ತಮ್ಮನ್ನು ತಾವೇ ಸತ್ಯವಾದ ರೀತಿಯಲ್ಲಿ ಕೊಟ್ಟುಕೊಳ್ಳುತ್ತವೆ – ನಿಜವಾದ ಪ್ರೇಮದ ರೀತಿಯಲ್ಲಿ, ಅಹಂ ಆಸೆಯಿಂದಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/339 –ಶ್ರೀ ಅರವಿಂದರು**

# ಶ್ರೀ ಅರವಿಂದರು – ಶತಮಾನದ ನೋಟ

– ಶ್ರೀ ನವನೀತ ರಾಮಚಂದ್ರರಾಯರು

## ಭಾಗ 6

'ಈ ಗೀತದಲ್ಲಿಯ ಭಾವನೆಗೂ ಶ್ರೀ ಅರವಿಂದರ ಅತಿಮಾನಸ, ತತ್ತ್ವಕ್ಕೂ ಸಂಬಂಧವೇನು?' ಎಂದು ವಿಮರ್ಶಕ ವಾಚಕರು ಚಿಕಿತ್ಸೆ ಮಾಡಬಹುದಾಗಿದೆ. ಇದಕುತ್ತರವೆಂದರೆ, ಈ ಪೃಥ್ವೀ ಜೀವನವನ್ನೆ ಅಪಾರ್ಥಿವವೆನಿಸುವ ಪರಮ ಸುಖದ ಆಗರವನ್ನಾಗಿ ಮಾಡಬೇಕೆಂಬುದೆ ಶ್ರೀ ಅರವಿಂದರ ಯೋಗ ಸಾಧನೆಯ ಚರಮ ಲಕ್ಷ್ಯ. ಆಗಸದಾಚೆಯ ಚೆಲವು–ಒಲವು–ನಲಿವು ನಮಗೆ ನಮ್ಮ ದೈನಂದಿನ ಜೀವನದಲ್ಲಿ ಲಭ್ಯವಾಗಬೇಕು, 'ಮಲಗಿರುವ ತಾಯಿ ಪೃಥಿವಿ' ಎದ್ದು ಜೀವ ಶಿಶುವಿಗೆ ಮೊಲೆವಾಲನುಣಿಸಬೇಕು, ಸವಿಲಾಲಿ ಹೇಳಬೇಕು, ಮೊಲೆವಾಲಿನೊಡನೆ 'ಮನದ್ಹಾಲ'ನ್ನೂ ಕುಡಿಸಬೇಕು. ಈ ಧ್ವನಿಯೆ 'ಮಧುರಚೆನ್ನ'ರ ಮೇಲ್ಕಂಡ ಗೀತದಿಂದ ಮೆಲುದನಿಯಿಂದ ಕೇಳಬರುತ್ತಿದೆ.

ನನ್ನ ದೃಷ್ಟಿಯಲ್ಲಿ ಚೆನ್ನಮಲ್ಲರ 'ಶ್ರುತಾಶ್ರುತ ವೀಣಾರವ'ವು ಗೂಢ ಭಾವವ್ಯಂಜಕ ಶ್ರೇಷ್ಠ ಕೃತಿಯಾಗಿದೆ. ನನ್ನ 'ಶ್ರುತಾಶ್ರುತ' ಎಂಬ 'ಸಾಹಿತ್ಯ–ಕಲಾತತ್ತ್ವ' ವಿಷಯಕ ಪ್ರಬಂಧದಲ್ಲಿ ಅದಕ್ಕೆ ಅಗ್ರ ಮರ್ಯಾದೆಯನ್ನು ಕೊಟ್ಟಿದ್ದೇನೆ. ಅದರ ಸೂಕ್ತ ಭಾಗವನ್ನು ವಾಚಕರ ಪರಿಶೀಲನೆಗಾಗಿ ಇಲ್ಲಿ ಕೊಡುತ್ತಿದ್ದೇನೆ –

ಅಶ್ರುತವು ಶ್ರುತವನ್ನು ಬಿಟ್ಟಿಲ್ಲ. "All things are in nature and all things are in God." ಶ್ರುತದ ಹಿಂದೆ ಅಶ್ರುತವಿದೆ. ಅಥವಾ ಶ್ರುತದ ಒಳಗೂ ಹೊರಗೂ ಅಶ್ರುತವಿದೆ.

ತದನ್ತ ರಸ್ಯ ಸರ್ವಸ್ಯ ತದು ಸರ್ವಸ್ಯಾಸ್ಯ ಬಾಹ್ಯತಃ ॥

ನಮಗೆಷ್ಟು ತಿಳಿಯಿತೆಂದರೂ, ನಮ್ಮ ತಿಳಿವಳಿಕೆಗಿಂತಲೂ ಅದರ ತಿಳಿವು ತಿಳಿಯಾಗಿದೆ. ನಮಗೆಷ್ಟು ಹೊಳೆಯಿತೆಂದರೂ, ನಮ್ಮ ಹೊಳೆಯುವಿಕೆಗಿಂತಲೂ ಅದರ ಹೊಳೆವು ಮಿಗಿಲಾಗಿದೆ. ನಮಗೆ ಅನಿಸಿ ಅನಿಸಿ ಹೋಗುತ್ತಿರುವುದನ್ನು ನಾವು ಅನ್ನಲಾರೆವು. ನಮ್ಮ ಮನಸೂರಿನಲ್ಲಿ ಊರಿಕೊಂಡ ನನಸನ್ನು ನಾವು

ಒಡೆಯಲಾರವು. ನಮ್ಮ ಬುದ್ಧಿಯ ಹೊಲದಲ್ಲಿ ಒಕ್ಕಲುಮಾಡಿದ ಒಕ್ಕಲಿಗನ ಹೆಸರನ್ನು ನಾವು ಯಾರ ಮುಂದೂ ಉಸುರಲಾರೆವು. ಹೃನ್ಮೂರ್ತಿಯ ಹಿಂದೆ ಚಿನ್ಮೂರ್ತಿಯಿದೆ. ಆಕೃತಿ ವಿಶೇಷದ ಹಿಂದೆ ಯಾವುದೋ ಒಂದು ಭಾವ ವಿಶೇಷವಿದೆ. ಕಂಡ ಕಣಿಯ ಹಿಂದೆ ಕಾಣದುದೇನೋ ಇದೆ. ಅದೇನೆಂಬುದು ತಿಳಿಯದೆ,

ಮಿಂಚಿನಂದದಿ ಹೊಳೆದು ಹರಿಯುವವಳಾರೇ?
ಚಂಚಲೆಯೆ, ಚಲಮಲನೆ ಚರಿಸುವವಳಾರೇ?
ಮೈಯಿಲ್ಲದವಳೆ, ನೀ ಮೈದೋರಿದಂದು
ಮೈಮರೆಯಿತೀ ಜಗವು ನಿನ್ನಲ್ಲಿ ಸಂದು! 4

ಎಂದು ಕವಿ ಕೇಳುವನು. ಕೆಲಹೊತ್ತಿನ ಮೇಲೆ ಏನೋ ಹೊಳೆದು,

ಆಪ್ತಳಂದದಿ ನಿನ್ನ ಮರೆಗಿರುವಳಾರು?
ಗುಪ್ತಗಾಮಿನಿಯಾಗಿ ಗಮಿಸುವವಳಾರು?
ನಿನ್ನ ಮೋರೆಯ ಮೇಲೆ ಅವಳ ಕುರುಪಿಹುದು
ನಿನ್ನ ನೋಡಿದ ಮನಕೆ ಅವಳ ನೆನಪಹುದು.

ಎಂದು ಸೂಚಕವಾಗಿ ನುಡಿಯುವನು.

ಅದಿರಲಿ. ಚೆನ್ನಮಲ್ಲರು ತಮ್ಮ 18 ವರ್ಷಗಳ ಸಾಧನ ಯಾತ್ರೆಯನ್ನು ಪೂರ್ವರಂಗ, ಕಾಳರಾತ್ರಿ, ಬೆಳಗು, ಆತ್ಮಸಂಶೋಧನ ಎಂಬ ಅಪೂರ್ವ ಕೃತಿಗಳಲ್ಲಿ ಮನಂಬುಗುವಂತೆ ಚಿತ್ರಿಸಿದ್ದಾರೆ. 'ಜ್ಞಾನಭಿಕ್ಷು'ವಿನ ಸಾಧನಾ ಪಥದಲ್ಲಿ ಬರುವ ಪ್ರಭಾವ ಅನುಭವಗಳಲ್ಲಿ ಶ್ರೀ ಅರವಿಂದರ ಪ್ರಭಾವ ಹೆಜ್ಜೆ ಹೆಜ್ಜೆಗೂ ಮೂಡಿದುದು ಕಂಡುಬರುತ್ತದೆ. William James ಎಂಬ ಅಮೆರಿಕನ್ ಅಂತರ್ವಿಚಾರಿ ಲೇಖಕನ "Varieties of Religious Experience (ಧಾರ್ಮಿಕ ಅನುಭವದ ವಿವಿಧ ರೀತಿಗಳು)" ಎಂಬ ಸರ್ವಮಾನ್ಯ ಗ್ರಂಥದಲ್ಲಿ ಬರುವ ಸಾಧನಮಾರ್ಗಿಯ ವಿವಿಧಾನುಭವಗಳ ಚಿತ್ರಣವೆಂಬಂತೆ ಈ ಕೃತಿಗಳಿವೆ. ಇವುಗಳಲ್ಲಿ ಅವರ ಸೋಲುಗೆಲವು, ಸೋಲೆಂದು ಮೊದಲು ತೋರುವುದು ಗೆಲುವಿನ ಕುರುಹೆಂದು ಬಳಿಕ ಗೊತ್ತಾಗುವುದು, ಪ್ರತಿ ಸಾಧಕನಿಗೂ ಅನುಭವಕ್ಕೆ

ಬರುವ 'ಕಾಳರಾತ್ರಿ' (Dark Night of the Soul), ಮುಂದೆ ಖಂಡಿತವಾಗಿ ಬರುವ 'ಬೆಳಗು' – ಇವೆಲ್ಲ ಅಲ್ಲಿ ಪರಿವಿಡಿಯಾಗಿ ಬರುತ್ತವೆ. ಅಂತೂ ಮನೋವೇದನೆಯ ಅತಿ ಎದೆ ಹಿಂಡುವ ಮಾರ್ಗದಲ್ಲಿ ಏಳುತ್ತ ಬೀಳುತ್ತ, ತಮ್ಮ ತೀವ್ರ ಜ್ಞಾನಲಾಲಸೆಯೆಂಬ ಕೋಲಿನಾಧಾರದಿಂದ ಮುನ್ನಡೆಯುತ್ತ ಕೊನೆಗೆ ಗುರಿ ಕಂಡ ಸಾಧಕನ ಅಪ್ರತಿಮ ಆಧ್ಯಾತ್ಮಿಕ ಸಾಹಸಪೂರ್ಣ ಯಾತ್ರೆಯ ಆತ್ಮಕಥನವಾಗಿದೆ ಈ ಕೃತಿಮಾಲಿಕೆ.

ಅಂಬಕ್ಕನ ಮಗ ಚೆನ್ನಮಲ್ಲಪ್ಪನವರ ಈ ಆಧ್ಯಾತ್ಮಿಕ ಯಾತ್ರೆಯಲ್ಲಿ 'ಅಂಬಿಕಾತನಯದತ್ತ'ರ (ದ.ರಾ. ಬೇಂದ್ರೆಯವರ) ಜೊತೆಯೊದಗಿದುದು ದೈವ ಸಂಕಲ್ಪವೇ ಸರಿ. ಚೆನ್ನಮಲ್ಲರ ಆಧ್ಯಾತ್ಮಿಕ ದಾಹ ಅವರ 17 ನೆಯ ವಯಸ್ಸಿನಲ್ಲಿ 'ಪ್ರಚಂಡ ನಾಸ್ತಿಕ್ಯ'ದ ರೂಪ ತಾಳಿತ್ತು; 18 ನೆಯ ವಯಸ್ಸಿನಲ್ಲಿಯೇ ಮುಲ್ಕೀ ಪರೀಕ್ಷೆಯಲ್ಲಿ ಅತ್ಯುಚ್ಚ ಯಶಸ್ಸು. ಇತ್ತ ಧಾರವಾಡದಲ್ಲಿ ಬೇಂದ್ರೆ–ಕೇಂದ್ರಿತ 'ಗೆಳೆಯರ ಗುಂಪು' ಬೆಳೆಯುತ್ತ ಒಂದು ಹದಕ್ಕೆ ಬಂದಿತ್ತು. ಅತ್ತ ಹಲಸಂಗಿಯ ತರುಣನೊಬ್ಬ ತನ್ನ ರೀತಿಯಲ್ಲಿಯೇ ಉಚ್ಚ ಸಾಹಿತ್ಯ ಸಂಸ್ಕಾರ ಪಡೆದು ಇನ್ನೂ ಹೆಚ್ಚಿನ ಜ್ಞಾನಪ್ರಾಪ್ತಿಗಾಗಿ ಆಲ್ಪರಿಯುತ್ತಿದ್ದ; ಅಲ್ಲದೆ ಸಮವಿಚಾರದ ಸಮವಯಸ್ಕರಾದ ತನ್ನೂರಿನ ಎಲ್ಲಾ ಜಾತಿ–ಹೋರೆಗಳ ಸ್ನೇಹಿತರನ್ನು ಕಲೆ ಹಾಕುವ ಕೆಲಸದಲ್ಲಿ ತೊಡಗಿದ್ದ. ಕನ್ನಡದ ಕೃಷಿಯಿಂದಷ್ಟೇ ತೃಪ್ತನಾಗದೆ ವಿಜಾಪುರದಲ್ಲಿ ಶ್ರೀ ಕೊಣ್ಣೂರ ಹನುಮಂತರಾಯರಲ್ಲಿ ಇಂಗ್ಲೀಷಿನ ವ್ಯಾಸಂಗಕ್ಕೆ ನಿಂತುಕೊಂಡ. ಹಣಮಂತರಾಯರು ಧಾರವಾಡದ ಗುಂಪಿನ ವಾಙ್ಮಯ ನಿರ್ಮಿತಿಯ ನವದೃಷ್ಟಿಯಿಂದ ಆಕೃಷ್ಟರಾದವರು; ಮುಂದೆ ಬಲುಬೇಗನೆ 'ಗುಂಪಿ'ನೊಡನೆ ಆತ್ಮೀಯ ಸಂಬಂಧ ಬೆಳೆಯಿಸಿಕೊಂಡವರು. 'ಕಾವ್ಯಕಲ್ಪ ಲತಾಮಾಲೆ'ಯನ್ನು ಪ್ರಾರಂಭಿಸಿ ವಿಜಾಪುರದ ಕಡೆಗೆ ಧಾರವಾಡದ ಗೆಳೆಯರು ಕಣ್ಣು ಹಿಗ್ಗಿಸಿ ನೋಡುವಂತೆ ಮಾಡಿದರು. ಬಹುಶಃ ಕೊಟ್ಟೂರ ಹಣಮಂತ ರಾಯರಲ್ಲಿಯೇ ಬೇಂದ್ರೆ – ಚೆನ್ನಮಲ್ಲರು ಮೊದಲ ಸಲ ಕೂಡಿರಲು ಸಾಕು. ಅದೇನೇ ಇರಲಿ, ಬಲುಬೇಗನೆಯೆ ಧಾರವಾಡದ ಗೆಳೆಯರೂ ಹಲಸಂಗಿಯ ಎಳೆಯರೂ ವಿಜಾಪುರದಲ್ಲಿ ಒಂದು ಸಾಂಸ್ಕೃತಿಕ ಸುಸಂದರ್ಭದಲ್ಲಿ ಕೂಡುವ ಪ್ರಸಂಗ ಬಂದಿತು. 1923ರಲ್ಲಿ 9ನೆಯ ಕನ್ನಡ ಸಾಹಿತ್ಯ ಸಮ್ಮೇಳನವು ವಿಜಾಪುರದಲ್ಲಿ ಜರುಗಿತು. ಇದರ ವರ್ಣನೆಯನ್ನು ಸಿಂಪಿ ಲಿಂಗಣ್ಣನವರ

ಮಾತಿನಲ್ಲಿಯೇ ಕೇಳೋಣ: ಶ್ರೀ ಬೇಂದ್ರೆಯವರು ಗುಂಪಿನ ಗೆಳೆಯರೊಡನೆ ಸಮ್ಮೇಳನಕ್ಕೆ ಆಗಮಿಸಿದರು. ಆ ಕಾಲಕ್ಕೆ ಧಾರವಾಡದ ಗೆಳೆಯರೊಂದಿಗೆ ಚೆನ್ನಮಲ್ಲಪ್ಪನ ಪರಿಚಯ ನಿಕಟವಾದದ್ದು. ಧಾರವಾಡ–ವಿಜಾಪುರ ಗೆಳೆಯರು ಸೇರಿ ಬೃಹದಾಕಾರದಲ್ಲಿ ಫೋಟೋ ತೆಗೆಯಿಸಿಕೊಂಡರು. ಅದೇ ಸಾಹಿತ್ಯ ಸಮ್ಮೆಳನದಲ್ಲಿ ಶ್ರೀ ಬೆಳಗಾವಿ ರಾಮಚಂದ್ರ ಅವರು (ಈಗಿನ ವಿನೀತರು) 'ಪ್ರತಿಭೆ' ಎಂಬ ಸ್ವತಂತ್ರ ಪ್ರಬಂಧವನ್ನೋದಿ ಪರಿಷತ್ತಿನವರಿಂದ ಬಹುಮಾನ ಪಡೆದದ್ದು. 'ಸುನೀತಿದೇವಿ ನಿದ್ದೆ ತಿಳಿದು ಎದ್ದು ಕುಳಿತಳು' ಎಂಬ ಧ್ರುವನ ಪದ್ಯ ಹಾಡಿ, ಚೆನ್ನಮಲ್ಲಪ್ಪನು ಶ್ರೋತೃಗಳನ್ನು ತಣಿಸಿದ್ದಲ್ಲದೆ, 'ಬೀಸುವ ಕಲ್ಲಿನ ಹಾಡುಗಳು' ಎಂಬ ಪ್ರಬಂಧವನ್ನೋದಿ ಜಾನಪದ ಸಾಹಿತ್ಯದ ಶ್ರೀಕಾರ ಹಾಕಿದನು. ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿದ್ದ "ಶಾಸ್ತ್ರಿ" ಮಹಾಶಯರು (ಇವರ ಪೂರ್ಣ ಹೆಸರು, ಬಿರುದಾವಳಿ ಇತ್ಯಾದಿ ನೆನಪಿಲ್ಲ) ತಮ್ಮ ಉಪಸಂಹಾರ ಭಾಷಣದಲ್ಲಿ ತಾವೇ ಕಟ್ಟಿದ ಕಂದ ಪದ್ಯಗಳಲ್ಲಿ "ದತ್ತಾತ್ರೇಯಾ ಬೇಂದ್ರೆ" "ಚೆನ್ನಮಲ್ಲಪಯ್ಯಾ ಗಲ್ಗಲ್" "ರಾಮಚಂದ್ರ ಬೆಳಗಾಂ ಶ್ಲಾಘ್ಯಂ" ಎಂದು ಉಲ್ಲೇಖಿಸಿದುದು ಈಗಲೂ ನೆನಪಿಗೆ ಬರುತ್ತಿದೆ! ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾಗಿದ್ದ ದಿವಂಗತ ಶ್ರೀ ಕರ್ಪೂರ ಶ್ರೀನಿವಾಸರಾಯರು ನನ್ನ 'ಪ್ರತಿಭೆ' ಪ್ರಬಂಧದ ವಿಚಾರ ರೀತಿ – ವಾಚನದ ಧಾಟಿಗಳಿಗೆ ಮನಸೋತು 25 ರೂ. ಬಹುಮಾನ ಸಾರಿದುದು ನಾನು ಹೊಸ ಹಿಗ್ಗಿನಿಂದ ಸಾಹಿತ್ಯ ಸೇವೆಗೆ ತೊಡಗುವಂತೆ ಮಾಡಿತು. ಈ ಸಮ್ಮೇಳನದಲ್ಲಿಯೇ ಕಿಟ್ಟೂ (ಸಿದ್ದವ್ವನಹಳ್ಳಿ ಕೃಷ್ಣಶರ್ಮ) – ರಾಮಚಂದ್ರರ 'ಅಗಲದ ಜೊತೆ' ಹಲವರಲ್ಲಿ ಹೇವ ಹುಟ್ಟಿಸುವಂತೆ ಮಾಡಿತು. ಅದಿರಲಿ. ಬೇಂದ್ರೆ – ಚೆನ್ನಮಲ್ಲರ 'ಸಖ್ಯ ಯೋಗ'ದ ಬೆಳೆವಣಿಗೆಯನ್ನು ಶ್ರೀ ಸಿಂಪಿ ಲಿಂಗಣ್ಣನವರ ಭಾಷೆಯಲ್ಲಿಯೇ ಲಾಲಿಸೋಣ. "ಮಧುರಚೆನ್ನರು ಗೆಳೆಯರೋಲಗ ಕಟ್ಟಿದ ಶ್ರೀ ಬೇಂದ್ರೆಯವರ ಸಂಬಂಧವನ್ನು ಬಹು ತೀವ್ರವಾಗಿ ಗಳಿಸಿಕೊಂಡರು. ಮಧುರಚೆನ್ನರಿಗೆ ಆಗ 18 ವರುಷ ತುಂಬಿರಬಹುದು. ಅಂದಿನಿಂದ ಕೊನೆಯವರೆಗೆ ಅವರು ಅಣ್ಣ ತಮ್ಮಂದಿರಾಗಿ ನಡೆದುಕೊಂಡರು. ಮೂವತ್ತೆರಡು ವರುಷದ ದೀರ್ಘಾವಧಿಯ ಗೆಳೆತನಕ್ಕೆ ಜಾತಿ, ಮತ, ಪಂಥ, ಸ್ವಭಾವ ಇವಾವವೂ ಅಡ್ಡ ಬರಲಿಲ್ಲ. ಒಬ್ಬರು ಹಳ್ಳಿಯ ಬಾಳು, ಅಲ್ಪ ಶಿಕ್ಷಣ, ಅನಾರೋಗ್ಯ, ವೀರಶೈವ ಜಾತಿ, ಒಕ್ಕಲತನದ ಬದುಕು –

ಇವುಗಳಲ್ಲಿ ಬೆಳೆದವರಾದರೆ, ಇನ್ನೊಬ್ಬರು ಪಟ್ಟಣ ಜೀವನ, ಉಚ್ಚ ಶಿಕ್ಷಣ, ಆರೋಗ್ಯ, ಬ್ರಾಹ್ಮಣ ಜಾತಿ, ಸುಸಂಸ್ಕೃತ ಬದುಕು – ಇವುಗಳಲ್ಲಿ ಬೆಳೆದವರು. ಒಂದು ಮುಖ ಪೂರ್ವಕ್ಕೆ, ಇನ್ನೊಂದು ಪಶ್ಚಿಮಕ್ಕೆ, ಹಳ್ಳಿಯ ಶಾಲೆಯಲ್ಲಿ ಶಿಕ್ಷಣ ಮುಗಿಸಿದ ಮಧುರಚೆನ್ನರ ಮುಖ ಪಶ್ಚಿಮಕ್ಕೆ; ವಿಚಾರ ಸರಣಿ ಪಾಶ್ಚಾತ್ಯರದು! ಪದವೀಧರರಾಗಿರುವ ಶ್ರೀ ಬೇಂದ್ರೆಯವರ ಮುಖ ಪೂರ್ವಕ್ಕೆ; ವಿಚಾರ ಸರಣಿ ಪೌರ್ವಾತ್ಯರದು!... ಅವರ ಕಾಣ್ಕೆಯಲ್ಲಿ ಬಹು ಅಂತರವಿದ್ದರೂ ಅವರು ಒಬ್ಬರಿಗೊಬ್ಬರು ಹತ್ತಿರದಲ್ಲಿಯೇ ಇದ್ದರು. 'ನನ್ನ ನಿನ್ನ ಬಳಿ ವಿಶಾಲ ವೃಕ್ಷ ಬೆಳೆದಿದೆ' ಎಂದು ಶ್ರೀ ಬೇಂದ್ರೆಯವರು ಹಾಡಿ ಆ ಮಾತಿಗೆ ಅಂಕಿತ ಹಾಕಿದ್ದಾರೆ. ದಿ॥ ಮಧುರಚೆನ್ನರು ಸಹ 'ಬೆನ್ನುಬೆನ್ನಲಿ ಬೆಸೆದ ಏಕತೇಜದ ಎರಡು ಹಿರಿಕಿರಿಯ ಪಿಂಡಗಳೆಂ'ದು ವಿನಯಿಸಿದ್ದಾ. ... ಶ್ರೀ ಅರವಿಂದ ಯೋಗಿಗಳ ಹೃದಯಸ್ಥ ವಿಶ್ವಭಾನುವೇ ಅವರಲ್ಲಿ ಐಕ್ಯವನ್ನು ತಂದಿದ್ದಾನೆ, ಸಮರಸತೆಯನ್ನು ಕರುಣಿಸಿದ್ದಾನೆ.

"ಅವರಿಬ್ಬರೂ ಪರಸ್ಪರರನ್ನು ಮೊದಲಿಗೆ ಕಂಡಾಗ ವ್ಯಕ್ತಿಯನ್ನಷ್ಟೇ ಕಾಣಲಿಲ್ಲ. ಪರಸ್ಪರರ ಕಣ್ಣ ಮುಂದೆ ಮೊಳಕೆ ಮಾತ್ರ ನಿಂತಿದ್ದರೂ ಅದರಲ್ಲಿ ಅವರಿಗೆ ಬೆಳೆಯ ಸಿರಿಯೇ ಕಂಗೊಳಿಸಿತು.... ಆಗ ಶ್ರೀ ಬೇಂದ್ರೆಯವರು 'ಪಡೆದಪ್ಪನಾಗು' ಎಂದು ಮಧುರಚೆನ್ನರನ್ನು ಬಾಯ್ತುಂಬ ಹರಸಿ, ಕೈತುಂಬ ಸ್ನೇಹ ಸ್ಪರ್ಶವನ್ನು ಸವರಿದರು–

ಎರೆಯುವೆನು ಬಾ ನಿನ್ನ ನಮ್ಮ ಪಟ್ಟದ ಮರಿಯೆ
ಸಕಲ ತೀರ್ಥದ ಕ್ಷೀರನೀರ ತಂದು ।
ಬೆರಗಾಗಿ ಬೆರೆತು ಆ ಶಿವನಲ್ಲಿ ದೇವನಲಿ
ಪಡೆದಪ್ಪನಾಗು ಎಂದು ॥

"…. ಆ ಹರಕೆ ಸಾರ್ಥಕವಾಗಿ ಮಧುರಚೆನ್ನರು ನಿಜವಾಗಿಯೂ ಪಡೆದಪ್ಪನಾಗಿ ನಿಂತರು. ಅದಲ್ಲದೆ 'ಈ ನಾಡು ಅವನ ಹೊಲ, ಇದರ ಒಕ್ಕಲಿಗನವ, ನಾ ನೀನು ರಂಟೆಕುಂಟೆ' ಎಂಬ ಹೂಣಿಕೆ ತೊಟ್ಟು ನಿಂತರು. ಅದರಿಂದ ಕನ್ನಡದಲ್ಲಿ ಹೊಸ ಕಾವ್ಯದ ಕೃಷಿ ನಡೆಯಿತು. (ಈ ಗೆಳೆಯರಿಬ್ಬರು) ಸೋಲಿಗೆ ಮೃತ್ಯುಲೋಕದ ಸೊಲ್ಲೆಂದರು; ಅದು ಹುಂಬರ ಗುಲ್ಲೆಂದರು.

ಸೋಲುವವ ಶರಣನಲ್ಲ, ಗೆಲುವೇ ನಮ್ಮ ನಲ್ಲನ ಸೊಲ್ಲೆಂದರು. ಅವರಿಬ್ಬರಿಗೂ ಮೀಸಲಾದ ಬಿರುದು ಯಾವುದೆಂದರೆ –

ಉಸುರು ಉಸುರಿಗೆ ಅವನ ಹೆಸರು ಸಾರುತ್ತಿರುವ
ಗಾಳಿಯಂದದಿ ನಾವು ಚಲಿಸಬೇಕು.
ಹೆಸರು ಹೆಸರಿಗೆ ಅವನ ಕುಸುರು ತೋರುವ ಹಾಗೆ
ಬೆಳಕನ್ನು ಸುರಿಸಬೇಕು.

"ಈ ಬಗೆಯಾಗಿ ಒಂದು ಬೊಡ್ಡೆಗೆ ಒಡೆದ ಎರಡು ಟಿಸಿಲುಗಳಂತೆ 32 ವರುಷ ಉತ್ತರೋತ್ತರವಾದ ಆತ್ಮೀಯತೆಯಿಂದ ಬಾಳಿ ಬದುಕಿದ ಆದರ್ಶವು ಬ್ರಾಹ್ಮಣ–ಲಿಂಗಾಯತರು ಕೂಡಿಕೊಂಡು ಬಾಳುವುದಕ್ಕೆ ಶಕ್ಯವೆನ್ನುವ ಮಾತಿಗೆ ಭರವಸೆ ಕೊಡಲಾರದೇ?..."

ಚೆನ್ನಮಲ್ಲರ ಮನಃಪ್ರಕೃತಿಯೋ ಅತ್ಯಂತ ಕೋಮಲ, ದೇಹ ಪ್ರಕೃತಿಯೋ ಅತ್ಯಂತ ದುರ್ಬಲ. ಎನಿಮಾ ಇಲ್ಲದೆ ತಿಂಗಳುಗಟ್ಟಲೆ ವರ್ಷಗಟ್ಟಲೆ ಸುಖ ಶೌಚವಿಲ್ಲ. ಹೊಲ–ಮನೆ–ಹಳ್ಳಿ ಇತ್ಯಾದಿ ಪರಿಸರವೂ ಅನುತ್ತೇಜಕ. ಇಂತಹದರಲ್ಲಿಯೂ ಮುಂದಿರಿಸಿದ ಧ್ಯೇಯದತ್ತ ಸಾಗಲು ಎಂತಹ ಆತಂಕಗಳು ಬಂದರೂ ಅವನ್ನು ಕೊಡಹಿ ಕೆಡಹಿ ಮುನ್ನುಗ್ಗುವ ಅವರ ಮನೋಧೈರ್ಯ ಪ್ರಶಂಸನೀಯ. ಅಂತಃಕರಣದ ಕೋಮಲತೆಗೆ ನಿಶ್ಚಿತ ಬುದ್ಧಿಯ (ಇದಕ್ಕೇ ಗೀತೆ ಕೊಟ್ಟ ಹೆಸರು 'ವ್ಯವಸಾಯಾತ್ಮಿಕಾ ಬುದ್ಧಿ') ಬೆಂಬಲ; ಇದುವೆ ಚೆನ್ನಮಲ್ಲರ ಯಶಸ್ಸಿನ ಗುಟ್ಟು. ಚೆನ್ನಮಲ್ಲನೊಡನೆ ನಾನು ಸು. ಒಂದು ವಾರ ಸವದತ್ತಿಯ ಎಲ್ಲಮ್ಮನ ಗುಡ್ಡ, ಉಗಾರ, ಮುನವಳ್ಳಿ, ಹೂಲಿ, ಒಡಕುಹೊಳೆಗಳಿಗೆ ಬಹುಪಾಲು ಕಾಲ್ನಡಿಗೆಯಿಂದಲೇ ಹೋಗಿಬಂದುದರ ನೆನಪು ಇನ್ನೂ ಅಚ್ಚಳಿಯದೆ ಇದೆ. ಆತ ಹಳೆಗನ್ನಡದಲ್ಲಿ ಕ್ಲಿಷ್ಟ ಶಿಲಾಶಾಸನಗಳನ್ನು ಓದಿ ತಿಳಿದುಕೊಳ್ಳುವ ಕಲೆಯನ್ನು ಹಸ್ತಗತಮಾಡಿಕೊಂಡಿದ್ದ; ಹೂಲಿ ಮಠದ ಸ್ವಾಮಿಗಳ ಜೊತೆಯಲ್ಲಿ ವೀರಶೈವ ಮತದ ಮೇಲೆ ಕಾಳಾಮುಖರ ಹಾಗೂ ಕಾಶ್ಮೀರ ಶೈವದ ಪ್ರಭಾವ ಇತ್ಯಾದಿ ಸೂಕ್ಷ್ಮ ಸಂಶೋಧನ ವಿಷಯಕ ಚರ್ಚೆ ನಡೆಯಿಸುತ್ತಿದ್ದ; ಕನ್ನಡ ಸಂಸ್ಕೃತಿಯ ಹಲವು ಅಂಗಗಳ ಆಳವಾದ ವ್ಯಾಸಂಗಿಯಾಗಿದ್ದ: ಇದನ್ನೆಲ್ಲ ನಾನು ಪ್ರತ್ಯಕ್ಷ ಅನುಭವದಿಂದ ಮನಗಂಡಿದ್ದೇನೆ. ಬೈಬಲ್, ಶ್ರೀ ರಾಮಕೃಷ್ಣರ ಬೋಧಾಮೃತ,

ಸ್ವಾಮಿ ವಿವೇಕಾನಂದರ ಜ್ಞಾನ–ಕರ್ಮ–ಭಕ್ತಿ–ರಾಜಯೋಗ ವಿಷಯಕ ಕೃತಿಗಳು, ಶ್ರೀ ಅರವಿಂದರ ಮೌಲಿಕ ಗ್ರಂಥಗಳನ್ನು ಮೂಲದಲ್ಲಿಯೆ ಓದಬೇಕೆಂಬ ಹಂಬಲದಿಂದ ಇಂಗ್ಲೀಷಿನ ವ್ಯಾಸಂಗ, ಶ್ರೀ ಶಂಕರಾಚಾರ್ಯರ ಕೃತಿಗಳು, ಯೋಗ ವಾಸಿಷ್ಠ, ಇಂಗ್ಲಿಷ್–ಹಿಂದೀ–ಮರಾಠಿಯಲ್ಲಿಯ ಅನುಭಾವ ಸಾಹಿತ್ಯ – ಈ ಹಾಗೂ ಇನ್ನೂ ಎಷ್ಟೋ ವಿಷಯಗಳನ್ನು ಆತನು ಆಮರಣ ಮೆಲಕುಹಾಕುತ್ತಲೇ ಇದ್ದ. ಪಾಂಡೀಚೇರಿಯ ಯಾತ್ರೆಗಳ ಸದುಪಯೋಗ ಮಾಡಿಕೊಂಡು ತಮಿಳಿನಲ್ಲಿ ಮಾತನಾಡುವುದನ್ನೂ ಅದರಲ್ಲಿಯ ಸಾಹಿತ್ಯದ ರಸಾಸ್ವಾದನೆ ಮಾಡುವುದನ್ನೂ ಕಲಿತಿದ್ದ.

ಎಷ್ಟೋ ಸಲ ಆಶ್ರಮಕ್ಕೆ ಪತ್ರ ಬರೆದು ಕೊನೆಗೊಮ್ಮೆ (ಆಗಸ್ಟ್ 15, 1938) ಅನುಮತಿ ಸಿಕ್ಕಿತು – ದರ್ಶನಕ್ಕೆ ಬರಲು. ಸಂದರ್ಶನದ ದಿನ ಹೂ ಹಾಗೂ ಮಾಲೆಗಳನ್ನು ತೆಗೆದುಕೊಂಡು ಶ್ರೀ ಅರವಿಂದ–ಶ್ರೀಮಾತೆಯವರು ಕುಳಿತಿರುವ ಕೋಣೆಯ ಬಾಗಿಲ ಕಡೆಗೆ ಸಾಗಿದಾಗ ತಮ್ಮ "ಅರ್ಹತೆ – ಅನರ್ಹತೆಗಳನ್ನು ಬಗೆದು" ನಿರ್ವಿಣ್ಣರಾಗಿ ಹೋದರು ಶ್ರೀ ಚೆನ್ನಮಲ್ಲರು, "ಶ್ರೀ ಭಗವಾನರ ಹತ್ತಿರವೇ ಹೋದಾಗ ಗಟ್ಟಿ ಜೀವಮಾಡಿ ಕಣ್ದೆರೆದು ನೋಡಿದೆನು. ಆಹಾ! ಭಗವಾನ್ ಶ್ರೀ ಅರವಿಂದರು! ಅಲ್ಲಿಯೇ ಅವರ ಬಲಬದಿಗೆ ಜಗಜ್ಜನನಿ! ಎಲ್ಲಿಲ್ಲದ ಬವಳಿಕೆ ಆವರಿಸಿದ್ದರಿಂದ ನಿಂತಲ್ಲಿಯೇ ಕುಕ್ಕರಿಸಿದೆನು. ಬಿದ್ದಲ್ಲಿಯೇ ಗಳಗಳನೆ ಅಳತೊಡಗಿದೆನು. ನನ್ನ ಹಿಂದೆಯೇ ಇದ್ದ ಗದುಗಿನ ವಿಸನಜಿ ಬಾಯಿಯವರು ನನ್ನ ರಟ್ಟೆಯಲ್ಲಿ ಕೈಹಾಕಿ ಎಬ್ಬಿಸಿ ನಿಲ್ಲಿಸಿದರು. ತಲೆಯ ಮೇಲೆ ಕೈಯಾಡಿಸುತ್ತ ಸಾಂತ್ವನಗೊಳಿಸಿದರು. ತುಂಬ ಭಯದಿಂದಲೇ ಕಣ್ಣು ತೆರೆದು ಕೈಯೊಳಗಿನ ಹೂಮಾಲೆಗಳನ್ನು 'ತಾಯಿ ತಂದೆ'ಗಳ ಸನ್ನಿಧಿಗೆ ಅರ್ಪಿಸಿ ಪಾದಕ್ಕೆರಗಿ ಮುಂದೆ ಸಾಗಿದೆನು......" ಮತ್ತೆರಡು ದಿನ ನಿಂತು ಶ್ರೀ ತಾಯಿಯ ದರ್ಶನಗಳನ್ನೆಲ್ಲ ಪಡೆದು ಊರಿಗೆ ಮರಳಿದರು ಚೆನ್ನಮಲ್ಲರು. ತಮ್ಮ ಆರಾಧ್ಯ ದೈವತವ ಸಾನ್ನಿಧ್ಯದಲ್ಲಿಯೂ ಅವರ ಭಾವಾಕುಲತೆ ಅವರನ್ನು ಹೇಗೆ ಹಣ್ಣು ಮಾಡಿತೆಂಬುದಕ್ಕೆ ಇದೊಂದು ನಿದರ್ಶನೆ. ಮರಳಿಬಂದವರೆ ಮತ್ತೆ 'The Dark Night of the Soul (ಜೀವಾತ್ಮನ ಕಾಳರಾತ್ರಿ),' ಯೋಗ ವಾಸಿಷ್ಠದ ಸಂಕ್ಷಿಪ್ತ ಆವೃತ್ತಿ, ಜೀವನ್ಮುಕ್ತಿ ವಿವೇಕ, AE (ಏಈ) ಕವಿಯ 'Candle of the Vision (ದರ್ಶನ ದೀಪ),' ಶ್ರೀ ಅರವಿಂದರ 'Lights on the Yoga (ಯೋಗ ಪ್ರದೀಪ),' ಭಗವದ್ಗೀತೆ

ಇತ್ಯಾದಿ ಸದ್ಗ್ರಂಥಗಳ ಅಧ್ಯಯನ ಹಾಗೂ ಆ ಜಾಡಿನಲ್ಲಿ ಧ್ಯಾನಾನುಭವದ ಪ್ರಯತ್ನ ಒಂದೇ ಸವನೆ ಸಾಗಿತು. ಆ ಮುಂದೆ 2 ವರ್ಷ ದರ್ಶನದ ಅನುಮತಿ ಸಿಕ್ಕಲಿಲ್ಲ. ಆದರೂ ನಡುನಡುವೆ ಆಶ್ರಮಕ್ಕೆ ಶ್ರೀಮಾತೆಯವರ – ದೈನಂದಿನ ದರ್ಶನಗಳಾದರೂ ಲಭಿಸುವವೆಂದು ಹೋಗಿ ಬರುತ್ತಿದ್ದರು. 1941 ರಿಂದ ಒಂದೆರಡು ವರ್ಷ ಶ್ರೀ ಅರವಿಂದರ ದರ್ಶನಕ್ಕೆ ವರ್ಷದಲ್ಲಿ ಒಂದೆರಡು ಸಾರೆ, ಆ ಮೇಲೆ ಕೊನೆಯವರೆಗೆ ಬಹುಶಃ ಪ್ರತಿ ವರುಷ ಮೂರು ದರ್ಶನಗಳಿಗೆ ಹೋಗತೊಡಗಿದರು. ಅವರ ಅನುಭವದ ಪ್ರಯತ್ನ ತುಂಬಾ ಸಾಗಿತು. ಸಾಧನ ಮಾರ್ಗದಲ್ಲಿ ಪ್ರಗತಿ ಬಹು ವೇಗದಿಂದ ಸಾಗಿತು. ತಮ್ಮ ಆಧ್ಯಾತ್ಮಿಕ ಮಹತ್ತ್ವಾಕಾಂಕ್ಷೆಗಾಗಿ ಶ್ರೀ ತಾಯಿಯವರನ್ನು ಸರ್ವ ಸಮರ್ಪಣ ಭಾವದಿಂದ ಪ್ರಾರ್ಥಿಸಿದ ಫಲವಾಗಿ ಗುರಮ್ಮ ತಾಯಿ ಎಂಬ ಯೋಗಿನಿಯ ದರ್ಶನ; ಇವರನ್ನು ಕಂಡಕೂಡಲೆ "ಪರಮಹಂಸರಿಗೆ ಭೈರವೀ ಬ್ರಾಹ್ಮಣಿ ಇದ್ದ ಹಾಗೆ ನಾನು ನಿನ್ನ ಬೆನ್ನ ಮೇಲೆ ಇರುವೆನೆಂದು ತಿಳಿ" ಎಂದು ಅವರು ಎಲ್ಲರೆದುರಿಗೆ ಬಾಯಿಬಿಚ್ಚಿ ಅಂದುಬಿಟ್ಟುದು; ಅವರಿಂದ ಷಣ್ಮುಖೀ ಮುದ್ರೆ, ಸರಳ ಪ್ರಾಣಾಯಾಮ, ಸರಳ ಧ್ಯಾನಗಳ ಪಾಠ. ಇದರಿಂದ ಅನೇಕ ಅನುಭವಗಳ ಪ್ರಾಪ್ತಿ. ಇವುಗಳ ಪ್ರತ್ಯಂತರ ಕಂಡುಹಿಡಿಯಲು ಮತ್ತೆ 'ಯೋಗೋಪನಿಷತ್ತುಗಳು, ಪರಮಾರ್ಥ ಪ್ರಕಾಶಿಕೆ' ಇತ್ಯಾದಿ ಗ್ರಂಥಗಳ ಪರಿಶೀಲನೆ, ಸಾಂಖ್ಯರ 25 ತತ್ತ್ವಗಳ ಅಧ್ಯಯನದಿಂದ ಸ್ವಂತದ ಅನುಭೂತಿಗಳ ಪರಿಷ್ಕರಣ, ಹಾಗೆಯೆ ವೀರಶೈವರ ಷಟ್–ಸ್ಥಳಗಳಲ್ಲಿಯ ಶಿವಯೋಗ ಪದ್ಧತಿಯ ಪ್ರಮಾಣೀಕರಣ. ಈ ಯೋಗಿನಿಯ ಭೆಟ್ಟಿಯ ತರುವಾಯ ಚೆನ್ನಬಸವ ಸ್ವಾಮಿಗಳೆಂಬುವರ ಆಶ್ರಮದಲ್ಲಿ ಅವರ ಕರೆಯ ಮೇರೆಗೆ ಹೋಗಿ ಅಲ್ಲಿಯೂ ಇವರ ಸಾಕ್ಷಾತ್ಕಾರದ ಮೆಟ್ಟಲಿನ ದೃಢೀಕರಣ. ಮುಂದೆ 1947ರ ನವಂಬರದಲ್ಲಿ ತಿರುವಣ್ಣಾಮಲೈಗೆ ಹೋಗಿ ಅಲ್ಲಿ ಶ್ರೀ ರಮಣ ಮಹರ್ಷಿಗಳ ದರ್ಶನ. ಪಾಂಡಿಚೇರಿಗೆ ಮುಂದರಿದು ವಿಭೂತಿದ್ವಯರ ದರ್ಶನ ಪಡೆದು, ಮರಳಿ ಊರು ಸೇರಿ ಥಿಯಾಸಾಫಿಸ್ಟ್ ಗ್ರಂಥಗಳ ವಾಚನ. ಇಷ್ಟೆಲ್ಲ ನಡೆದರೂ ಮುಖ್ಯವಾಗಿ ಅವರ ಸ್ಥಾಯೀಭಾವ ಶ್ರೀ ಬೇಂದ್ರೆಯವರ ಗೆಳೆತನದ ಸಲಹೆಯ ಮೇರೆಗೆ 'ಶ್ರೀಮಾತಾರವಿಂದರ ಚರಣಗಳಲ್ಲಿ ಸರ್ವಾರ್ಪಣ'ವೇ ಆಗಿತ್ತು –

ನನ್ನಯ ಜನ್ಮವು ನಿಮಗೇ ।
ನನ್ನಯ ಮನ ದೇಹ ಧನಗಳೆಲ್ಲವು ನಿಮಗೇ ॥

ನನ್ನಯ ಶಕ್ತಿಯು ನಿಮಗೇ ।
ನನ್ನೊಳ ಹೊರಗು ಎಲ್ಲ ಅರ್ಪಿತ ನಿಮಗೇ ॥

ಎಂದು ಹಾಡಿದರು. ಈ ಸಾಧನೆಯ ಫಲವಾಗಿ –

ದೇವನ ಇರವು ಆತನ ಇರವು
ಜೀವನ ಒಳಗಿನ ಶಕ್ತಿಯ ಅರಿವು
ಮಾತೆಯ ಅರಿವು ಪಿತನಾ ಅರಿವು
ಭ್ರಾತೃಗಳಿರವು ಸಾಧನೆಯರಿವು
ಇಂತೀ ಒಳಗಿನ ಅರಿವುಗಳರಿವು
ಸಂತತ ಕನ್ನಡದೊಳು ಬರೆವರಿವು

ಎಂಬೀ ಸಮಗ್ರ ರೂಪದ ಅರಿವು ಅವರ ಬದುಕನ್ನೆಲ್ಲ ವ್ಯಾಪಿಸಿತು. ಈ ಅನುಭವ ಮಾರ್ಗದಲ್ಲಿ ಅವರು ಕಂಡ ಸತ್ಯಗಳನೇಕ –

ಅನ್ಯದಿ ತನ್ನನೆ ಕಾಂಬುದೆ ಪ್ರೇಮ.
ತನ್ನಂತನ್ಯರ ನೋಳ್ಪುದೆ ಪ್ರೇಮ.
ಆತನ ಮಕ್ಕಳು ತಿಳಿ ನಾವೆಲ್ಲಾ
ಆತನ ಬಿಡೆ ನಾವೇನೂ ಅಲ್ಲ.
ಸೈಗುಡುನಾತನು ಆತನೆ ಸ್ವಾಮಿ
ಕೈಗೂಡಿಸುವವಳೀತಳೆ ಪ್ರೇಮಿ
ಆತನ ಅನುಮತಿ ಈತಳ ದಯವು
ಚೇತನವೆಲ್ಲವು ಪರನು ಪ್ರಿಯವು.

ಈ ಕೊನೆಯ ನಾಲ್ಕು ಸಾಲುಗಳಲ್ಲಿ ಶ್ರೀಮಾತಾರವಿಂದರಲ್ಲಿಯ ಅವರ ಅನನ್ಯ ಭಕ್ತಿ ಮೈವೆತ್ತಿ ನಿಂತಿದೆ.

ಮಧುರಚೆನ್ನರ ಮಾರ್ಗದರ್ಶನದ ಫಲವಾಗಿ ಹಲಸಂಗಿ–ಚಡಚಣ–ಹತ್ತರಕಿ–ಸಾಲೊಟಗಿ–ಹತಗುಣಕಿ ಇತ್ಯಾದಿ ಗ್ರಾಮ ವಾಸಿಗಳಾದ ವಿಜಾಪುರದ

ನಾಡಿನ ಅವರ ಕರಳುಬಳ್ಳಿಯ ಹಲವಾರು ಸ್ನೇಹಿತರು ಪಾಂಡೀಚೇರಿಯ ಯಾತ್ರೆಯನ್ನು ನಿಯಮಿತವಾಗಿ ಮಾಡತೊಡಗಿದರು. ಶ್ರೀ ಅರವಿಂದಾಶ್ರಮದ ರೀತಿನೀತಿಗಳನ್ನು ತಮ್ಮ ಹಳ್ಳಿಗಾಡಿನಲ್ಲಿಯೂ ಬೇರೂರಿಸಬೇಕೆಂದು ಸಂಕಲ್ಪಿಸಿ, ತಾವಿರುವ ಗ್ರಾಮದಲ್ಲಿಯೇ ಒಂದೊಂದು ಪೂಜಾ ಮಂದಿರವನ್ನು ಏರ್ಪಡಿಸಿ ತಮ್ಮ ತಮ್ಮ ಅನುಕೂಲತೆಯಂತೆ ಆಶ್ರಮದಲ್ಲಿಯಂತೆ ಮೌನ–ಧ್ಯಾನ–ಗ್ರಂಥ ಪಾರಾಯಣ–ಸ್ವಚ್ಛತೆ–ಓರಣ–ಶಿಸ್ತು–ಅಚ್ಚುಕಟ್ಟು ಅಡಿಗೆ ಮನೆಯ ಸಂದಿಗೊಂದಿಯಲ್ಲಿಯೂ ಸಾಮೂಹಿಕ ಪ್ರಸಾದ ಸೇವನೆಯಲ್ಲಿಯೂ ಅದೇ ನಯ–ವಿನಯ–ಗಾಂಭೀರ್ಯ–ಅಚ್ಚುಕಟ್ಟು ಇವೆಲ್ಲ ಸ್ಥಿರವಾಗಿ ನೆಲಸುವಂತೆ ಶ್ರಮಿಸಿ ಬಹುಮಟ್ಟಿಗೆ ಯಶಸ್ವಿಯಾದರು. ಇದರ ಮುಂದಿನ ಹೆಜ್ಜೆಯೆ ವಿಜಾಪುರ ಜಿಲ್ಲೆಯೊಳಗಿನ ಈ ವಿವಿಧ ಶ್ರೀ ಅರವಿಂದ ಮಂಡಳಗಳ ಸಾಮೂಹಿಕ ವಾರ್ಷಿಕೋತ್ಸವಗಳ ಏರ್ಪಾಡು. ಶ್ರೀ ಅರವಿಂದಾಶ್ರಮದ ಹಿರಿಯ ಸಾಧಕರಾದ ಶ್ರೀ ಜಾಯ್ ಸ್ಮಿಥ್ ಎಂಬವರು 1956–57ರಲ್ಲಿ ಹದಿನಾರು ತಿಂಗಳು ಅಖಿಲ ಭಾರತ ಪ್ರವಾಸ ಕೈಕೊಂಡು ಸುಮಾರು 56 ಕೇಂದ್ರಗಳಿಗೆ ಭೆಟ್ಟಿಯಿತ್ತು ತಮ್ಮ ವರದಿಯನ್ನು ಶ್ರೀಮಾತೆಯವರಿಗೆ ಅರ್ಪಿಸಿದಾಗ ಅದರ ಮೊದಲನೆಯ ಪ್ಯಾರಾದಲ್ಲಿಯೇ ತಾವು ಭೆಟ್ಟಿ ಕೊಟ್ಟ 56 ಕೇಂದ್ರಗಳಲ್ಲಿ ಕರ್ನಾಟಕದ 12 ಗ್ರಾಮ ಕೇಂದ್ರಗಳಿಗೆ ಪ್ರಥಮ ಪ್ರಾಶಸ್ತ್ಯ ಕೊಟ್ಟಿರುವರು. “ಈ ಕೇಂದ್ರಗಳು ನಮ್ಮ ದಿವಂಗತ ಗುರುಭಾಯಿ ಮಧುರಚೆನ್ನರ ಭಕ್ತ್ಯುತ್ಸಾಹಯುತ ಪ್ರಯತ್ನಗಳ ಫಲವಾಗಿಯೇ ಜೀವದುಂಬಿ ನಿಂತಿವೆಯೆಂದು ಕೇಳಿದ್ದೇನೆ” ಎಂದವರು ಅಂದಿರುವರು. “ದೈನಂದಿನ ಸಭೆ, ವಾರಕ್ಕೊಮ್ಮೆ ಹೆಚ್ಚು ಕಾಲಾವಧಿಯ ಕೂಟ, ತಿಂಗಳಿಗೊಮ್ಮೆ ಇಡೀ ದಿನ ಒಗ್ಗೂಡುವಿಕೆ, ಕೊನೆಗೆ ವರ್ಷಕ್ಕೊಮ್ಮೆ ಸಂಭ್ರಮದ ಸಮ್ಮಿಲನ – ಯಾವುದಕ್ಕೆ ಆಶ್ರಮದ ಹಿರಿಯ ಸಾಧಕರೊಬ್ಬರು ಆಗಮಿಸುವರೋ ಅಂಥದು” ಎಂಬುದಾಗಿ ಈ ಗ್ರಾಮಮಂಡಳಗಳ ಕಾರ್ಯಕ್ರಮವನ್ನು ಸಹರ್ಷವಾಗಿ ಬಣ್ಣಿಸಿದ್ದಾರೆ. ಅವರ ಮನಸ್ಸಿನ ಮೇಲೆ ತುಂಬಾ ಪರಿಣಾಮ ಮಾಡಿದ ಮುಖ್ಯಾಂಶವೆಂದರೆ, ಆ ಹಿರಿಯ ಸಾಧಕರ ಹೇಳಿಕೆಯ ಮೇರೆಗೆ “The Sri Aurobindo Centres in these villages are a powerful influence in the total life of the area (ಈ ಹಳ್ಳಿಗಳಲ್ಲಿಯ ಶ್ರೀಅರವಿಂದ ಕೇಂದ್ರಗಳು ಆಯಾ ಭಾಗದ ಒಟ್ಟು ಜೀವನದ ಮೇಲೆ ಸಬಲ ಪ್ರಭಾವ ಬೀರಿವೆ)” ಎಂಬ

ಅನುಭವೋಕ್ತಿ; ಉಳಿದ 44 ಕೇಂದ್ರಗಳು ನಗರಗಳಲ್ಲಿದ್ದರೆ ಈ 12 ಹಳ್ಳಿವಾಡದಲ್ಲಿ ಬೇರೂರಿ ಮರವಾಗಿ ಬೆಳೆದು ಫಲಪ್ರದವಾಗಿವೆಯೆಂಬ ಸರ್ವಜನರ ದೃಕ್ಪಥಕ್ಕೆ ಬರುವ ಸತ್ಯ ಸಂಗತಿ, (ವಿಜಾಪುರದ ಗ್ರಾಮಾಂತರ ಪ್ರದೇಶದಲ್ಲಿಯ ಈ ಪವಾಡದ ವರ್ಣನೆ ಹುಬ್ಬಳ್ಳಿಯ 'ಕರ್ಮವೀರ' ವಾರಪತ್ರಿಕೆಯ ಆಗಸ್ಟ್ 13, 1972ರ ಶ್ರೀ ಅರವಿಂದರನ್ನು ಕುರಿತೇ ಹೆಚ್ಚಾಗಿರುವ ಸಂಚಿಕೆಯಲ್ಲಿ ಶ್ರೀ ಪ್ರಹ್ಲಾದ ನರೇಗಲ್ಲರ ಹೃದ್ಯ ಶೈಲಿಯಲ್ಲಿ ಬಂದಿದೆ. ಇದರಲ್ಲಿ ಮಧುರಚೆನ್ನರ ಸಮಕಾಲೀನ ಮಿತ್ರರು, ಜೊತೆಗಾರರು, ಅವರ ಪತ್ನಿ ಬಸಮ್ಮ, ಮಕ್ಕಳು, ಆಪ್ತೇಷ್ಟರು ಇತ್ಯಾದಿ ಹಲವಾರು ವ್ಯಕ್ತಿಗಳ ಹೃದಯಸ್ಪರ್ಶಿ 'ಸಂದರ್ಶನ'ಗಳು ಬಂದಿವೆ.) ಮಧುರಚೆನ್ನರ ಪುಣ್ಯ ಬಲದಿಂದಲೇ ಶ್ರೀ ಅರವಿಂದರ ಪವಿತ್ರಾವಶೇಷಗಳು ತಮ್ಮ ಕರ್ನಾಟಕ ರಾಜ್ಯಕ್ಕೆ, ತಮ್ಮ ಜಿಲ್ಲೆಗೆ, ತಮ್ಮೂರಾದ ಹಲಸಂಗಿಗೆ ಸಮಾರಂಭ ಪೂರ್ವಕವಾಗಿ ಬಂದು ಪ್ರತಿಷ್ಠಾಪನೆಗೊಂಡುದು ತಮ್ಮದೆಂತಹ ಸೌಭಾಗ್ಯ, ತಾವೆನಿತು ಧನ್ಯ ಧನ್ಯ ಎಂಬ ಅನಂದೋದ್ಗಾರಗಳು ಅವರ ಹೃದಯದಾಳದಿಂದ ಬರುತ್ತಿರುವುದೇ ಮಧುರಚೆನ್ನರ ತಪಸ್ಸು ಸಫಲವಾದುದಕ್ಕೆ ಸಾಕ್ಷಿಯಾಗಿದೆ.

... ಮುಂದುವರೆಯುತ್ತದೆ

# ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್
## ಪ್ರಕಟವಾಗಿರುವ ಪುಸ್ತಕಗಳ ಪಟ್ಟಿ

| ಕ್ರಮ ಸಂಖ್ಯೆ | ಕೃತಿ ಹೆಸರು |
|---|---|
| 1 | ಸಮಗ್ರ ಶಿಕ್ಷಣ |
| 2 | ಶ್ರೀ ಅರವಿಂದರು ದಿವ್ಯ ಜೀವನ |
| 3 | ಶ್ರೀ ಅರವಿಂದರು ಭಾರತೀಯ ಧರ್ಮ ಪರಂಪರೆ ಮತ್ತು ಭಗವಾನ್ ಶ್ರೀ ಅರವಿಂದರ ದರ್ಶನ |
| 4 | ಶ್ರೀ ಮಾತಾರವಿಂದರ ಪೂರ್ಣಯೋಗ |
| 5 | ಪ್ರಾರ್ಥನಾ ಪದ್ಯಗಳು |
| 6 | ರವಿ ಬೆಳಗಿದ ಪಥ (ಶ್ರೀಮಾತೆಯವರ ವಚನವೇದ ಸಂಕಲನ) |
| 7 | ನವ್ವೆಂಬರ್ 24, 1926 ಅಧಿಮಾನಸ ಪ್ರಜ್ಞೆಯ ಅವರೋಹಣ ಶ್ರೀ ಅರವಿಂದರ ಹಾಗೂ ಶ್ರೀಮಾತೆಯವರ ದೃಷ್ಟಿಯಲ್ಲಿ ಸಿದ್ಧಿದಿನದ ಮಹತ್ವ |
| 8 | ಶ್ರೀ ಅರವಿಂದರು (ಒಂದು ಸಂಕ್ಷಿಪ್ತ ಪರಿಚಯ) |
| 9 | ಶ್ರೀಮಾತೆ (ಒಂದು ಸಂಕ್ಷಿಪ್ತ ಪರಿಚಯ) |
| 10 | ಕೇಂಬ್ರಿಜ್‌ನ ಸುಗಂಧಿತ ಪುಷ್ಪ (ಮಾನವತೆಗೆ ಶ್ರೀ ಅರವಿಂದರ ಕೊಡುಗೆ) |
| 11 | ಅತಿಮಾನಸ ಹಾಗೂ ಹೊಸ ಜಗತ್ತೊಂದರ ಜನನ (ಶ್ರೀಮಾತೆ ಹಾಗೂ ಶ್ರೀ ಅರವಿಂದರ ಬರಹಗಳ ಸಂಕಲನ) |
| 12 | ಭಾರತ ಮತ್ತು ಭರತಮಾತೆಯ ದೈವನಿಯತಿ |
| 13 | ಆದರ್ಶ ಶಿಕ್ಷಕ |
| 14 | ಪೂರ್ಣಯೋಗ |
| 15 | ಶ್ರೀ ಅರವಿಂದರ ಧರ್ಮ ಹಾಗೂ ರಾಷ್ಟ್ರೀಯತ್ವ |
| 16 | ಶ್ರೀಮಾತೆಗೆ 72 (ಬಾಹತ್ತರ) ಕವನಗಳ ಅರ್ಪಣೆ |

| ಕ್ರಮ ಸಂಖ್ಯೆ | ಕೃತಿ ಹೆಸರು |
|---|---|
| 17 | ಶಿಕ್ಷಣ ಕುರಿತು ಶ್ರೀಮಾತಾರವಿಂದರ ವಿಚಾರಧಾರೆ |
| 18 | ಶ್ರೀ ಅರವಿಂದ ದರ್ಶನ |
| 19 | ಶ್ರೀಮಾತೆ ಭಾರತಮಾತೆ |
| 20 | ದುರ್ಗಾಸ್ತೋತ್ರ |
| 21 | ಚಿಂತನಗಳು ಮತ್ತು ಸೂಕ್ತಿಗಳು |
| 22 | ಯೋಗ ಸಮನ್ವಯ |
| 23 | ಶ್ರೀ ಅರವಿಂದಾಶ್ರಮ |
| 24 | ಪ್ರಸೂತಿ ಪೂರ್ವದ ಶಿಕ್ಷಣ ಶೋಭಾಯಮಾನ ಭವಿಷ್ಯತ್ತಿನೆಡೆಗೆ |
| 25 | ಮಗುವನ್ನು ಪೋಷಿಸುವುದು ಹೇಗೆ? |
| 26 | ಸುಪ್ರಮಾನಸದ ಶ್ರೀಮಾತೆ |
| 27 | ಸಾವಿತ್ರಿ (ಶ್ರೀ ಅರವಿಂದರ ಮಹಾಕಾವ್ಯದ ಸಾರಾಂಶ) |
| 28 | ಪೂರ್ಣಯೋಗದ ಪಥದಲ್ಲಿ |
| 29 | ಬೆಳಕಿನ ಕಿರಣಗಳು |
| 30 | 24th November 1926 (Descent of Overmental Consciousness) |
| 31 | ಶ್ರೀ ಅರವಿಂದರ ಸಾವಿತ್ರಿ |
| 32 | ಮಾನುಷ ಚಕ್ರ |
| 33 | ಚೈತ್ಯ ಪುರುಷ |
| 34 | ಭವಾನಿ ಭಾರತಿ |




ವಿದ್ಯುದಾಗರದ ಬದ್ಧ–ತೇಜದಾ ಆರ್ಣವವು ಪರಮ ಶುದ್ಧ
ಆಕಾರರಹಿತ ಸಾಕಾರಗಳಲಿ ಸಾರೂಪ್ಯ ಸತತವಿದ್ದ,
ಅಚ್ಚರಿಯ ಉಚ್ಚ–ಕಣಗಳಾ ಅಲೆಯು ತಂತಾನೆ ಸಲಿಲಗೊಂಡು
ಆ ಗಣದ–ಕುಣಿತ ಅನುರಣನಗೊಂಡು ಸಂರಚನೆ ಸತತವಿಂದು ॥೧॥
ಈ ಘನದ ಕಲ್ಪ–ಸಂಕಲ್ಪವೀಗ ನಿಯತಿಯಾ ತಾಳಗಳಲಿ,
ಅಣುವಿನಲಿ ಮಿಡಿವ ಘನದ ಸಾಮರ್ಥ್ಯ, ವಿಶ್ರಾಂತ ಪೂರ್ಣವಿಲ್ಲಿ

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ ‘ಸಾವಿತ್ರಿ’; ದಳ 2 ರೇಣು 5 ಪುಟ 155)**

**RNI No. 22511/1971**
No. of Pages **64 + 4 (Cov. Page)**
KAR Reg No.: RNP/KA/BGS/368/2018-2020
Kannada Monthly Magazine
Date of Publication on 7th of Every Month
Permitted to Post 10th of Every Month. Reg. Valid till: 31-12-2020
Licensed to Post at BG PSO, Mysore Road, Bengaluru - 560 026



ಭರವಸೆಯು ಇರದ ಆನಂದ ಬರದ ಈ ಒಂದು ಲೋಕದಲ್ಲಿ
ಉಗ್ರಾತಿ–ಉಗ್ರ ಅಗ್ನಿದಿವ್ಯದಲಿ ತಲ್ಲಣಕೆ ಸಿಲುಕಿ ಅಲ್ಲಿ
ಇದು ದುಷ್ಟಕೂಟ ನಿರಂಕುಶತೆಯಲಿ ಕೊಬ್ಬಿರುವ ಕ್ಷೇತ್ರವಿಲ್ಲಿ,
ಆದರೂ ಸಹಿತ ಅವನಾತ್ಮ–ಜ್ಯೋತಿ ದೇದೀಪ್ಯ ಸತ್ಯದಲ್ಲಿ.

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ ‘ಸಾವಿತ್ರಿ’; ದಳ 2 ರೇಣು 8 ಪುಟ 230)**

Ed. Sri Puttu Parashuram Kulkarni, Pub: Dr. Ajit Sabnis
Ptd. by M/s. Seshaasai e-forms Pvt. Ltd.,
on behalf of Sri Aurobindo Complex Trust, ‘Sri Aurobindo Marg’,
J.P. Nagar I Phase, Bengaluru - 560 078. Phone: 080 - 22449882.